'That leave be granted to introduce the Karnataka Land Reforms (Amendment) Bill, 1984'

Mr. Speaker.— Motion moved, The question is,

'That leave the granted to introduce the Karnataka Land Reforms (Amendment) Bill, 1984'

The motion was adopted and leave was granted.

Hon'ble Minister may introduce the bill.

Sri V. L. Patil.— Sir, I beg to introduce,

,The Karnataka Land Reforms (Amendment) Bill, 1984'

Mr. Speaker.— Bill introduced.

The Karnataka Land Revenue (Amendment) Bill 84
Leave to introduce.

Sri V. L. Patil (Minister for Revenue).— Sir, I move,

'That leave be granted to introduce the Karnataka Land Revene (Amendment) Bill, 1984'

Mr. Speaker.— Motion moved. The question is,

'That leave be granted to introduce the Karnataka Land Revenue (Amendment) Bill, 1984'

The motion was adopted and the leave was granted

Sri V. L Patil.— Sir, I introduce,

'The Karnataka Land Revenue (Amendment) Bill, 1884'.

Mr. Speaker.— Bill introduced.

10. Annexure

The Karnataka Forest (Amendment) Bill, 1984
Motion to Consider

ಶ್ರೀ ಬಿ. ಎ. ಜೀವಿಜಯ (ಅರಣ್ಯ ಖಾತೆಯ ಸಚಿವರು).— ಮಾನ್ಯ ಅಧ್ಯಕ್ಷರೇ, 1984ನೇ ಇಸವಿಯ ಕರ್ನಾಟಕ ಅರಣ್ಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ತಮ್ಮ ಮೂಲಕ ಸದನಕ್ಕೆ ಪ್ರಾರ್ಥಿಸುತ್ತೇನೆ.

The question was proposed

ಶ್ರೀ ಬಿ. ಎ. ಜೀವಿಜಯ.— ಮಾನ್ಯ ಅಧ್ಯಕ್ಷರೇ, ಕರ್ನಾಟಕ ಅರಣ್ಯ ಕಾಯಿದೆ ತಿದ್ದುಪಡಿಯಾಗ ತಕ್ಕಂಥ ಕಾಲದಲ್ಲಿ ಕೇಂದ್ರ ಸರ್ಕಾರ ಅರಣ್ಯ ಕಾಯಿದೆಯ ಸೆಕ್ಷನ್ 68-86-87ರ ಸರಕನ್ನು ಸೇರಿಸಿಕೊಂಡು ಕೃಷಿ ತೈಲ ಉತ್ಪಾದಕರಿಗೆ ಸಂಬಂಧಪಟ್ಟಹಾಗೆ ಶಿಕ್ಷೆ ವಿಧಿಸುವ ಕಾಲದಲ್ಲಿ ವಿಶೇಷ ಕಾರಣಗಳು ಕಂಡುಬಂದಲ್ಲಿ ವಿವೇಚನೆಯಿಂದ ಕೊಡಬೇಕೆಂದು ಸೂಚಿಸಿ, ಅದಕ್ಕೆ ಅನುಗುಣವಾಗಿ ಸೆಕ್ಷನ್ 86-87ಅನ್ನು ಸೂಕ್ತ ತಿದ್ದುಪಡಿ ಮಾಡಲಾಗಿದೆ. ಇದಲ್ಲದೆ 68ರ ಕಾಯಿದೆ ಪ್ರಕಾರ ಅರಣ್ಯ ಅಧಿಕಾರಿಗಳು ಅರಣ್ಯ ವಸ್ತುಗಳನ್ನು ಮುಟ್ಟುಗೋಲು ಹಾಕಿಕೊಂಡಾಗ, ಅಧಿಕಾರವನ್ನು ವಶಪಡಿಸಿಕೊಂಡು ಅಧಿಕಾರಿಗೆ ಮಾತ್ರ ಅಧಿಕಾರವನ್ನು ಕೊಡಲಾಗಿತ್ತು. ಈ ತಿದ್ದುಪಡಿಯ ಪ್ರಕಾರ ಅರಣ್ಯ ಇಲಾಖೆಯ ಇತರ ಅಧಿಕಾರಿಗಳಿಗೂ ಕೂಡ ವಸ್ತುಗಳನ್ನು ವಶಪಡಿಸಿಕೊಳ್ಳಲಿಕ್ಕೆ ಮತ್ತು ಪ್ರಿನ್ಸಿಪಲ್ ವಸ್ತುಗಳು ಇದ್ದರೆ ಅದನ್ನು ತಿದ್ದುಪಡಿಯ ಪ್ರಕಾರ ಇನ್ನಿತರ ಅಧಿಕಾರಿಗಳೂ ಕೂಡ ಅಧಿಕಾರವನ್ನು ಕೊಡಲಾಗಿದೆ. ಹಿಂದೆ ರಾಜ್ಯ ಸರ್ಕಾರದವರು ಹೆಚ್ಚು ಅರಣ್ಯ ಆಧಾರಿತ ಕೈಗಾರಿಕೆಗಳಿಗೆ ಗುತ್ತಿಗೆ ಕೊಡತಕ್ಕಂಥ ಸಂದರ್ಭದಲ್ಲಿ ಅಂದರೆ 20-30 ವರ್ಷಗಳವರೆಗೆ ಕಚ್ಚಾ ವಸ್ತುಗಳನ್ನು ಕೊಡುವ ಒಂದು ಒಪ್ಪಂದ ಮಾಡಿಕೊಂಡಿದ್ದರು. ಈ ಅಮೆಂಡ್‌ಮೆಂಟ್ ಪ್ರಕಾರ ಇದರಲ್ಲಿ ಏನು ಕಚ್ಚಾ ವಸ್ತುಗಳು ಲಾಭದಾಯಕವಾಗ ದಿದ್ದರೂ ಕೊಡ ಪೂರೈಕೆ ಮಾಡಬೇಕು ಎಂದು ಒಂದು ಒಪ್ಪಂದ ಇತ್ತು. ಇದರಿಂದ ಅರಣ್ಯ ನೀತಿಯನ್ನೇ ಬದಲಾಯಿಸಲಿಕ್ಕೆ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ ಆದ್ದರಿಂದ ಈ ರೀತಿ ಮಾಡಿರತಕ್ಕಂಥ ಒಪ್ಪಂದವನ್ನು ರದ್ದು ಮಾಡಿ ಐದು ವರ್ಷಗಳ ಒಪ್ಪಂದವನ್ನು ನಿಗದಿಪಡಿಸಲಿಕ್ಕೆ ಅಮೆಂಡ್‌ಮೆಂಟ್ ತರಲಾಗಿದೆ. ಇದಲ್ಲದೆ ಸಾರ್ವಜನಿಕ ಲೆಕ್ಕಪತ್ರಗಳವರು ಸೆಕ್ಷನ್ 101 (ಎ) ಪ್ರಕಾರ ಅವರ ವರದಿಯಲ್ಲಿ ಕ್ರಿಟಿಸೈಸ್ ಮಾಡಿರುವುದರಿಂದ ಸರ್ಕಾರ ಫೈರ್ ಉಡ್ ಟಿಂಬರ್‌ಗೆ ಸರ್ಕಾರದ ಲೀಸ್ ಅಗ್ರಿಮೆಂಟ್ ಡಾಕ್ಯುಮೆಂಟ್ 5 ವರ್ಷ ಅವಧಿಗೆ ಮೀರಕೂಡದು ಎಂದು ಸಲಹೆ ಮಾಡಿದ್ದಾರೆ. 1981ನೇ ಇಸವಿಯಲ್ಲಿ 19-2-1981ರಲ್ಲಿ

ನಿಗದಿ ಪಡಿಸಿದ ದರವನ್ನು ಸರ್ಕಾರದವರು ಜಾರಿಗೆ ತರದೇ ಇದ್ದುದರಿಂದ 29-2-82ರಲ್ಲಿ ಪುನಃ ಪರಿಶೀಲನೆ ಮಾಡಿದ್ದರಿಂದ ಈ 16 ತಿಂಗಳ ಅವಧಿಯಲ್ಲಿ ಬಹಳ ವ್ಯತ್ಯಾಸವಾಯಿತು. ಇದನ್ನು ಸರಿಪಡಿಸಲಿಕ್ಕೆ ಈ ಕಲಮನ್ನು ಜಾರಿಗೆ ತರಲಾಗಿದೆ. ಇದರ ಮುಖಾಂತರ ನಮ್ಮ ರಾಜ್ಯ ಸರ್ಕಾರಕ್ಕೆ 9 ಕೋಟಿ ರೂಪಾಯಿ ವರಮಾನ ಬರಲಿದೆ.

ಶ್ರೀ ವೈ. ರಾಮಕೃಷ್ಣ (ಆನೇಕಲ್).— ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮಂತ್ರಿಗಳು ಅರಣ್ಯ ಕಾಯಿದೆಗೆ ಅಮೆಂಡ್‌ಮೆಂಟ್ ತಂದಿದ್ದಾರೆ. ಈಗತಾನೇ ಅವರು ಹೇಳಿದರು. ಭಾರತ ಸರ್ಕಾರದವರು ಕೊಟ್ಟಂತಹ ಕೆಲವಾರು ಸಲಹೆಗಳ ಮೇರೆಗೆ ಸೆಕ್ಷನ್ 68, 86, 87 ಮತ್ತು 104ಕ್ಕೆ ಕೆಲವಾರು ತಿದ್ದುಪಡಿಗಳನ್ನು ತಂದಿದ್ದೇವೆಂದು ಹೇಳಿದ್ದಾರೆ. ಆದರೆ ಅವಕ್ಕೆ ಕೇಂದ್ರ ಸರ್ಕಾರದವರು ಈಗಾಗಲೇ ಅನುಮತಿಯನ್ನು ಕೊಟ್ಟಿದ್ದರೇ ? ಅನುಮತಿ ಕೊಟ್ಟಮೇಲೆ ಅದನ್ನು ಹೇಳಿದರೆ ? ಅನುಮತಿಯನ್ನು ಕೊಟ್ಟಿರುವುದಾದರೆ ಇಂಥ ನ್ಯಾಯಾಲಯಗಳಿಗೆ ಕೊಟ್ಟು ಡಿಸ್ಕ್ರಿಷನರಿ ಪವರ್ ಕೊಡಬೇಕೆಂದು ಹೇಳಿದ್ದರೆ ಯಾವಾಗ ಹೇಳಿದರು ಎಂಬುದನ್ನು ತಾವು ಹೇಳಬೇಕು.

ತಾವು ಹೇಳಿದ್ದೀರಿ "The Government of India while giving their assent to the Karnataka Forest (Amendment) Bill, 1980 had suggested amendments to sections 68, 86, 87 of the Karnataka Forest Act to empower the Court to impose lesser sentence of imprisonment and fine. ಅದಕ್ಕೆ ನಾನು ಕೇಳತಕ್ಕಂಥ ಕ್ಲಾರಿಫಿಕೇಷನ್ ಏನು ಎಂದರೆ ಭಾರತ ಸರ್ಕಾರದವರು ಅನುಮತಿಯನ್ನು ಕೊಡತಕ್ಕಂಥ ವೇಳೆಯಲ್ಲಿ ಸೂಚನೆಯನ್ನೇನಾದರೂ ಕೊಟ್ಟಿದ್ದರೆ ತಾವು ಉತ್ತರವನ್ನು ಕೊಡುವಾಗ ಹೇಳಿ.

ಸನ್ಮಾನ್ಯ ಅಧ್ಯಕ್ಷರೇ, ಎಲ್ಲ ಕಾನೂನು ಹಾಗೆ ಇದು ಆಗುವುದಿಲ್ಲ. ಇದು ಒಂದು ವಿಶೇಷವಾದಂಥ ಕಾನೂನು. ಅರಣ್ಯಗಳನ್ನು ಸಂರಕ್ಷಣೆ ಮಾಡತಕ್ಕಂಥದ್ದು. ಅದರಲ್ಲೂ ಕೂಡ ಅರಣ್ಯ ಇಲಾಖೆಯಲ್ಲಿ ಬರತಕ್ಕಂಥ ಗಂಧದ ಮರಗಳ ಸಂರಕ್ಷಣೆ ಮಾಡತಕ್ಕಂಥ ವಿಶೇಷವಾದಂಥ ಕಾಯಿದೆ. ಇದು ಒಂದು ವಿಶೇಷವಾದಂಥ ಕಾಯಿದೆಯಾಗಿರುವುದರಿಂದ ಹಿಂದಿನ ಸರ್ಕಾರ ಇದನ್ನು ಮನಗಂಡು ಒಂದು ವಿಶೇಷವಾದ ಕಾಯಿದೆಯನ್ನೇ ಮಾಡಬೇಕೆಂದು ಹೇಳಿಬಿಟ್ಟು ನಾವು ಅಮೆಂಡ್‌ಮೆಂಟ್ ತಂದೆವು. ಮೂಲವಾಗಿ 1963ರ ರಲ್ಲಿ ಕಾನೂನು ಜಾರಿಗೆ ಬಂದರೂ ಕೂಡ 1974ಕ್ಕೆ ತಿದ್ದುಪಡಿ ತಂದಾಗ ಅದರಲ್ಲಿ ಮೂಲ ಏನು ಇತ್ತು ಎಂದರೆ, ಯಾರು ಕಳ್ಳ ಸಾಕಾಣಿಕೆಯಿಂದ ಗಂಧದ ಮರಗಳನ್ನು ಸಾಗಿಸುವುದಾಗಲಿ ವಸ್ತುಗಳನ್ನು ಕಳುವು ಮಾಡುವುದಾಗಲಿ ಮಾಡಿದರೆ ಕೇವಲ ಎರಡು ಸಾವಿರ ರೂಪಾಯಿಗಳ ದಂಡ ಮತ್ತು ಎರಡು ವರ್ಷಗಳ ಕಾಲ ಕಠಿಣ ಸಜಾವನ್ನು ಅನುಭವಿಸಬೇಕೆಂದು ಇತ್ತು. ಗಂಧದ ಮರದ ಬೆಲೆ ಏನು ಇದೆ ಎನ್ನುವುದನ್ನು ಆಲೋಚನೆ ಮಾಡಬೇಕು. ಗಂಧದ ಮರದ ಬೆಲೆ ಹೇಳಲಿಕ್ಕೆ ಕಷ್ಟವಾಗುತ್ತದೆ. ಎಷ್ಟೋ ಲಕ್ಷ ರೂಪಾಯಿಗಳು ಆಗುತ್ತವೆ, ಎರಡು ಸಾವಿರ ರೂಪಾಯಿಗಳು ಫೈನ್ ಎಂದರೆ ಬಹಳ ಸುಲಭವಾಗಿ ಕೊಟ್ಟುಬಿಡುತ್ತಾರೆ. ಕಳ್ಳತನ ಮಾಡಿದರೆ ಎರಡು ಸಾವಿರ ರೂಪಾಯಿಗಳ ಫೈನ್ ಕೊಡುವುದು ಕಷ್ಟವಾಗುವುದಿಲ್ಲ. ಅದಕ್ಕೋಸ್ಕರವಾಗಿ 1974ರಲ್ಲಿ ಮತ್ತೆ ಅಮೆಂಡ್ ಮಾಡಿ ಐದು ಸಾವಿರ ರೂಪಾಯಿಗಳ ಫೈನ್ ಇರಬೇಕೆಂದು ಮಾಡಿದರೂ ಕೂಡ ಅಪರಾಧ ನಿಲ್ಲಲಿಲ್ಲ. ಎರಡು ಸಾವಿರ ರೂಪಾಯಿಗಳಿಂದ ಐದು ಸಾವಿರ ರೂಪಾಯಿಗಳ ದಂಡ ಮತ್ತು ಎರಡು ವರ್ಷಗಳಿಂದ ಐದು ವರ್ಷಗಳ ಕಠಿಣ ಸಜಾ ಎಂದರೂ ಕೂಡ ಕಳ್ಳ ಸಾಕಾಣಿಕೆ ನಿಲ್ಲಲಿಲ್ಲ. ಅಷ್ಟೇ ಅಲ್ಲ ಈಗ ಗಂಧದ ಮರಗಳನ್ನು ಸಾಗಿಸಲು ಲಾರಿಗಳು ಮತ್ತು ಅವಕ್ಕೆ ತಕ್ಕಂತೆ ಸಿಬ್ಬಂದಿಗಳು ಹೋಗುತ್ತವೆ. ಇದನ್ನು ಒಬ್ಬೊಬ್ಬರೇ ಮಾಡತಕ್ಕಂಥ ಕೆಲಸವಲ್ಲ. ಇವಕ್ಕೆ ಗ್ಯಾಂಗ್ ಇರುತ್ತವೆ. ಈ ಗ್ಯಾಂಗನ್ನು ಹಿಡಿಯಬೇಕೆಂದರೆ ಬಹಳ ಕಷ್ಟವಾಗುತ್ತದೆ. ಈ ವಾಹನಗಳನ್ನು ಸೀಜ್ ಮಾಡಿದರೂ ಲೆಕ್ಕಿಸದೆ ಎರಡು ಲಕ್ಷ, ಮೂರು ಲಕ್ಷ ಬೆಲೆಬಾಳತಕ್ಕಂಥದ್ದು ಹೋದರೂ ಚಿಂತೆ ಇಲ್ಲವೆಂದು ಸಾಮರ್ಥ್ಯದಿಂದ, ಗಮ್ಮತ್ತಿನಿಂದ ಕಳ್ಳಸಾಕಾಣಿಕೆಯನ್ನು ಮಾಡುತ್ತಲೇ ಇರುತ್ತಾರೆ. ಇದರಿಂದಾಗಿ ಸರ್ಕಾರಕ್ಕೆ ಎಷ್ಟೋ ಹಣ ಲುಕ್ಸಾನಾಗುತ್ತದೆಂದು ಮನಗಂಡು ಸರ್ಕಾರ ಈ ಒಂದು ತಿದ್ದುಪಡಿಯನ್ನು ತಂದಿತು. ತಿದ್ದುಪಡಿಯು Section 86 says,

86. Penalty for offence in regard to sandalwood. In any case of a forest offence having reference to the cutting, up-rooting, or removal or damage to, a sandal tree or any part of a sandal tree belonging to Government, the offender shall on conviction, be punishable with imprisonment for a term which may extend to seven years and with fine which may extend to twenty-five thousand rupees.

25 ಸಾವಿರ ರೂಪಾಯಿಗಳಷ್ಟು ಫೈನ್ ಕೊಡಬೇಕು ಮತ್ತು 7 ವರ್ಷ ಸಜಾವನ್ನು ಅನುಭವಿಸಬೇಕು.

"in the case of first offence the term of imprisonment shall not be less than three years and the amount of fine shall not be less than ten thousand rupees"

ಹೀಗೆ ಇಲ್ಲಿ ಮೊದಲನೆಯ ಸಲ ಅಪರಾಧ ಮಾಡಿದರೆ ಏನು ಮಾಡಬೇಕು ಮತ್ತು ಎರಡನೆಯ ಸಲ ಅಪರಾಧ ಮಾಡಿದರೆ ಏನು ಮಾಡಬೇಕು ಎಂಬುದನ್ನು ತೋರಿಸಿದ್ದೇವೆ ಏನು ಮಾಡಿದರೆ ಇದನ್ನು ತಡೆಗಟ್ಟಲು ಸಾಧ್ಯವೆಂಬುವನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿ, ಇಂತಹ ತಪ್ಪು ಮಾಡಿದರೆ ಇಷ್ಟು ಶಿಕ್ಷೆ ವಿಧಿಸಲೇಬೇಕು ಎಂದು ಈ ಶಾಸನ ಸಭೆಯಲ್ಲಿ ಒಂದು ನಿರ್ಣಯ ಮಾಡಲಾಯಿತು. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ, ಕೆಲವರು ಮಾಡತಕ್ಕಂಥ ಈ ಕಳ್ಳತನದ ಮೌಲ್ಯ ಲಕ್ಷ ರೂಪಾಯಿಗಳಿಗಿಂತ ಜಾಸ್ತಿ ಇರುತ್ತದೆ. ಈ ದೇಶದ ಆಸ್ತಿಯನ್ನು ಸಂರಕ್ಷಣೆ ಮಾಡಬೇಕೆಂದುಕೊಂಡು ನಾವು ಇದನ್ನು ಮಾಡಿದ್ದು, ಇಂತಹ ತಪ್ಪು ಮಾಡಿದವರಿಗೆ ಕೋರ್ಟಿನಲ್ಲಿ ಇಷ್ಟೇ ಶಿಕ್ಷೆ ವಿಧಿಸಬೇಕೆಂದು ನಾವು ಕಾನೂನು ಮಾಡಿದ ಮೇಲೆ, ಕೇಂದ್ರ ಸರ್ಕಾರದವರು ಇದನ್ನು ನೋಡಿ ಕೋರ್ಟಿಗಿರುವಂತಹ ಅಧಿಕಾರವನ್ನು ಈ ರೀತಿ ಉಪಯೋಗ ಮಾಡುವುದು ಸೂಕ್ತವಲ್ಲ, ಅವರಿಗೆ ಮೊದಲಿದ್ದ ಅಧಿಕಾರವನ್ನು ವಾಪಸ್ ಕೊಡಿ ಎಂದು ಕೇಂದ್ರದವರು ತಮಗೆ ಹೇಳಿರಬಹುದು. ಆದರೆ ಈ ಹಿಂದಿನ ಘಟನೆಗಳನ್ನು ಜ್ಞಾಪಿಸಿಕೊಂಡಾಗ ಅಂದರೆ ನಾವು ಈ ಮರಗಳ ಕಳ್ಳತನವನ್ನು ನಿಲ್ಲಿಸಬೇಕೆಂದುಕೊಂಡು 1973ರಲ್ಲಿ, 1974ರಲ್ಲಿ ಸೂಕ್ತ ಕಾನೂನುಗಳನ್ನು ನಾವು ಮಾಡಿದರೂ ಸಹ ಸ್ಮಗಲರ್ಸ್ ಈ ಕಾನೂನಿನಡಿಯಲ್ಲಿ ನುಸುಳಿಕೊಂಡು ಕಳ್ಳತನದಿಂದ ಮರವನ್ನು ಸಾಗಾಣಿಕೆ ಮಾಡುತ್ತಲೇ ಇದ್ದರು ನಂತರ ಇದನ್ನು ಯಾವ ರೀತಿಯಿಂದಲಾದರೂ ಮಟ್ಟ ಹಾಕಲೇಬೇಕು ಎಂದುಕೊಂಡು ನಾವು ಈ ಕಾನೂನಿಗೆ ಒಂದು ತಿದ್ದುಪಡಿಯನ್ನು ತಂದೆವು. ಈ ತಿದ್ದುಪಡಿ ಕಾನೂನು ಯಾವ ರೀತಿ ಜಾರಿಯಾಗುತ್ತದೆಂಬುದನ್ನು ತಾವು ಕೆಲವು ವರ್ಷಗಳ ಕಾಲ ನೋಡಬಹುದಾಗಿತ್ತು. ನಾವು ತಂದ ತಿದ್ದುಪಡಿಯಲ್ಲಿ ಕಳ್ಳಸಾಗಾಣಿಕೆ ಮಾಡುವವರಿಗೆ 25 ಸಾವಿರ ರೂಪಾಯಿಗಳ ದಂಡವನ್ನು ವಿಧಿಸಬೇಕು ಮತ್ತು 7 ವರ್ಷಗಳ ಕಾಲ ಜೈಲಿಗೆ ಹಾಕಬೇಕು ಎಂದು ತಿಳಿಸಲಾಗಿತ್ತು. ಇದು ಯಾವ ರೀತಿ ಜಾರಿಗೆ ಬರುತ್ತದೆಂಬುದನ್ನು ನೋಡುವ ಸಲುವಾಗಿ 2-3 ವರ್ಷಗಳ ಕಾಲ ಬಿಡಬಹುದಾಗಿತ್ತು. ಆದರೆ ತಾವು ಇದಕ್ಕೆ ಅವಕಾಶವನ್ನೇ ಕೊಡದೆ ಮತ್ತೆ ಇದಕ್ಕೆ ತಿದ್ದುಪಡಿಯನ್ನು ತಂದಿದ್ದೀರಿ. ಇದರಲ್ಲಿ ಈ ರೀತಿ ಹೇಳಿದ್ದೀರಿ.

"provided further that the court may, for any adequte and special reasons to be mentioned in the judgment, impose a lesser sentence of imprisonment and fine"

ಇಂತಹ ಒಂದು ಅಧಿಕಾರವನ್ನು ತಾವು ಕೋರ್ಟಿಗೆ ಕೊಟ್ಟಿದ್ದೀರಿ. 1963 ರಿಂದ 1973ನೇ ಇಸವಿಯವರೆಗೆ ಇಂತಹ ಒಂದ ಪ್ರಾವಿಷನ್ ಇತ್ತು. ಇದು ಹೊಸದೇನೂ ಅಲ್ಲ. ಇದು ಹೋಯಿತು ದೆವ್ವ ಎಂದರೆ ವಾಪಸ್ ಬಂದೇ ಎಂದು ಹೇಳಿದಂತೆ ಆಯಿತು. ಈ ತಿದ್ದುಪಡಿಯಿಂದ ಇಂತಹ ಪ್ರಕರಣಗಳಲ್ಲಿ ಜಜ್ಜ್‌ಮೆಂಟ್‌ಗಳು ಯಾವ ರೀತಿ ಬರುತ್ತದೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ಇಂತಹ ಪ್ರಕರಣಗಳಲ್ಲಿ ಜಜ್ಜ್‌ಮೆಂಟ್‌ಗಳು ಯಾವ ರೀತಿ ಬರುತ್ತವೆ ಎಂಬುದು ತಮಗೂ ಗೊತ್ತಿದೆ. ಇನ್ನು ಮುಂದೆ ಇದನ್ನು ಎಫೆಕ್ಟೀವ್ ಆಗಿ ಚೆಕ್ ಮಾಡಲು ಏನು ವ್ಯವಸ್ಥೆ ಇದೆ ಎಂಬುದನ್ನು ತಾವು ಯೋಚನೆ ಮಾಡಬೇಕಾಗುತ್ತದೆ. ನಾವು ಮಾಡಿದಂಥ ತಿದ್ದುಪಡಿಯ ಪ್ರಕಾರ ಇದು ಯಾವ ರೀತಿ ನಡೆಯುತ್ತದೆಂಬದನು ತಾವು 2-3 ವರ್ಷಗಳ ಕಾದು ನೋಡಬಹುದಾಗಿತ್ತು. ಈ ಹಿಂದೆ 1963ರಲ್ಲಿ ಮಾಡಿದಂಥ ಕಾನೂನು 1974ರವರೆಗೆ ಜಾರಿಯಲ್ಲಿತ್ತು. ಅದೇರೀತಿ 1974ರಲ್ಲಿ ಮಾಡಿದ ಕಾನೂನು 1982ರವರೆಗೆ ಜಾರಿಯಲ್ಲಿತ್ತು ಆದ್ದರಿಂದ 1982ರಲ್ಲಿ ಮಾಡಿದ ತಿದ್ದುಪಡಿ ಕಾನೂನಿಗೂ ಸ್ವಲ್ಪ ಕಾಲಾವಕಾಶ ಕೊಡಬಹುದಾಗಿತ್ತು. ಆದರೆ ಈಗ ತಾವು ತಂದಿರುವ ತಿದ್ದುಪಡಿ ಪ್ರಕಾರ 5 ಲಕ್ಷ ರೂಪಾಯಿಗಳಷ್ಟು ಬೆಲೆ ಬಾಳುವ ಮರವನ್ನು ಕಳ್ಳತನದಲ್ಲಿ ಸಾಗಿಸಿದವರಿಗೆ ಕಡಿಮೆ ಶಿಕ್ಷೆ ವಿಧಿಸಬಹುದು ಮತ್ತು 5 ಸಾವಿರ ರೂಪಾಯಿಗಳ ಒಂದು ದಂಡವನ್ನು ವಿಧಿಸಬಹುದು ಈ ಕಡಿಮೆ ಶಿಕ್ಷೆಯಿಂದ ಕಳ್ಳಸಾಗಾಣಿಕೆಯನ್ನು ತಡೆಯುವುದು ಕಷ್ಟವಾಗಬಹುದು. ಆದ್ದರಿಂದ ಈ ಮೊದಲಿನ ಕಾನೂನನ್ನೇ ಜಾರಿಯಲ್ಲಿಡಬಹುದಾಗಿತ್ತು. ಅದರಿಂದ ಏನೂ ಆಗುವುದಿಲ್ಲ ಕೇಂದ್ರ ಸರ್ಕಾರದವರ ಒಂದು ಸಲಹೆಯಂತೆ ತಾವು ಇದನ್ನು ಮಾಡಿರುವಂತೆ ಕಾಣುತ್ತದೆ.

ಶ್ರೀ ಹೆಚ್.ಎಲ್. ತಿಮ್ಮೇ ಗೌಡ.—ಶಿಕ್ಷೆವಿಧಿಸುವ ಅಧಿಕಾರ ಕೋರ್ಟಿಗೇ ಇರಲಿ ಎಂದು ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಸಲಹೆ ಮಾಡಿದಾಗ ತಾವೇ ಕಾನೂನು ಮಂತ್ರಿಗಳಾಗಿದ್ದಿರಿ. ಆದ್ದರಿಂದ ಈ ವಿಚಾರದಲ್ಲಿ ತಾವು ಕೇಂದ್ರಕ್ಕೆ ಏನು ಉತ್ತರ ಕೊಟ್ಟಿದ್ದಿರಿ ?

ಶ್ರೀ ವೈ ರಾಮಕೃಷ್ಣ.— ಈ ಬಗ್ಗೆ ಕಾನೂನು ಮಾಡಿ ಕೇಂದ್ರ ಸರ್ಕಾರಕ್ಕೆ ನಾವೇ ಕಳುಹಿಸಿ ಕೊಟ್ಟಿದ್ದು. ಆದರೆ ಕೇಂದ್ರದವರು ರಾಜ್ಯ ಸರ್ಕಾರಕ್ಕೆ ಯಾವಾಗ ಈ ಒಂದು ಸಲಹೆ ಮಾಡಿದರೆಂಬುದು ನನಗೆ ಗೊತ್ತಿಲ್ಲ. ಆದ್ದರಿಂದ ಅವರು ಯಾವಾಗ ಪತ್ರ ಬರೆದರೆಂಬುದನ್ನು ಮಾನ್ಯ ಮಂತ್ರಿಗಳು ತಿಳಿಸ

ಬೇಕೆಂದು ನಾನು ಮೊದಲೇ ಕೇಳಿದ್ದೇನೆ. ಮುಖ್ಯವಾಗಿ ಈ ತಿದ್ದುಪಡಿ ಕಾನೂನನ್ನು ಪುನರ್‌ಪರಿಶೀಲನೆ ಮಾಡುವುದು ಒಳ್ಳೆಯದು. ಈಗ ತಂದಿರುವ ಈ ತಿದ್ದುಪಡಿಯನ್ನು ವಾಪಸ್‌ಪಡೆದು ಇನ್ನೂ 5 ವರ್ಷಗಳ ಕಾಲ ಮೊದಲಿನ ಕಾನೂನನ್ನೇ ಜಾರಿಯಲ್ಲಿಟ್ಟಾಗ ಮಾತ್ರ ಈ ಕಳ್ಳಸಾಗಾಣಿಕೆಯನ್ನು ತಡೆಗಟ್ಟಬಹುದೆಂದು ಸಲಹೆ ಮಾಡುತ್ತೇನೆ.

ಇನ್ನು ಮಾನ್ಯ ಮಂತ್ರಿಗಳು ಇದರಲ್ಲಿ ''seigniorage rates''ನ್ನು ಪ್ರಸ್ತಾಪ ಮಾಡಿದ್ದಾರೆ. ತಾ|| 23-2-1981ಕ್ಕೂ ಹಿಂದೆ ಟಿಂಬರ್ ರೇಟ್ ಬಹಳ ಕಡಿಮೆ ಇದ್ದ ಕಾರಣದಿಂದ ಕೆಲವರು ದುಡ್ಡನ್ನು ಕೊಳ್ಳೆ ಹೊಡೆಯುತ್ತಿದ್ದರು. ಆದ್ದರಿಂದ ಈ ಹಿಂದಿನ ಸರ್ಕಾರ ಅಧಿಕಾರ ವಹಿಸಿಕೊಂಡ ಒಂದು ವರ್ಷದೊಳಗೆ ಈ ಟಿಂಬರ್ ರೇಟನ್ನು ರಿವೈಜ್ ಮಾಡಿತು. ಈ ರೀತಿ ರಿವೈಜ್ ಮಾಡಿದ ದರ ಬಹಳ ಜಾಸ್ತಿ ಎಂದು ದೂರುಗಳು ಬಂದಾಗ ಮತ್ತು ಇದನ್ನೇ ಕೋರ್ಟಿನವರು ಹೇಳಿದಾಗ, ಇವನ್ನು ಪರಿಶೀಲನೆ ಮಾಡಲು ಒಂದು ಅಫಿಷಿಯಲ್ ಕಮಿಟಿಯನ್ನು ನೇಮಕ ಮಾಡಲಾಯಿತು. ದರವನ್ನು ನಿಗದಿ ಮಾಡುವಾಗ ಸಾಮಾನ್ಯವಾಗಿ ನಮ್ಮ ನೆರೆಹೊರೆ ರಾಜ್ಯಗಳಲ್ಲಿ ಏನು ದರಗಳಿವೆ ಎಂಬುದನ್ನು ನೋಡಿಕೊಂಡು ನಿಗದಿ ಮಾಡಲಾಗುತ್ತದೆ. ತ್ಯಾಗದ ಮರ, ಗಂಧದ ಮರ, ಬೀಟೆ ಮರ ಮುಂತಾದ ಬೆಲೆ ಬಾಳುವಂತಹ ಮರಗಳ ದರವನ್ನು ನಿಗದಿ ಮಾಡುವಾಗ, ಅವು ಗಟ್ಟಿಯಾಗಿದ್ದರೆ ಮತ್ತು ಅವುಗಳು ಒಳ್ಳೆಯ ಕೆತ್ತನೆ ಮಾಡಲು ಬರುವಂತಿದ್ದರೆ ಹೆಚ್ಚಿನ ದರವನ್ನು ನಿಗದಿ ಮಾಡಲಾಗುತ್ತದೆ. ಈ ಮರಗಳು ತೂತು ಇಲ್ಲವೇ ಮುಳುಕು ಇಲ್ಲದಿದ್ದರೆ ಒಂದಕ್ಕೆ ನಾಲ್ಕರಷ್ಟು ಬೆಲೆ ಬಾಳುತ್ತವೆ. ಆದ್ದರಿಂದ ಈ ಹಿಂದಿನ ಸರ್ಕಾರ ಈ ಮರಗಳಿಗೆ ಒಂದು ದರವನ್ನು ನಿಗದಿ ಮಾಡಿತು. ಈ ಬಗ್ಗೆ ಒಂದು ಪ್ರಕಟಣೆಯನ್ನು ಸಹ ಹೊರಡಿಸಲಾಯಿತು. ಆದರೆ ಈ ದರ ಬಹಳ ಜಾಸ್ತಿ, ಇಷ್ಟೊಂದು ದರ ಇಂಡಿಯಾ ದೇಶದ ಯಾವ ರಾಜ್ಯಗಳಲ್ಲಿಯೂ ಇಲ್ಲ. ಈ ಹೆಚ್ಚಿನ ದರದಿಂದ ಈ ಮರಗಳನ್ನೇ ಅವಲಂಬಿಸಿರುವಂತಹ ಕೈಗಾರಿಕೆಗಳು ಪ್ರಗತಿ ಹೊಂದುವುದಿಲ್ಲ ಎಂದು ಹೇಳತಕ್ಕಂಥ ಅನೇಕಾನೇಕ ದೂರುಗಳು ಸರ್ಕಾರಕ್ಕೆ ಬಂದವು. ನಂತರ ಈ ಬಗ್ಗೆ ಒಂದು ಅಫಿಷಿಯಲ್ ಕಮಿಟಿಯನ್ನು ನೇಮಕ ಮಾಡಲಾಯಿತು. ಪ್ರತಿಯೊಂದು ಅಂಶಗಳನ್ನು ಕೂಲಂಕುಷವಾಗಿ ಗಮನಿಸಿ ದರಗಳನ್ನು ಯಾವ ರೀತಿ ಹೆಚ್ಚು ಕಡಿಮೆ ಮಾಡಬಹುದೆಂಬ ಬಗ್ಗೆ ವಿಚಾರ ಮಾಡಿ ವರದಿಕೊಡುವಂತೆ ಈ ಕಮಿಟಿಗೆ ತಿಳಿಸಲಾಯಿತು. ಇದರಲ್ಲಿ ಯಾವ ರಾಜಕಾರಣಿಗಳ ಕೈವಾಡವೂ ಇಲ್ಲ. ಈ ಕಮಿಟಿಯವರು ತಮ್ಮ ವರದಿಯನ್ನು ತಾ|| 29-6-1982 ರಂದು ಕೊಟ್ಟರು. ಅದರಲ್ಲಿ ದರಗಳನ್ನು ಯಾವ ರೀತಿ ನಿಗದಿ ಮಾಡಬೇಕೆಂಬ ಬಗ್ಗೆ ಆದೇಶ ಕೊಟ್ಟಿದ್ದರು. ಈ ಕಮಿಟಿಯವರು ಒಂದು ವರ್ಷ 4 ತಿಂಗಳು 6 ದಿವಸದ ನಂತರ ವರದಿ ಕೊಟ್ಟರು. ಆದ್ದರಿಂದ ಅವರು ವರದಿ ಕೊಡುವವರೆಗೂ ಸಹ ಈ ಮೊದಲು ಸರ್ಕಾರದವರು ನಿಗದಿ ಮಾಡಿದ ದರಗಳೇ ಜಾರಿಯಲ್ಲಿರಬೇಕಾಗುತ್ತದೆ. ಆದರೆ ತಾವು ಈಗ ಇದಕ್ಕೆ ಸಂಬಂಧಪಟ್ಟಂತೆ ಕೂಡ ಒಂದು ತಿದ್ದುಪಡಿಯನ್ನು ತಂದಿದ್ದೀರಿ, ಇದನ್ನು ತಂದಿರುವ ಉದ್ದೇಶವಾದರೂ ಏನು ? ಈಗ ಮರದ ಬೆಲೆ ಏನಿದೆ ಎಂಬುದು ತಮಗೂ ಗೊತ್ತಿದೆ. Entire circumstances have been changed now so far as the wood is concerned. ಆದ್ದರಿಂದ ಈ ಒಂದು ಬಾಬಿನಿಂದ ನಮ್ಮ ರಾಜ್ಯ ಸರ್ಕಾರಕ್ಕೆ ಹೆಚ್ಚಿನ ಒಂದು ವರಮಾನ ಬಂದರೆ ಅದನ್ನು ತೆಗೆದುಕೊಳ್ಳಲು ನಾವು ತಯಾರಿರಬೇಕು. ಆದರೆ ತಾವು ಅಫಿಷಿಯಲ್ ಕಮಿಟಿಯವರು ಏನು ದರಗಳನ್ನು ಕಡಿಮೆ ಮಾಡಿದರೋ ಅದನ್ನೇ ಈ ಹಿಂದೆ ಇದ್ದ ದರಗಳಿಗೂ ಅನ್ವಯ ಮಾಡಬೇಕೆಂದು ಹೇಳಲು ಕಾರಣವೇನು ? ಇದಕ್ಕೆ ತಾವು ಉತ್ತರ ಕೊಡಬೇಕಾಗುತ್ತದೆ.

ಮಾನ್ಯ ಅಧ್ಯಕ್ಷರೇ ಈಗ ಎಷ್ಟು ಜನ ಕಂಟ್ರಾಕ್ಟುದಾರರು ಒಂದು ವರ್ಷ ನಾಲ್ಕು ತಿಂಗಳು 6 ದಿವಸಗಳಲ್ಲಿ ಮರವನ್ನು ಕೊಂಡುಕೊಂಡರು ? ಈ ಬಗ್ಗೆ ಅಂಕಿ ಅಂಶಗಳು ಏನಾದರೂ ಇದ್ದರೆ ಮಾನ್ಯ ಮಂತ್ರಿಗಳು ತಿಳಿಸಬೇಕು. ಮತ್ತು ಅವರಿಂದ ರಾಜ್ಯದ ಬೊಕ್ಕಸಕ್ಕೆ ಎಷ್ಟು ಹಣ ಬರಬೇಕಾಗಿದೆ ? ಮತ್ತೆ ಎಷ್ಟು ಹಣ ಇದುವರೆಗೂ ಬಂದಿದೆ ? ಇನ್ನು ಎಷ್ಟು ಹಣ ಬಾಕಿ ಇದೆ ? ಎಂಬುದನ್ನು ಸಹ ನಮಗೆ ತಿಳಿಸಬೇಕು. ಕಾರಣವೇನೆಂದರೆ ಮಾನ್ಯ ಮಂತ್ರಿಗಳು ಮಾತನಾಡುತ್ತಾ ಹೇಳಿದರು, ಇದು ಆ ತಕ್ಷಣ ಜಾರಿಗೆ ಬರುತ್ತದೆ ಎಂದು. ಆ ತಕ್ಷಣ ಏತಕ್ಕೆ ಜಾರಿಗೆಕೊಡಬೇಕು ? ಆ ರೀತಿ ಜಾರಿಗೆ ಕೊಡುವುದಕ್ಕೆ ಯಾವ ಕಾನೂನು ಇದೆ. You have to justify why this Act is applicable with retrospective effect ? ಒಂದು ವೇಳೆ ಜಾರಿಗೆ ಕೊಡಲಿಲ್ಲವೆಂದು ಹೇಳಿದರೆ. ಇಟ್ ಈಸ್ ನಾಟ್ ಇನ್‌ವ್ಯಾಲ್ಯೂಡ್ ಆಗ ಅದು ಕಾನೂನು ಬಾಹಿರವೇನೂ ಅಲ್ಲ ನಾವು ಹಣವನ್ನು ಏಕೆ ಕೊಡಬೇಕು ? ಈ ಬಗ್ಗೆ ಮಾನ್ಯ ಮಂತ್ರಿಗಳು ಬೇಕಾದರೆ ಆಲೋಚನೆ ಮಾಡಲಿ. ಅದೇ ಲೆ ನಾನು ಇದೇ ಸಂದರ್ಭದಲ್ಲಿ ಒಂದು ಸಲಹೆಯನ್ನು ಸಹ ಕೊಡಬಯಸುತ್ತೇನೆ. ಸೀನಿಯರೇಜ್ ರೇಟನ್ನು ತಾವು 23-2-81ರಲ್ಲಿ ಫಿಕ್ಸ್ ಮಾಡಿದ್ದೀರಿ. ಆ ದಿವಸದಿಂದ it may hold good. ಆದ್ದರಿಂದ ಅದನ್ನು ತಾವು ಪುನಃ ಪರಿಶೀಲನೆ ಮಾಡಿ. ಈಗ ನಮ್ಮಲ್ಲಿ ಒಂದು ರೂಪಾಯಿಗೆ ಎಷ್ಟು ಬೆಲೆ ಇದೆ ? ನನಗೆ ತಿಳಿದ ಮಟ್ಟಿಗೆ ಒಂದು ರೂಪಾಯಿಗೆ ಕೇವಲ 21 ಪೈಸೆ ಬೆಲೆ ಇದೆ. 1981ನೇ ಇಸವಿಯಲ್ಲಿ ಹಿಂದಿನ ಸರ್ಕಾರದವರು ಒಂದು ಸೀನಿಯಾರೇಜ್ ರೇಟನ್ನು ಫಿಕ್ಸ್ ಮಾಡಿದಾಗ ಅದನ್ನು ನಿಲ್ಲಿಸುವುದಕ್ಕೆ ಸಾಧ್ಯ

ವಾಯಿತು ಆ ರೀತಿ ಏತಕ್ಕೆ ಮಾಡಿದರು ಅದನ್ನು ಪರಿಶೀಲನೆ ಮಾಡಿ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಇವತ್ತು ನಮ್ಮ ರಾಜ್ಯದ ಅರಣ್ಯ ಸಂಪತ್ತು ನಾಶವಾಗುತ್ತಿದೆ. ನಾವು ಮರವನ್ನು ಬೆಳೆಸತಕ್ಕಂಥ ಜಾಗ ಏನು ಇದೆ ಮತ್ತು ನಾವು ಇವತ್ತು ಯಾವ ರೇಟಿಗೆ ಮಾರಾಟ ಮಾಡುತ್ತಿದ್ದೇವೆ ಅದರ ಪಾಕೆಟ್ಟಿನಲ್ಲಿ ವ್ಯತ್ಯಾಸ ಇದೆ. ಇವತ್ತು ನಮ್ಮ ರಾಜ್ಯದ ಅರಣ್ಯಗಳಲ್ಲಿ ತೇಗದ ಮರಗಳು ಮಾಯವಾಗಿವೆ. ಗಂಧದ ಮರಗಳು ಮಾಯವಾಗುತ್ತಾ ಬಂದಿವೆ. ಬೀಟೆ ಮರಗಳು ಮಾಯವಾಗುತ್ತಾ ಬಂದಿವೆ. ಆದ್ದರಿಂದ ಇವತ್ತು ನಮಗೆ ಯಾವ ಮರಗಳಿಂದ ಆದಾಯ ಬರುತ್ತಿದೆಯೋ ಆ ಮರಗಳನ್ನು ಉಳಿಸಿಕೊಳ್ಳುವುದು ಅತಿ ಮುಖ್ಯವಾದ ವಿಷಯ. ಹಿಂದಿನ ಸರ್ಕಾರದವರು ಒಂದು ಸೀನಿಯರೇಜ್ ರೇಟನ್ನು ಫಿಕ್ಸ್ ಮಾಡಿದ್ದರು. ಆ ಒಂದು ಗೈಡ್‌ಲೈನ್ ಆದರೂ ತಾವು ತೆಗೆದುಕೊಂಡು ರೇಟು ಫಿಕ್ಸ್ ಮಾಡಿ. ಮತ್ತೆ ಇದರ ಜೊತೆಗೆ ಬೇರೆಬೇರೆ ರಾಜ್ಯಗಳ ರೇಟನ್ನು ನೋಡಿ ಇಲ್ಲಿ ತಾವು ಒಂದು ರೇಟನ್ನು ಫಿಕ್ಸ್ ಮಾಡಿ. ಆ ರೀತಿ ಒಂದು ರೇಟನ್ನು ಫಿಕ್ಸ್ ಮಾಡುವುದಕ್ಕೆ ತಾವು ಒಂದು ಅಫಿಷಿಯಲ್ ಕಮಿಟಿಯನ್ನು ನೇಮಕ ಮಾಡಿ, ಅವರು ಇದನ್ನು ವಿಮರ್ಶೆ ಮಾಡಿ ನೋಡಿ ಸರ್ಕಾರಕ್ಕೆ ಒಂದು ವರದಿಯನ್ನು ಕೊಡಲಿ. ಮತ್ತೆ ಈಗತಾನೆ ಮಾನ್ಯಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದು ಏನೆಂದರೆ ಕಚ್ಚಾ ವಸ್ತುಗಳು ಅರಣ್ಯದಲ್ಲಿ ಏನು ಇರುತ್ತವೆಯೋ ಆ ವಸ್ತುಗಳನ್ನು ಸುಮಾರು 5 ರಿಂದ 10 ವರ್ಷಗಳವರೆಗೆ ಒಪ್ಪಂದ ಅಥವಾ ಗುತ್ತಿಗೆಗೆ ಕೊಟ್ಟಿದ್ದೇವೆಂದು ಹೇಳಿದರು. ಒಂದುವೇಳೆ ಗುತ್ತಿಗೆದಾರರಿಗೆ ಅದು ಲಭ್ಯವಾಗದಿದ್ದರೆ. ತಾವು ಆ ರೀತಿ ಗುತ್ತಿಗೆಗೆ ಏತಕ್ಕೆ ಕೊಡುತ್ತೀರಿ ? ಒಂದು ವೇಳೆ ಲಭ್ಯವಾಗುತ್ತದೆಂದು ಹೇಳಿ ಗುತ್ತಿಗೆಗೆ ಪಡೆದುಕೊಂಡು ಲಭ್ಯವಾಗಲಿಲ್ಲವೆಂದು ಅರ್ಜಿಯನ್ನು ಕೊಟ್ಟರೆ ಆಗ ತಾವು ಏನು ಮಾಡುತ್ತೀರಿ ? It gives room for corruption ಎಂಬುದು ಅರ್ಥವಾಗುತ್ತಿದೆ. ಒಂದು ವೇಳೆ ಅದು ಲಭ್ಯವಾಗದಿದ್ದ ಪಕ್ಷದಲ್ಲಿ ಪ್ರತಿಯೊಬ್ಬರು ಆ ರೀತಿ ಕೇಳುವುದಕ್ಕೆ ಶುರು ಮಾಡುತ್ತಾರೆ. ಅದು ಒಂದು ವೇಳೆ ಲಭ್ಯವಾಗದಿದ್ದ ಪಕ್ಷಕ್ಕೆ ತಾವು ಅದನ್ನು ಕೊಡಬೇಡಿ. When once you enter into contract, there is no question of recovery. ಆದ್ದರಿಂದ ತಾವು ಹೇಳಿದಂತೆ ವಸೂಲು ಮಾಡುವುದು ಅಷ್ಟು ಸುಲಭವಲ್ಲ.

ಛೇರ್ಮನ್.— ಸ್ವಾಮಿ ತಾವು ಬೇಗ ಮಾತನಾಡಿ ಮುಗಿಸಿದರೆ ಒಳ್ಳೆಯದು.

ಶ್ರೀ ಗೋವಿಂದ ಪಿ. ಒಡೆಯರಾಜ್.— ಸ್ವಾಮಿ, ಮಾನ್ಯ ಸದಸ್ಯರು ಎಷ್ಟು ವೇಳೆಯಾದರೂ ತೆಗೆದುಕೊಂಡು ಮಾತನಾಡುವುದಕ್ಕೆ ಅವಕಾಶವಿಲ್ಲವೇ ?

ಛೇರ್ಮನ್.— ಮಾನ್ಯ ಸದಸ್ಯರಿಗೆ 15 ನಿಮಿಷಗಳು ಮಾತ್ರ ಅವಕಾಶ ಕೊಟ್ಟಿದ್ದರು.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸ್ವಾಮಿ ಒಂದೇ ಗಂಟೆಯಲ್ಲಿ ಬಿಲ್ ಪಾಸು ಆಗಬೇಕೆಂದು ಏನೂ ಇಲ್ಲ.

ಶ್ರೀ ವೈ. ರಾಮಕೃಷ್ಣ.—ತಾವು ಮತ್ತೆ ಸೆಕ್ಷನ್ 104(ಇ)ನ್ನು ಏತಕ್ಕೆ ಡಿಲೀಟ್ ಮಾಡಬಾರದು? 104 E reads thus: "Enhanced jurisdiction of Judicial Magistrate First Class : Not withstanding anything contained in Section 29 of the Code of Criminal Procedure, 1973(Central Act 2 of * 1974), it shall be lawful for the Judicial Magistrate First Class or the Metropolitan Magistrate to exercise the power of imposing imprisonment for a term not exceeding seven years and fine not exceeding twenty five thousand rupees in respect of offence punishable under this Act".

Why this has to be deleted ?

ಮತ್ತೆ ನಾನು ಇದುವರೆಗೂ ಕೆಲವು ಸಲಹೆಗಳನ್ನು ಕೊಟ್ಟಿದ್ದೇನೆ. ಅವುಗಳಿಗೆ ಮಾನ್ಯಮಂತ್ರಿಗಳು ಉತ್ತರ ಕೊಡಬೇಕು. ನಾನು ನಮ್ಮ ರಾಜ್ಯದ ರಿಸೋರ್ಸ್ ದೃಷ್ಟಿಯಿಂದ ಹೇಳುತ್ತಿದ್ದೇನೆ. ಆದ್ದರಿಂದ ಮಾನ್ಯ ಮಂತ್ರಿಗಳು ಗಮನ ಹರಿಸಿ ಕೆಲವು ತಿದ್ದುಪಡಿಗಳನ್ನು ಮಾಡಬೇಕೆಂದು ಹೇಳಿ ಈಗ ತಂದಿರ ತಕ್ಕಂಥ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಏನು ಒಂದು ತಿದ್ದುಪಡಿ ಮಸೂದೆಯನ್ನು ಈ ಸದನದಲ್ಲಿ ತಂದಿದ್ದಾರೆ ಅದು ನೋಡಲಿಕ್ಕೆ ಬಹಳ ಸಮಾಧಾನಕರವಾಗಿ ಕಂಡು ಬರುತ್ತದೆ. ಆದರೆ ಅದು ಅಷ್ಟು ಸುಲಭವಾಗಿ ಇಲ್ಲ. ಇದರಲ್ಲಿ ಸುಮಾರು ವಿಷಯಗಳು ಅಡಕವಾಗಿವೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ಸರಿಯಾದ ಉತ್ತರವನ್ನು ಕೊಡಬೇಕಾಗುತ್ತದೆ. ಯಾವ ಆಧಾರದ ಮೇಲೆ ಈ ತಿದ್ದುಪಡಿಯನ್ನು ತೆಗೆದುಕೊಂಡು ಬಂದಿದ್ದಾರೆ ಎಂದು ನಮಗೆ ಉತ್ತರ ಕೊಡಬೇಕಾಗುತ್ತದೆ ಅವರು ಸಮರ್ಪಕವಾದಂಥ ಉತ್ತರ ಕೊಡದಿದ್ದರೆ ನಾವು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕೆ ಬಹಳ ಕಷ್ಟವಾಗುತ್ತದೆ. ಮತ್ತೆ ಮಾನ್ಯಮಂತ್ರಿಗಳು ತಮ್ಮ

ಸ್ಟೇಟ್ ಮೆಂಟ್ ಆಫ್ ಆಬ್‌ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಈ ರೀತಿ ಹೇಳಿದ್ದಾರೆ.

"The Govt. of India while giving their assent to the Karnataka Forest (Amendment) Bill 1980 had suggested amendments to Section 68, 86, 87, of the Karnataka Forest Act to empower the Court to impose lesser sentence of imprisonment and fine,"

It is only a suggestion. Whether such a suggestion should be accepted or should not be accepted lies within our power unless there is a directive ಎಷ್ಟು ಮಾಡಬೇಕೋ ಅಷ್ಟು ಮಾಡಿ. ಕೆಲವು ಸಾರಿ ತಾವು ಕೂಡ ಇದನ್ನು ಯೋಚನೆ ಮಾಡಿ ಅನುಕೂಲ ಮಾಡಿ ಕೊಡಿ. ಇಲ್ಲದಿದ್ದರೆ ಅನಾನುಕೂಲವಾಗುತ್ತದೆ. ತಾವು ಈ ಕಾನೂನನ್ನು ಒಪ್ಪಿಕೊಳ್ಳುವುದಕ್ಕೆ ಅಧಿಕಾರ ತಮಗೆ ಇದೆ. ಆದರೆ ತಾವು ಏನು ಮಾಡಿದ್ದೀರಿ ಈ ಕಾನೂನನ್ನು ಗೌರ್ನಮೆಂಟ್ ಆಫ್ ಇಂಡಿಯಾಕ್ಕೆ ಅನುಗುಣವಾಗಿ ಉಪಯೋಗಿಸಿಕೊಂಡಿದ್ದೀವೆಂದು ಹೇಳಿದರೂ ಹೇಳಬಹುದು. ಈ ಕಾನೂನು ಸರಿಯಾಗಿಲ್ಲವೆಂದು ಹೇಳಿ ಈ ಸದನದಲ್ಲಿ ಅನೇಕ ಸಾರಿ ಚರ್ಚೆಗಳು ನಡೆದಿವೆ. ಈಗ ಕಾಡನ್ನು ಕಡಿಯುವುದಕ್ಕೆ ಸಿಕ್ಕಾಪಟ್ಟೆ ಲೈಸೆನ್ಸ್ ತೆಗೆದುಕೊಂಡು ಬಂದು ಇದ್ದ ಬದ್ದ ಕಾಡನ್ನೆಲ್ಲಾ ಕಡಿದು ಹಾಕಿದ್ದಾರೆ. ತಾವು ಮರ ಇಲ್ಲವೆಂದು ಹೇಳಿದ ತಕ್ಷಣ ಒಂದು ಫ್ಯಾಕ್ಟರಿಯನ್ನು ಮುಚ್ಚಿಸಿಬಿಟ್ಟಿದ್ದೀರಿ. ಆ ಫ್ಯಾಕ್ಟರಿಯಿಂದ ಸುಮಾರು 800 ಜನರು ಬೀದಿ ಪಾಲಾಗಿದ್ದಾರೆ. ಆದರೂ ಕೂಡ ಕಾಡನ್ನು ಕಡಿಯುವುದಕ್ಕೆ ಲೈಸೆನ್ಸ್ ಕೊಟ್ಟಿದ್ದೀರಿ. ಇವತ್ತು ನಮ್ಮ ರಾಜ್ಯದಲ್ಲಿ ತೇಗದ ಮರ ಇದೆ. ಬೀಟೆ ಮರ ಇದೆ. ರೋಜ್‌ವುಡ್ ಇದೆ. ಶ್ರೀ ಗಂಧದ ಮರ ಕೂಡ ಇವೆ. ಆದರೆ ತಾವು ಇದೇ ರೀತಿಯಲ್ಲಿ ಕಾಡನ್ನು ಕಡಿಯುವುದಕ್ಕೆ ಪರವಾನಿಗೆಯನ್ನು ಕೊಟ್ಟರೆ ಯಾವುದೇ ಒಂದು ಮರ ಇಲ್ಲದಂತೆ ಆಗುತ್ತದೆ. ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಮರಗಳು ಬೇರೆ ಯಾವ ರಾಜ್ಯದಲ್ಲಿಯೂ ಕೂಡ ಇಲ್ಲ. ಮರಗಳನ್ನು ಬೆಳೆಸುವುದಕ್ಕಿಂತ ಕಡಿಯುವುದು ದಿನೇ ದಿನೇ ಜಾಸ್ತಿಯಾಗುತ್ತದೆಂದು ನನಗೆ ಅರ್ಥವಾಗುತ್ತಿದೆ. ಇದನ್ನು ಮಾನ್ಯ ಮಂತ್ರಿಗಳು ತಪ್ಪಿಸಬೇಕು. ಇದು ತೀರ ಅಕ್ಷಮ್ಯ ಅಪರಾಧವಾಗುತ್ತದೆಂದು ನನಗನಿಸುತ್ತದೆ. ಮಾನ್ಯ ಸದಸ್ಯರಾದ ಶ್ರೀ. ರಾಮಕೃಷ್ಣರವರು ಇದರ ಬಗ್ಗೆ ವಿಮರ್ಶೆ ಮಾಡಿದ್ದಾರೆ. ಒಂದು ವಿಷಯವನ್ನು ತಮಗೆ ಹೇಳುತ್ತೇನೆ. ಅದೇನೆಂದರೆ ಅಮೆಂಡ್‌ಮೆಂಟ್ ಆಫ್ ಸೆಕ್ಷನ್–68 ಏನಿದೆ ಅದನ್ನು ತಪ್ಪಾಗಿ ಹಾಕಿದ್ದಾರೆಂದು ನನಗೆ ಕಾಣುತ್ತದೆ. ನನ್ನ ಹತ್ತಿರವಿರತಕ್ಕ ಪುಸ್ತಕದಲ್ಲಿ 'ಅಮೆಂಡ್‌ಮೆಂಟ್ ಆಫ್ ಮೈಸೂರು ಆಕ್ಟ್ 1963, ಆ ಆಕ್ಟ್‌ನಲ್ಲಿ ಇಲ್ಲ. 1974ರ ತಿದ್ದುಪಡಿ ಆಕ್ಟ್‌ನಲ್ಲಿಲ್ಲ; 1976ರ ಆಕ್‌ನಲ್ಲಿಲ್ಲ. 1976ರಲ್ಲಿ ಮಾರ್ಚಿ ತಿಂಗಳಲ್ಲಿ ತಿದ್ದುಪಡಿಯಾಗಿದೆ, ಅದರಲ್ಲೂ ಇಲ್ಲ. ಇದು ಯಾವುದರಲ್ಲಿ ಇದೆಯೋ ಗೊತ್ತಿಲ್ಲ.

ಶ್ರೀ ಬಿ ಎ ಜೀವಿಜಯ ಅದು ಇದೆ.

ಶ್ರೀ ಎಂ. ಎಸ್. ಕೃಷ್ಣನ್.— ಇದ್ದರೆ ಒಳ್ಳೆಯದು. ಇದರಲ್ಲಿ ಏನಿದೆ ಅಂದರೆ "The Forest Officer who made the seizure or any other officer" the Forest Officer who made the seizure should be made responsible and not any other officer. So, you have to put here as 'Forest Officer' and not any other officer. ಫಾರೆಸ್ಟ್ ಆಫೀಸರ್ ಅಂದರೆ ಅರ್ಥ ಬರುತ್ತದೆ.

(Mr. DEPUTY SPEAKER IN THE CHAIR)

Amendment of Section 86. says thus :

" In Section 86 of the principal Act, after the first proviso, the following further proviso shall be inserted namely :

"Provided further that the Court may, for any adequate and special reasons to be mentioned in the Jadgement, impose a lesser Sentence of imprisonment and fine".

Here, you can increase the sentence. ಲೆಸ್ಸರ್ ಪದವನ್ನು ತೆಗೆದು Sentence increase ಮಾಡಿದರೆ ಮಾನ್ಯ ಶ್ರೀ ರಾಮಕೃಷ್ಣರವರು ಒಪ್ಪಿಕೊಳ್ಳುತ್ತಾರೋ ಏನೋ ಗೊತ್ತಿಲ್ಲ. ಇದನ್ನು ಯೋಚನೆ ಮಾಡಿ ಅಂದರೆ, ನೀವು ಹೇಗೆ ಯೋಚನೆ ಮಾಡಿದ್ದಾರೋ ಗೊತ್ತಿಲ್ಲ, ಕಡಿಮೆ ಮಾಡುವುದಕ್ಕೆ ಹೇಳಿದ್ದಾರೆಯೆ? ಯೋಚನೆ ಮಾಡಿ ಅಂದರೆ ಕಡಿಮೆ ಮಾಡಬಹುದು. ಹೆಚ್ಚಿಗೆ ಮಾಡಬಹುದು. ಶ್ರೀಗಂಧದ ಮರಗಳನ್ನು ಜಾಸ್ತಿ ಮಾಡಿಕೊಳ್ಳುವುದಕ್ಕೆ ಮಾಡಿ. ನೀವು ಇದನ್ನು ತಿದ್ದುಪಡಿ ಮಾಡಬೇಡಿ. ಇದು ಹಾಗೆಯೇ ಇರಲಿ.

Then, I come to insertion of new Section 101 B, which says

thus :

After Section 101 A of the principal Act, the following Section shall be inserted, namely :

"101B. Supply of forest produce under agreement by the State Government.(1) No lease, agreement or any other document entered into by the State Government and providing for supply of fire-wood, timber or other forest and produce by the State Government shall at a time be for a term exceeding five years and the supply under every such lease, agreement or other document shall be subject to the condition of availability of such tree, wood timber or other forest produce".

10 ವರ್ಷ ಇದ್ದುದ್ದನ್ನು 5 ವರ್ಷ ಮಾಡಬೇಕೆಂದು ಹೇಳಿದ್ದೀರಿ. 5ವರ್ಷ ಮಾಡಬೇಕೆಂದು ತಾವು ಹೇಳಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಯಾವುದಕ್ಕೂ ಒಂದು ಟೈಮ್ ಇರಬೇಕು. 5 ವರ್ಷ ಎಂದು ಮಾಡಿರುವುದು ನನಗೆ ಸಮಾಧಾನವಾಗಿದೆ. ಇದರಲ್ಲಿ ನನ್ನ ಭಿನ್ನಾಭಿಪ್ರಾಯವಿಲ್ಲ.

Here, you have stated,

"Shall be subject to the condition of availability of such tree, wood, timber or other forest produce"

When you entered into an agreement you must be fair to all, irrespective of different persons. Why do you say, subject to availability of wood. I do not know whether it is correct.

ಇದು ತಪ್ಪು ಬಂದಿದೆಯಲ್ಲಾ; ಒಂದು ಅಗ್ರಿಮೆಂಟ್ ಎಂದು ಹೇಳಿದ್ದೀರಿ ಅದಕ್ಕೆ ನನ್ನ ಅನುಭವದಲ್ಲಿ ಹೇಳುವುದಾದರೆ, ಹರಿಹರದ ಪಾಲಿಫೈಬರ್ಸ್ ಫ್ಯಾಕ್ಟರಿ, ಬಿರ್ಲಾ ಕಂಪನಿ, ವೆಸ್ಟ್‌ಕೋಸ್ಟ್ ಪೇಪರ್ ಮಿಲ್‌ಗಳಿಗೆ ಕೊಟ್ಟಿದ್ದಾರೆ. ಬಿರ್ಲಾದವರಿಗೆ ಹಿಂದಿನ ಸರ್ಕಾರಗಳು ಸಹಿತ ಕೊಟ್ಟಿದ್ದಾರೆ. ಬಿರ್ಲಾರವರಿಗೆ ಯಾರ್ಯಾರು ಕೊಟ್ಟಿದ್ದಾರೆಂದರೆ ಮಾನ್ಯ ಗುಂಡೂರಾಯರು, ಮಾನ್ಯ ದೇವರಾಜ ಅರಸ್‌ರವರು ಮತ್ತು ಮಾನ್ಯ ರಾಮಕೃಷ್ಣ ಹೆಗಡೆಯವರು ಹಿಂದೆ ಫೈನಾನ್ಸ್ ಮಿನಿಸ್ಟರ್ ಆಗಿದ್ದರು, ಆಗ ಮಾನ್ಯ ವೀರೇಂದ್ರ ಪಾಟೀಲರು ಕೊಟ್ಟಿದ್ದಾರೋ ಏನೋ ಗೊತ್ತಿಲ್ಲ.

ಶ್ರೀ ಪಿ. ರಾಮ ದೇವ್.— ಅವರು ಕೊಟ್ಟಿರುವುದನ್ನು ಒಪ್ಪಿಕೊಳ್ಳುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.— ನಾನು ಆಗಲೂ ಸಹ ವಿರೋಧ ಮಾಡಿದ್ದೇನೆ. ಹರಿಹರ ಪಾಲಿಫೈಬರ್ಸ್ ಬಿರ್ಲಾ ಕಂಪನಿ, ವೆಸ್ಟ್‌ಕೋಸ್ಟ್ ಪೇಪರ್ ಮಿಲ್ ಇವುಗಳಿಗೆ ಕೊಡತಕ್ಕದ್ದು ಸರಿಯಲ್ಲವೆಂದು ಆಗಲೂ ವಿರೋಧ ಮಾಡಿದ್ದೇನೆ. ಹಲವಾರು ಕಾರಣಗಳಿಂದ ನಾನು ವಿರೋಧ ಮಾಡಿದ್ದೇನೆ.

ಶ್ರೀ ಬಿ. ದೊಡ್ಡಬೋರೇಗೌಡ.— ತಾವು ಮೊದಲಿನಿಂದಲೂ ವಿರೋಧ ಮಾಡುತ್ತಲೇ ಇದ್ದೀರಿ ಆದರೆ ಅದರ ಪ್ರತಿಫಲ ಆಗಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.— ಎಲ್ಲಿಯತನಕ ದೊಡ್ಡಬೋರೇಗೌಡರಂತಹ ಜನರು ಇರುತ್ತಾರೋ ಅಲ್ಲಿಯತನಕ ಉದ್ಧಾರವಾಗುವುದಿಲ್ಲ. ಮಾನ್ಯ ದೊಡ್ಡಬೋರೇಗೌಡರು ಒಳ್ಳೆಯವರು, ಅವರು ಶ್ರೀಮಂತರ ಪರವಾಗಿದ್ದಾರೆಂದು ನಾನು ಹೇಳುವುದಿಲ್ಲ. ಅವರು ಒಳ್ಳೆಯವರು, ಒಳಗೊಳಗೇ ವ್ಯಾಪಾರ ನಡೆಯುತ್ತದೆ, ಈ ವ್ಯಾಪಾರದೊಳಗೆ ಯಾರ್ಯಾರು ಸೇರಿಕೊಳ್ಳುತ್ತಾರೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.— ಮಾನ್ಯ ದೊಡ್ಡಬೋರೇಗೌಡರದು ರೈಸ್‌ಮಿಲ್ ಇದೆ. ಅವರು ಶ್ರೀಮಂತರು.

ಶ್ರೀ ಬಿ. ದೊಡ್ಡಬೋರೇಗೌಡ.— ರೈಸ್‌ಮಿಲ್ ಇದೆ, ಇಲ್ಲವೆಂದು ಹೇಳುವುದಿಲ್ಲ. ಅದರಿಂದ ಉತ್ಪಾದನೆ ಇಲ್ಲ. ಆದರೆ ನಾನು ಮಾನ್ಯ ಶ್ರೀಕಂಠಯ್ಯನವರ ಹಾಗೆ ಯಾವುದೇ ಅವ್ಯವಹಾರದಲ್ಲಿ ತೊಡಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಇದು ಪ್ರೇಮ ಕಲಹವೋ ಏನೋ ಗೊತ್ತಿಲ್ಲ. ಮಾನ್ಯ ಶ್ರೀಕಂಠಯ್ಯನವರು ಈಗ ಸುಮ್ಮನೆ ಇದ್ದರೆ ಮಾನ್ಯ ಸದಸ್ಯರು ಮಾಡಿದ ಆಪಾದನೆಯನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು— ಮಾಡಿದ ಆಪಾದನೆಗಳು ಸತ್ಯಕ್ಕೆ ದೂರವಾದವುಗಳೆಂದು ಎನ್‌ಕ್ವಾಯರಿ ಮಾಡಿದ ಮೇಲೆ ಗೊತ್ತಾಗಿದೆ.

ಶ್ರೀ ಎಂ.ಎಸ್. ಕೃಷ್ಣನ್.—ನಾನು ಹಿಂದೆ ಬಿರ್ಲಾರವರಿಗೆ ಕೊಟ್ಟಿದ್ದನ್ನು ವಿರೋಧ ಮಾಡಿದ್ದೇನೆ. ಇವತ್ತು ಕೂಡ ವಿರೋಧ ಮಾಡುತ್ತೇನೆ. ಈ ಕ್ಲಾಸ್ ಏನು ಹೇಳುತ್ತದೆ ಎಂದರೆ ಮತ್ತೆ ಚರ್ಚೆ

ನಡೆಸಲಿಕ್ಕೆ ಅವಕಾಶಗಳು ಇದೆಯೆಂದು ಕಾಂಟ್ರಾಕ್ಟ್ ಇದೆ. ಆದರೂ ಕೂಡ ಈ ಕ್ಲಾಸ್ ಅಷ್ಟು ಸರಿಯಾಗಿ ಬರುವುದಿಲ್ಲ. ಇನ್ನು ಮೂರನೇಯದು ಸೀನಿಯರೇಜ್ ರೇಟ್ಸ್ ವಿಷಯ. ನನಗಂತೂ ಬಹಳ ಸೋಜಿಗ. ಇದರ ಪ್ರಕಾರ 23ನೇ ಫೆಬ್ರವರಿ 1981 ರಿಂದ ಜೂನ್ 1982ರ ತನಕ ಇದ್ದ ರೇಟು, 29ನೇ ತಾರೀಕು ಜೂನ್‌ಗೆ ಎಕ್ಸ್-1 ರೇಟ್ ಕಡಿಮೆ ಆಗುತ್ತದೆ. ಇದರಿಂದ ಪ್ರಶ್ನೆ ಏನು ಉದ್ಭವವಾಗುತ್ತದೆ ಎಂದರೆ ಎಕ್ಸ್ ಇದ್ದುದನ್ನು ಎಕ್ಸ್-1 ರೇಟನ್ನು ಯಾವ ಆಧಾರದ ಮೇಲೆ ಕಡಿಮೆ ಮಾಡಿದರು? ಸೀನಿಯರೇಜ್ ರೇಟ್ ಫಿಕ್ಸ್ ಮಾಡಿದ್ದಕ್ಕೆ 23ನೇ ಫೆಬ್ರವರಿಯಲ್ಲಿ ಫಿಕ್ಸ್ ಮಾಡುವುದಕ್ಕೆ ಅಜಗಜಾಂತರ ವ್ಯತ್ಯಾಸ ಇದೆ. ನಾನು ಕೇಳುವುದೇನೆಂದರೆ 40-20 ಇರುವುದನ್ನು 4 ಸಾವಿರ ಮಾಡಿಬಿಟ್ಟಿರು ಎಂದು ಹೇಳುತ್ತಿದ್ದೀರಿ. ಇದರ ಬಗ್ಗೆ ಫಿಗರ್ಸ್ ಕೊಟ್ಟಿಲ್ಲ. ಸ್ಪಷ್ಟವಾದ ವಿವರಗಳನ್ನು ಕೊಡಬೇಕು. ಎಷ್ಟು ಪರ್ಸಂಟೇಜ್ ಜಾಸ್ತಿ ಮಾಡಿದ್ದೀರಿ? ಸಾಮಾನ್ಯವಾಗಿ ಲೆಸ್ಸರ್ ಅಮೌಂಟ್ ಫಿಕ್ಸ್ ಮಾಡಬೇಕು. ಅನ್ಯಾಯ ಆಗಿದ್ದರೆ ಇದನ್ನು ಒಪ್ಪಿಕೊಳ್ಳುವುದಕ್ಕೆ ಆಗುತ್ತದೆಯೇ? ಎಕ್ಸ್ ಮತ್ತು ಎಕ್ಸ್-1 ಮಾಡಿ that too with retrospective effect from 23rd February 1981 you want a lesser amount to be paid. ಅದು ಹೇಗೆ ಸಾಧ್ಯವಾಗುತ್ತದೆ? I can understand that at least prospective ಆಗಿ ಯಾರಿಗೋ ಸಹಾಯ ಮಾಡುವುದಕ್ಕೆ ಹೋಗುತ್ತಿದ್ದೀರಿ ಎಂದು ಅಪಾದನೆ ಬಂದರೆ ಅದಕ್ಕೆ ನೀವು ಗುರಿಯಾಗುತ್ತೀರಿ. ಇದಕ್ಕೆ ಏಕೆ ಗುರಿಯಾಗಬೇಕು? ಹಾಗೆ ಇಟ್ಟುಕೊಳ್ಳಬಹುದು ಎಂದು ಕಾಣುತ್ತದೆ. ಹೇಗಿದ್ದರೂ ಕಾಂಟ್ರಾಕ್ಟ್‌ನಲ್ಲಿ ಬದಲಾವಣೆ ಮಾಡುವುದಕ್ಕೆ ನಿಮಗೆ ಅಧಿಕಾರವನ್ನು ಕೊಟ್ಟಿದೆ. ಇಷ್ಟು ಮಾತ್ರ ನಾನು ಇದರಲ್ಲಿ ಹೇಳಬೇಕಾಗಿದೆ. ನನಗನ್ನಿಸುವುದೇನೆಂದರೆ ಇವೆರಡು ಅಷ್ಟು ಸಮಂಜಸವಾಗಿಲ್ಲ. ಇದನ್ನು ತಿದ್ದುಪಡಿ ಮಾಡಬೇಕೆಂಬುದು ನನ್ನ ಅಭಿಪ್ರಾಯ.

ಶ್ರೀ ಶ್ರೀಪಾದ ಹೆಗಡೆ.— ನನಗೆ ಆಶ್ಚರ್ಯವಾಗುತ್ತಿದೆ, ಈ ತಿದ್ದುಪಡಿಯನ್ನು ತಂದಿರುವುದರ ಬಗ್ಗೆ. ಮಾನ್ಯ ಅರಣ್ಯ ಮಂತ್ರಿಗಳಿಗೆ ಗೊತ್ತಿದೆ. ಅವರು ನಮ್ಮಲ್ಲಿಗೆ ಬಂದಾಗ ನೋಡಿದ್ದಾರೆ. ಗಂಧದ ಮರಗಳ ಕಳ್ಳಸಾಗಾಣಿಕೆ ಏನು ನಡೆಯುತ್ತಿದೆ, ಆದರಲ್ಲೂ ಗಂಧದ ಗಿಡಗಳನ್ನು ಒಂದು ಚೂರೂ ಬಿಟ್ಟಿಲ್ಲ. ಇದು ಅವ್ಯಾಹತವಾಗಿ ನಡೆಯುತ್ತಿದೆ ಇದಕ್ಕೆ ಹೆಚ್ಚಿನ ಶಿಕ್ಷೆ ವಿಧಿಸಬೇಕೇ ಹೊರತು ಇದ್ದುದನ್ನು ಕಡಿಮೆ ಮಾಡಿದರೆ ಏನೂ ಸಾಧ್ಯವಾಗವುದಿಲ್ಲವೆಂದು ನನ್ನ ಅಭಿಪ್ರಾಯ. ಆದ್ದರಿಂದ ಅವರು ಏನು ತಿದ್ದುಪಡಿಯನ್ನು ತಂದಿದ್ದಾರೆ ಅದರಲ್ಲಿ ಯಾವುದೇ ರೀತಿಯಿಂದ ಒಂದು ಪ್ರೆಸ್ಟೀಜ್ ಪ್ರಶ್ನೆಯೆಂದು ತಿಳಿದುಕೊಳ್ಳದೆ ರಾಜ್ಯದ ಹಾಗೂ ಅರಣ್ಯ ರಕ್ಷಣೆಯ ದೃಷ್ಟಿಯಿಂದ ದೇಶಕ್ಕೆ ಅತೀ ಅವಶ್ಯವಾದಂಥ ಗಿಡಮರಗಳನ್ನು ಸಂರಕ್ಷಣೆ ಮಾಡತಕ್ಕ ದೃಷ್ಟಿಯಿಂದ ಈ ಕಾಯಿದೆಯನ್ನು ತಿದ್ದುಪಡಿ ಮಾಡಿ ಹೆಚ್ಚು ಶಿಕ್ಷೆ ಕೊಡಲಿಕ್ಕೆ ವಿಚಾರ ಮಾಡಬೇಕೆಂದು ತಮ್ಮ ಮೂಲಕ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ ನಮ್ಮಲ್ಲಿ ಸಾವಿರಗಟ್ಟಲೆ ಗಿಡಮರಗಳನ್ನು, ಒಳ್ಳೆರೀತಿಯ ಅರಣ್ಯ ಲೂಟಿ ಮಾಡುವಂಥ ಜನರು ಇದ್ದಾರೆ. ಇನ್ನು ಗಂಧದ ಗಿಡಗಳನ್ನು ಇವರು ಲೂಟಿ ಮಾಡದೇ ಬಿಡುತ್ತಿಲ್ಲ. ಅದಕ್ಕಾಗಿ ಮಾನ್ಯ ಮಂತ್ರಿಗಳು ದಯಮಾಡಿ ಈ ತಿದ್ದುಪಡಿ ಏನಿದೆ ಇದನ್ನು ಹಿಂತೆಗೆದುಕೊಳ್ಳಬೇಕೆಂದು ಮತ್ತು ಈಗಿರತಕ್ಕಂಥ ಶಿಕ್ಷೆಯನ್ನು ಹೆಚ್ಚು ಮಾಡುವ ಹಾಗೆ ಇದನ್ನು ತರಬೇಕೆಂದು ನಾನು ಸೂಚನೆಯನ್ನು ಕೊಡುತ್ತಿದ್ದೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ಮಾನ್ಯ ಅಧ್ಯಕ್ಷರೇ, ಅರಣ್ಯ ಮಂತ್ರಿಗಳು ತಂದಿರತಕ್ಕ ಬಿಲ್ಲನ್ನು ಅನುಮೋದಿಸುತ್ತಾ ಒಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ನೂರಾರು ಫ್ಯಾಕ್ಟರಿಗಳಿಗೆ ಈಗ ಮರವಿಲ್ಲವೆಂದರೆ ಅವುಗಳನ್ನು ಮುಚ್ಚಬೇಕಾದ ಪರಿಸ್ಥಿತಿ ಬರುತ್ತವೆ. ಅವುಗಳನ್ನು ಮುಚ್ಚಿದರೆ ಮೆಶಿನರಿಗಳು ನಷ್ಟವಾಗುತ್ತವೆ. ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲಿ ಜನರು ಇಲ್ಲ. ಅಲ್ಲಿ ಪೂರ್ತಿಯಾಗಿ ಅರಣ್ಯ ಇರತಕ್ಕದ್ದು. ಅಂಡಮಾನ್ ನಿಕೋಬಾರ್‌ದಲ್ಲಿ ಸರಕಾರದವರು ಯಾವುದಾದರೂ ಫಾರೆಸ್ಟ್ ಬೇಸ್ಡ್ ಇಂಡಸ್ಟ್ರಿ ಮಾಡಿದರೆ ಅಲ್ಲಿಂದ ನಮ್ಮ ಪ್ರದೇಶಕ್ಕೆ ಇತರ ಭಾಗಗಳಿಂದ ಬರತಕ್ಕ ಬೇಡಿಕೆಯನ್ನು ವಿಸ್ತರಿಸಿಕೊಳ್ಳುತ್ತೇವೆ ಎಂದು ಹೇಳಿದರೂ ಕೂಡ ಅಲ್ಲಿ ಹೆಚ್ಚಿನ ಕೈಗಾರಿಕೆಗಳು ಪ್ರಾರಂಭವಾಗಿಲ್ಲ. ಪೋರ್ಟ್‌ಬ್ಲೇರ್‌ನಲ್ಲಿ ಮಾತ್ರ ಪ್ಲೈವುಡ್ ಫ್ಯಾಕ್ಟರಿ ಇದೆ. ಆದ್ದರಿಂದ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ಜೊತೆ ಮತ್ತು ಅಂಡಮಾನ್ ಸರ್ಕಾರದ ಜೊತೆ ವ್ಯವಹಾರ ಮಾಡಿ ಅಲ್ಲಿಂದ ಸಾಫ್ಟ್‌ವುಡ್‌ನ್ನು ತರಿಸಿಕೊಳ್ಳುವ ಪ್ರಯತ್ನವನ್ನು ಸರ್ಕಾರದವರು ಮಾಡಿದರೆ ಇಲ್ಲಿರತಕ್ಕಂಥ ಮರದ ಕಾರ್ಖಾನೆಗಳಿಗೆ ತೊಂದರೆಯಾಗುವುದಿಲ್ಲ. ಐದು ವರ್ಷಗಳ ಈಚೆಗೆ ಅನುಮತಿ ಕೊಟ್ಟ ಮರಗಳಿಗೆ ಮರ ಸಿಗದೇ ಇದ್ದರೆ ಲಕ್ಷಾಂತರ ರೂಪಾಯಿ ಮಿಶನರಿ ಹಾಕಿರತಕ್ಕಂಥಾದ್ದು ನಷ್ಟವಾಗುತ್ತದೆ. ಆದ್ದರಿಂದ ಮಾನ್ಯ ಅರಣ್ಯ ಮಂತ್ರಿಗಳು ನಾನು ಕೊಟ್ಟಿರುವ ಸಲಹೆಯನ್ನು ಶೀಘ್ರವಾಗಿ ಪರಿಶೀಲನೆ ಮಾಡಿ ಕೇಂದ್ರ ಸರ್ಕಾರದ ಜೊತೆ ಅಂಡಮಾನ್ ನಿಕೋಬಾರ್ ದ್ವೀಪಗಳ ಸರ್ಕಾರದೊಡನೆ ವ್ಯವಹಾರ ಮಾಡಿ ಅಲ್ಲಿ 350 ಸಣ್ಣಪುಟ್ಟ ದ್ವೀಪಗಳು ಇವೆ. ಲಕ್ಷದ್ವೀಪದಲ್ಲಿ ಎಷ್ಟೋ ಸಣ್ಣಪುಟ್ಟ ದ್ವೀಪಗಳು ಇವೆ, ಅಲ್ಲಿರತಕ್ಕಂಥ ಅರಣ್ಯವನ್ನು ಉಪಯೋಗಿಸಿಕೊಂಡರೆ, ಅಲ್ಲಿ ಬಿದ್ದು ಹೋಗತಕ್ಕಂಥ

ನಾಶವಾಗತಕ್ಕಂಥ ಮರಗಳನ್ನು ನಮ್ಮ ರಾಜ್ಯಕ್ಕೆ ತರಿಸತಕ್ಕ ವ್ಯವಸ್ಥೆಯನ್ನು ಮಾಡಿ ಈ ಕೈಗಾರಿಕೆಗಳು ಮುಚ್ಚದೇ ಇರುವ ಹಾಗೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ಡಾ|| ವಿ. ಎಸ್. ಆಚಾರ್ಯ.— ಸನ್ಮಾನ್ಯ ಅಧ್ಯಕ್ಷರೇ, ಅರಣ್ಯ ಸಚಿವರು ಏನು 198 ರ ಕರ್ನಾಟಕ ಅರಣ್ಯ ಕಾಯಿದೆಯ ತಿದ್ದುಪಡಿಯನ್ನು ತಂದಿದ್ದಾರೆ, ಈ ಮುಂಚೆ ಮಾತನಾಡಿದ ಮಾನ್ಯ ಮಿತ್ರರು ಹೇಳಿದ ಹಾಗೆ ಇದು ಕೇವಲ ಐದು ಸೆಕ್ಷನ್‌ಗಳಿಗೆ ಸಂಬಂಧಪಟ್ಟ ತಿದ್ದುಪಡಿಯಾದರೂ ಬಹಳ ಮೂಲಭೂತವಾದ ಬದಲಾವಣೆಗಳು ಇವರಲ್ಲಿ ಇರುವ ಹಾಗೆ ಕಾಣುತ್ತದೆ. ಭಾರತ ಸರ್ಕಾರದವರು 1980ರ ತಿದ್ದುಪಡಿಗೆ ಮಂಜೂರಾತಿಯನ್ನು ಕೊಟ್ಟು ಸೆಕ್ಷನ್ಸ್ 68,86 ಮತ್ತು 87 ಫಾರೆಸ್ಟ್ ಆ್ಯಕ್ಟ್ ಬಗ್ಗೆ ಕೆಲವು ತಿದ್ದುಪಡಿಗಳನ್ನು ಅದರಲ್ಲೂ ಮುಖ್ಯವಾಗಿ ಶಿಕ್ಷೆ ಅವಧಿ ಮತ್ತು ದಂಡವನ್ನು ಏನು ಹಾಕಬೇಕು ಎನ್ನುವ ಬಗ್ಗೆ ಸೂಚನೆ ಕೊಟ್ಟಿದ್ದಾರೆ. ಅದರ ಮೇಲೆ ತಿದ್ದುಪಡಿಯನ್ನು ತಂದಿದ್ದೇವೆ ಎಂದು ಹೇಳಿದ್ದಾರೆ. ಆದರೆ ಬಹುತೇಕ ಸೆಕ್ಷನ್ 68ರ ಬಗ್ಗೆ ಎರಡನೇ ಕ್ಲಾಸ್‌ನಲ್ಲಿ ತಿದ್ದುಪಡಿಯನ್ನು ಸೂಚನೆ ಮಾಡಿದ್ದಾರೆ. ಇದರ ಬಗ್ಗೆ ವಿಶೇಷ ಆಕ್ಷೇಪಣೆ ಏನೂ ಇಲ್ಲ. ಇದು ಬಹುತೇಕ ಕಾನೂನಿನ ದೋಷವನ್ನು ಸರಿಪಡಿಸುವ ಬಗ್ಗೆ ಇರಬಹುದು. ಆದರೆ ಕ್ಲಾಸ್ 3-4ರಲ್ಲಿ 86 87 ಸೆಕ್ಷನ್ ಬಗ್ಗೆ ತಿದ್ದುಪಡಿಯಲ್ಲಿ ಏನು ತಂದಿದ್ದಾರೆ, ಎಂದರೆ ಗಂಧದಮರ ಕಳ್ಳಸಾಗಾಣಿಕೆ ಬಗ್ಗೆ ಮತ್ತು ಸೆಕ್ಷನ್ 87ರಲ್ಲಿ ಗಂಧದೆಣ್ಣೆ ತಯಾರು ಮಾಡತಕ್ಕಂಥ ಪ್ರೊಸೆಸಿಂಗ್ ಕೈಗಾರಿಕೆಗಳ ಬಗ್ಗೆ ಕಾನೂನಿನ ವಿರುದ್ಧ ಹೋಗುವವರಿಗೆ ಶಿಕ್ಷೆ ವಿಧಿಸುವ ಬಗ್ಗೆ ಇದೆ. ಆದರೆ ಈಗಾಗಲೇ ಮಾನ್ಯ ಸದಸ್ಯರೊಬ್ಬರು ಹೇಳಿದ ಹಾಗೆ ಹಿಂದೆ ಇದ್ದಂಥ ಶಿಕ್ಷೆಯನ್ನು ಕಡಿಮೆ ಮಾಡುವುದಕ್ಕೆ ಅವಕಾಶ ಕೊಟ್ಟರೆ ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಹೊಸ ಸರ್ಕಾರ ಬಂದ ಮೇಲೆ ಅರಣ್ಯದಲ್ಲಿ ಲೂಟಿಯಾಗುವುದನ್ನು ಕಡಿಮೆ ಮಾಡಲಿಕ್ಕೆ ಕಟ್ಟುನಿಟ್ಟಾದ ಕ್ರಮ ತೆಗೆದುಕೊಂಡಿದ್ದಾರೆ, ಪರಂಪರಾನುಗತವಾಗಿ ಲೂಟಿಯಾಗುವುದನ್ನು ತಡೆಗಟ್ಟಲಿಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆಂದು ನಿರೀಕ್ಷಿಸಿದ್ದೆವು. ಒಂದು ಕಡೆ ಅರಣ್ಯ ಲೂಟಿಯಾಗುತ್ತಿದ್ದರೆ, ಇನ್ನೊಂದು ಕಡೆ ಸೋಶಿಯಲ್ ಫಾರೆಸ್ಟ್ರಿ ಪ್ರಾರಂಭ ಮಾಡುತ್ತಿದ್ದಾರೆ. ಒಳ್ಳೆಯ ಯುಗ ಬಂತು, ಎನ್ನುವ ಸಮಾಧಾನದಿಂದ ಅರಣ್ಯ ರಕ್ಷಣೆಯಾಗುತ್ತದೆಂದು ಭಾವಿಸಿಕೊಂಡಿದ್ದೆವು.

ಇವತ್ತು ಸರ್ಕಾರದವರು ತಂದಿರತಕ್ಕ ತಿದ್ದುಪಡಿಯಲ್ಲಿ ಶಿಕ್ಷೆಯನ್ನು ಕಡಿಮೆ ಮಾಡುವುದರ ಬಗ್ಗೆ ಸೂಚನೆ ಮಾಡಿದ್ದಾರೆ. ಇದರ ಮೂಲ ತಿದ್ದುಪಡಿ ಏನು ಇತ್ತು ಇದರಲ್ಲಿ ಪರಮಾವಧಿ ಶಿಕ್ಷೆ ಒಂದು ವರ್ಷದವರೆಗೆ ಮತ್ತು 25 ಸಾವಿರ ರೂಪಾಯಿಗಳ ದಂಡ ಎಂದು ಇದೆ. ಇದರಲ್ಲಿ ಮುಂದೆ "Provided that" ಎನ್ನುವಂಥ ಪ್ರಾವಿಷನನ್ನು ಹಾಕಿಕೊಂಡು ಅಪರಾಧ ಮಾಡಿದಂಥವರಿಗೆ ಮೂರು ವರ್ಷದವರೆಗೆ ಶಿಕ್ಷೆ 10 ಸಾವಿರ ರೂಪಾಯಿಗಳ ದಂಡ, ಇವೆರಡನ್ನು ಸೇರಿಸಿ ಅಪರಾಧಿಗೆ ಶಿಕ್ಷೆಯನ್ನು ಕೊಡತಕ್ಕದ್ದು ಇದೆ. ಆದರೆ 'ಇದಕ್ಕಿಂತ ಕಡಿಮೆ ಶಿಕ್ಷೆಯನ್ನು ವಿಧಿಸುವುದಕ್ಕೆ ಮಸೂದೆಯನ್ನು ಈಗ ಏಕೆ ತಂದರೋ ಅದು ಸಮರ್ಥವಾಗುತ್ತಿಲ್ಲ. ಗಂಧದ ಕಳ್ಳಸಾಗಾಣಿಕೆ ರಾಜ್ಯದಲ್ಲಿ ಜಾಸ್ತಿಯಾಗುತ್ತಿರುವಾಗ ಶಿಕ್ಷೆಯನ್ನು ಕಡಿಮೆ ಮಾಡುವುದು ಸರಿಯಾದುದಲ್ಲ. ಬಸ್ಸಿನ ಸೀಟಿನ ಕೆಳಗಡೆ ಗಂಧದ ತುಂಡನ್ನು ಇಟ್ಟು ಕಳ್ಳಸಾಗಾಣಿಕೆ ಮಾಡುತ್ತಿದ್ದರು ಎಂದು ಮೊನ್ನೆಯ ದಿವಸ ಪತ್ರಿಕೆಯಲ್ಲಿ ಬಂದಿದ್ದನ್ನು ನಾನು ಓದಿದೆ. ನಮ್ಮ ಜನರಿಗೆ ಬಸ್ಸಿನಲ್ಲಿ ಸೀಟಿನ ಕೆಳಗಡೆ ಗಂಧದ ತುಂಡುಗಳನ್ನು ಇಟ್ಟುಕೊಂಡು ಕಳ್ಳತನ ಮಾಡುವಷ್ಟು ಧೈರ್ಯ ಬಂದಿರುವಾಗ ಇದರ ಬಗ್ಗೆ ತಾವು ಕಠಿಣ ಶಿಕ್ಷೆಯನ್ನು ಕೊಡಬೇಕಾಗುತ್ತದೆ. ನೀವು ಕಾಯಿದೆಯಲ್ಲಿ ಡೈಲ್ಯೂಷನ್ ಮಾಡಿದರೆ ದೇಶದಲ್ಲಿ ಕಳ್ಳಸಾಗಾಣಿಕೆ ಜಾಸ್ತಿಯಾಗುತ್ತದೆ. ಇದನ್ನು ಮಾಡುವುದು ಒಳ್ಳೆಯದಲ್ಲ. ಕಳ್ಳಸಾಗಾಣಿಕೆ ಮಾಡಿ ಜೈಲಿನಲ್ಲಿ ಅಪರಾಧಿಗಳ ಸಂಖ್ಯೆ ಜಾಸ್ತಿಯಾಗಿದ್ದು ಅವರ ಊಟ ಉಪಚಾರಕ್ಕೆ ತೊಂದರೆಯಾಗಿದ್ದರೆ ತಾವು ಈ ಮಾತನ್ನು ಹೇಳಬಹುದಿತ್ತು. ಅಂಥ ಯಾವುದೊಂದು ಕಾರಣವೂ ಇದರಲ್ಲಿ ಕಾಣಿಸುತ್ತಿಲ್ಲ.

ಇನ್ನೊಂದು 101 ಸೆಕ್ಷನ್–ಬಿನ್ನು ಸರ್ಕಾರದವರು ನಮ್ಮ ಮುಂದೆ ಇಟ್ಟಿದ್ದಾರೆ. ಮಾನ್ಯ ಮಿತ್ರರಾದ ಕೃಷ್ಣನ್ ಅವರು ಇದರ ಬಗ್ಗೆ ಹೇಳಿದರು ಅರಣ್ಯದ ಉತ್ಪನ್ನದ ಮೇಲೆ ನಡೆಯತಕ್ಕ ಕಾರ್ಖಾನೆಗಳು ಏನು ಇವೆ, ಅವುಗಳಿಗೆ ದೀರ್ಘ ಕಾಲದ ಗುತ್ತೇದಾರಿಯನ್ನು ಕೊಟ್ಟು ಅರಣ್ಯವನ್ನು ಸಿಕ್ಕಿದ ಹಾಗೆ ದೋಚಿಕೊಂಡು ಹೋಗುವುದು ಬಹಳ ನಡೆಯುತ್ತಿದೆ. ಒಂದು ಸಾರಿ ಕೊಟ್ಟ ಅಗ್ರಿಮೆಂಟನ್ನು ಐದು ವರ್ಷಗಳಿಗಿಂತ ಜಾಸ್ತಿ ಮಾಡುವುದಿಲ್ಲವೆಂದು ಹೇಳಿದ್ದಾರೆ. ಇಲ್ಲಿ ಸರ್ಕಾರದವರಿಂದ ಇದನ್ನು ಮತ್ತೆ ಐದು ವರ್ಷಗಳಿಗೆ ಮಾಡುವುದಿಲ್ಲವೆನ್ನುವ ಒಂದು ಭರವಸೆ ನಮಗೆ ಬೇಕು ಎಂದು ನಾನು ಹೇಳುತ್ತೇನೆ. ಆದರೆ ಅರಣ್ಯ ಸಂಪತ್ತನ್ನೇ ನಂಬಿಕೊಂಡು ಸ್ಥಾಪಿತವಾಗಿರುವ ಕಾರ್ಖಾನೆಗಳಿಗೆ ಇದರಿಂದ ತೊಂದರೆಯಾಗುತ್ತದೆ. ಆದಕ್ಕೋಸ್ಕರ ಇದನ್ನು ಪುನರ್‌ವಿಮರ್ಶೆ ಮಾಡುವುದು ಒಳ್ಳೆಯದು

ಮೂರನೆಯದು ಸೆಕ್ಷನ್ 104 (ಇ) ಇದನ್ನು ಬಿಟ್ಟು ಬಿಡಬೇಕು; ಎಂದು ಇದೆ. ಸೆಕ್ಷನ್–7ರಲ್ಲಿ ವ್ಯಾಲಿಡೇಷನ್–ಇದರ ಬಗ್ಗೆ, 1981 ರಲ್ಲಿ ಸೀನಿಯೋರೇಜ್‌ನ್ನು ಫಿಕ್ಸ್ ಮಾಡಿದ್ದು ಇದರ ಮೇಲೆ ಸಂಬಂಧಪಟ್ಟ ಕಮಿಟಿಯ ತೀರ್ಮಾನ 29-6-1982ರಲ್ಲಿ ಆಗಿದೆ. ಹೀಗೆ ಆಗಿದ್ದ ರೇಟನ್ನು 23-2-1981 ರಿಂದ ಪೂರ್ವಾನ್ವಯ ಮಾಡಬೇಕು ಎಂದು ಹೇಳಿದ್ದಾರೆ. ಇದನ್ನು ನಾವು ಒಪ್ಪಲಿಕ್ಕೆ ಬಹಳ ಕಷ್ಟವಾಗ

ತ್ತದೆ. ಇದು ರಾಜ್ಯದ ವರಮಾನದ ಪ್ರಶ್ನೆ. ಇದನ್ನು ಏಕೆ ಪೂರ್ವಾನ್ವಯ ಮಾಡಬೇಕು ? ಇದರ ಬಗ್ಗೆ ಈ ತಿದ್ದುಪಡಿಯಲ್ಲಿ ಸ್ಪಷ್ಟವಾಗಿ ಸಮಾಧಾನಕರವಾದಂಥ ವಿವರಣೆಯಲ್ಲಿ ಕೊಟ್ಟಂತೆ ಕಾಣಲಿಲ್ಲ. 1982ರ ನಂತರ ಕಮಿಟಿಯವರು ಏನು ತೀರ್ಮಾನ ಮಾಡಿದ್ದಾರೆ ಅದರಂತೆ ದರವನ್ನು ಗೊತ್ತುಮಾಡಬೇಕು. ಇದನ್ನು ಪೂರ್ವಾನ್ವಯಗೊಳಿಸಬಾರದು ಎಂದು ನಾನು ನನ್ನ ಅಭಿಪ್ರಾಯವನ್ನು ಸೂಚಿಸುತ್ತಾ ಇದನ್ನು ಸರ್ಕಾರದವರು ಕೇವಲ ತಾಂತ್ರಿಕವಾಗಿ ಇಟ್ಟುಕೊಳ್ಳದೆ ಸರಿಪಡಿಸುವುದು ಸೂಕ್ತ. ಐದು ವರ್ಷ ಅಗ್ರಿಮೆಂಟ್‌ಗೆ ನಮ್ಮ ಆಕ್ಷೇಪ ಇಲ್ಲ, ಇಷ್ಟು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. **ರಾಮಚಂದ್ರರಾವ್.**— ನಾನು ಕರ್ನಾಟಕ ಅರಣ್ಯದ (ತಿದ್ದುಪಡಿ) ಬಿಲ್ 1984ರ ಮೇಲೆ ನನ್ನ ಅಭಿಪ್ರಾಯವನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಅರಣ್ಯ ಇಲಾಖೆಯವರು ಸೀಜ್ ಮಾಡಿದ ಲಾರಿಗಳು, ಮತ್ತಿತರ ವೆಹಿಕಲ್‌ಗಳು ಕಛೇರಿಯ ಮುಂದೆ ನಿಂತು ಹಾಗೆಯೇ ಹಾಳಾಗಿ ಹೋಗುತ್ತಿವೆ. ಅದಕ್ಕೆ ಮೊದಲು ಇವುಗಳನ್ನು ಸೇಲ್ ಮಾಡಿಯಾದರೂ ಅಥವಾ ಅವುಗಳನ್ನು ಒಂದಕ್ಕೆ ಕೊಡುವ ರೀತಿಯಲ್ಲಾದರೂ ಸರ್ಕಾರದವರು ವ್ಯವಸ್ಥೆ ಮಾಡಬೇಕು. ಇದಲ್ಲದೆ ಕಾಡಿನಲ್ಲಿ ನೂರಾರು ಮರಗಳು ಯಾವ ಉಪಯೋಗಕ್ಕೂ ಬರದೆ ಹಾಳಾಗಿ ಹೋಗುತ್ತಿವೆ. ಇದನ್ನೂ ಸಹ ನಾವು ವಿಚಾರ ಮಾಡಬೇಕಾಗುತ್ತದೆ.

ಆಮೇಲೆ ಐದು ವರ್ಷದ ಅಗ್ರಿಮೆಂಟ್. ಅರಣ್ಯವನ್ನೇ ಅವಲಂಬಿಸಿರುವ ಕೈಗಾರಿಕೆಗಳು ಐದು ವರ್ಷಕ್ಕೆ ಸೀಮಿತವಾಗಿ ನಡೆಯಬೇಕು ಎಂದು ಹೇಳಿದರೆ ಯಾರು ತಾನೇ ಕೈಗಾರಿಕೆಗಳನ್ನು ಮಾಡುವುದಕ್ಕೆ ಮುಂದೆ ಬರುತ್ತಾರೆ ? ಇಲ್ಲಿ ಕೊನೆಯಪಕ್ಷ 10 ವರ್ಷಗಳಾದರೂ ಒಪ್ಪಂದ ಮಾಡಿಕೊಂಡರೆ ನಂತರ ಇದನ್ನು ಆಲೋಚನೆ ಮಾಡಬಹುದು. ಆದ್ದರಿಂದ ಇದನ್ನು 5 ವರ್ಷಗಳಿಗೆ ಇಳಿಸುವುದರಲ್ಲಿ ಯಾವ ಅರ್ಥವಿಲ್ಲ. ಹಿಂದೆ 30–50 ವರ್ಷಗಳವರೆಗೆ ಒಪ್ಪಂದವನ್ನು ಮಾಡಿಕೊಂಡು ಈಗ 5 ವರ್ಷಗಳಿಗೆ ಇಳಿಸುವುದು ಎಂದರೆ ಬಹಳ ಅನ್ಯಾಯವಾಗುತ್ತದೆ, ಮತ್ತು, ಪ್ರತಿ ಐದು ವರ್ಷಕ್ಕೆ ಒಂದು ಸಾರಿ ಒಪ್ಪಂದವನ್ನು ಮಾಡಿಕೊಳ್ಳುವಾಗ ಅಂಡರ್‌ಹ್ಯಾಂಡ್ ಡೀಲಿಂಗ್ಸ್‌ಗೆ ಅವಕಾಶವಾಗುತ್ತದೆ. ಸರ್ಕಾರದವರು ಕೈಗಾರಿಕೆಗಳನ್ನು ನೋಡಬೇಕು ಮತ್ತು ಅರಣ್ಯದ ಪರಿಸ್ಥಿತಿಯನ್ನೂ ನೋಡಬೇಕು. ಆದ್ದರಿಂದ ನಾನು ಇದನ್ನು ಪುನರ್‌ವಿಮರ್ಶೆ ಮಾಡಬೇಕು ಎಂದು ಹೇಳುತ್ತೇನೆ.

ಮೂರನೆಯದಾಗಿ, ವ್ಯಾಲಿಡೇಷನ್‌ನ್ನು ಕೆಲವು ಸದಸ್ಯರು ವಿರೋಧ ಮಾಡಿದರು. ಇಲ್ಲಿ ಎಲ್ಲಾ ಕಡೆಯಿಂದಲೂ ಅಬ್ಜೆಕ್ಷನ್ ಬಂದಾಗ ಇದಕ್ಕೆ ಒಂದು ಸ್ಪೆಷಲ್ ಕಮಿಟಿಯನ್ನು ಮಾಡಿ ನ್ಯಾಯವಾದ ರೇಟನ್ನು ಸರ್ಕಾರದವರು ಜಾರಿಗೆ ತಂದರು. ಹಿಂದಿನ ಸರ್ಕಾರದವರು ಆಗ ಏಕ್‌ದಂ ರೇಟನ್ನು ಏರಿಸಿದರು. ಅವರು ಯಾವ ಆಧಾರವೂ ಇಲ್ಲದೆ ದರವನ್ನು ಏರಿಸಿದ್ದರು. ಆಗ ಕಮಿಟಿಯವರು ಕೂಲಂಕುಷವಾಗಿ ಪರಿಶೀಲನೆ ಮಾಡಿ ನ್ಯಾಯವಾದ ರೇಟನ್ನು ಗೊತ್ತು ಮಾಡಿದಾಗ ಅದನ್ನು ಮುಂದುವರಿಸಬೇಕೇ ಹೊರತು ತೆಗೆದುಹಾಕಬಾರದು, ಏನಾದರೂ ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸುವುದು ಯೋಗ್ಯ. ಆದ್ದರಿಂದ ಈ ತಿದ್ದುಪಡಿಯನ್ನು ನಾನು ಬೆಂಬಲಿಸುತ್ತೇನೆ.

ಶ್ರೀ ಬಿ. **ದೊಡ್ಡಬೋರೇಗೌಡ** (ಮಂಡ್ಯ).— ಸನ್ಮಾನ್ಯ ಸಭಾಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಅರಣ್ಯ ಸಂಪತ್ತು ಒಂದಾನೊಂದು ಕಾಲದಲ್ಲಿ ಬಹಳ ಹೆಸರುವಾಸಿಯಾಗಿತ್ತು. ಇತ್ತೀಚಿನ ಕಾಲದಲ್ಲಿ ಅರಣ್ಯ ಸಂಪತ್ತು ಕೇವಲ ಕೆಲವೇ ಜನರ ಸ್ವತ್ತಾಗಿದೆ. ಕೆಲವರು ಇದನ್ನು ತಮ್ಮ ಮನೆಯ ಸ್ವತ್ತನ್ನಾಗಿ ಮಾಡಿಕೊಂಡಿದ್ದಾರೆ. ಒಂದು ಟನ್ ನೀಲಗಿರಿ ಮರಗಳನ್ನು ನಾವು ಬೆಳೆಯುವುದಕ್ಕೆ ಸುಮಾರು 250 ರೂಪಾಯಿಗಳು ನಮಗೆ ಖರ್ಚಾಗುತ್ತದೆ. ಆದರೆ ಸರ್ಕಾರದವರು ಇದನ್ನು ಬೇರೆಯವರಿಗೆ ಮಾರಾಟ ಮಾಡುವ ಬೆಲೆ ಒಂದು ಟನ್‌ಗೆ 125 ರೂಪಾಯಿಗಳು. ಓಪನ್ ಮಾರ್ಕೆಟ್‌ನಲ್ಲಿ ಇದು 500-600 ರೂಪಾಯಿಗಳವರೆಗೆ ಒಂದು ಟನ್ ಇದೆ. ಇಲ್ಲಿ ಸರ್ಕಾರದವರು ಶ್ರೀಮಂತರನ್ನು ಶ್ರೀಮಂತರನ್ನಾಗಿ ಮಾಡತಕ್ಕ ಕೆಲಸ ನಡೆದಿದೆ. ಅರಣ್ಯ ಸಂಪತ್ತು ಸಾಮಾನ್ಯ ಜನರಿಗೆ ಸಿಕ್ಕದ ಹಾಗೆ ಆಗಿದೆ. ಹಿಂದೆ ಇಂಥ ಅವ್ಯವಹಾರಗಳು ಬೇಕಾದಷ್ಟು ನಡೆದಿವೆ. ಇವುಗಳನ್ನು ಮುಟ್ಟುಗೋಲು ಹಾಕಲು ಸರ್ಕಾರ ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ.

ಈಗ ಸರ್ಕಾರದವರು ತಂದಿರತಕ್ಕ ತಿದ್ದುಪಡಿಯಲ್ಲಿ ಕಳ್ಳಸಾಗಾಣಿಕೆ ಮಾಡುವವರಿಗೆ ಶಿಕ್ಷೆ ಕೊಡುವುದನ್ನು ಕಡಿಮೆ ಮಾಡಿದ್ದಾರೆ. ಈಗಾಗಲೇ ರಾಜ್ಯದಲ್ಲಿ ಗಂಧದ ತುಂಡುಗಳನ್ನು ಕಳ್ಳಸಾಗಾಣಿಕೆ ಮಾಡತಕ್ಕ ವ್ಯವಸ್ಥೆ ಇದೆ. ಗಂಧದ ಮರವನ್ನು ಕಳ್ಳಸಾಗಾಣಿಕೆ ಮಾಡುವವರು ಭಾರಿ ಲಾಭವನ್ನು ಸಂಪಾದಿಸಿ ಸುಮಾರು 8–10 ವರ್ಷಗಳಲ್ಲಿಯೇ ಬಹಳ ಶ್ರೀಮಂತರಾಗಿದ್ದಾರೆ. ಇಂಥ ವಿಷಯಗಳನ್ನು ಸರ್ಕಾರದವರು ಕೂಲಂಕುಷವಾಗಿ ಪರಿಶೀಲನೆ ಮಾಡಬೇಕು ಎಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಸಾ ಮಿಲ್‌ಗಳಲ್ಲಿಯೂ ಸಹ ಸರ್ಕಾರದಿಂದ ಕೊಂಡ ಮರಕ್ಕಿಂತಲೂ ಜಾಸ್ತಿ ಮರ ಇರುವುದನ್ನು ನಾವು ನೋಡಬಹುದಾಗಿದೆ. ಈ ಮರ ಇವರಿಗೆ ಎಲ್ಲಿಂದ ಬಂತು? ಇದರ ಬಗ್ಗೆ ಯೂ ಸಹ ಸರ್ಕಾರದವರು ಸೂಕ್ತ ಕ್ರಮ ಕೈಗೊಂಡು ಕಳ್ಳಸಾಗಾಣಿಕೆಯನ್ನು ತಪ್ಪಿಸಬೇಕು. ಸರ್ಕಾರದವರು ಸಾಮಾನ್ಯ ವ್ಯವಸಾಯಗಾರರಿಗೆ ತೆರಿಗೆ ಹಾಕುತ್ತಿರುವಾಗ ಅರಣ್ಯ ಸಂಪತ್ತನ್ನು ವ್ಯವಸ್ಥಿತವಾದ ರೀತಿ

ಯಲ್ಲಿ ಉಪಯೋಗ ಮಾಡಿಕೊಂಡು ಹೋಗುತ್ತಿರುವವರಿಗೆ ಏಕೆ ರಿಯಾಯಿತಿ ಕೊಡಬೇಕು? ಆದ್ದರಿಂದ ಇರತಕ್ಕ ಶಿಕ್ಷೆಯನ್ನು ತಾವು ಸಡಿಲ ಮಾಡುವುದು ಬೇಡ, ಇನ್ನೂ ಉಗ್ರವಾದ ಶಿಕ್ಷೆಯನ್ನು ಕೊಡಲಿಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಎಂ. ಬಿ. ನಾಯಕ್.— ಮಾನ್ಯ ಅಧ್ಯಕ್ಷರೇ, ಹಿಂದಿನ ಕಾಲದಲ್ಲಿ ಕರ್ನಾಟಕವನ್ನು ಗಂಧದ ಗುಡಿ ಎಂದು ಹೇಳುತ್ತಿದ್ದರು. ಅದಕ್ಕೋಸ್ಕರ ಹಿರಿಯರು ಒಂದು ಕಾನೂನನ್ನು ತಂದಿದ್ದರು. ಈಗ ಅದನ್ನು ನಾವು ವಿರೋಧ ಮಾಡುವುದು ಸೂಕ್ತವಲ್ಲ. ಈ ಮಸೂದೆಯ ಮೂಲಕ ತಾವು ಕಳ್ಳ ಸಾಗಾಣಿಕೆ ಮಾಡುವವರಿಗೆ ಶಿಕ್ಷೆಯನ್ನು ಕಡಿಮೆ ಮಾಡಲು ಹೊರಟಿರುವುದು ಅವರಿಗೆ ಉತ್ತೇಜನ ಕೊಟ್ಟ ಹಾಗೆ ಆಗುತ್ತದೆ. ಕೆಲವರು ಕಳ್ಳಸಾಗಾಣಿಕೆಯಿಂದ ಕೋಟ್ಯಾಂತರ ರೂಪಾಯಿಗಳನ್ನು ಗಳಿಸಿದ್ದಾರೆ. ಅದಕ್ಕೆ ನಿಮ್ಮ ಇಲಾಖೆಯವರೂ ಸಹ ಶಾಮೀಲಾಗಿದ್ದಾರೆ. ಅದಕ್ಕೋಸ್ಕರ ಹಿಂದಿನ ಕಾನೂನುಗಳು ಯಾವ ರೀತಿಯಲ್ಲಿದ್ದವೋ ಅದೇ ರೀತಿಯಲ್ಲಿಟ್ಟು ರಾಜ್ಯದಲ್ಲಿರುವ ಗಂಧದ ಮರಗಳು ಹಾಗೂ ಇತರೆ ಮರಗಳು ಕಳ್ಳಸಾಗಾಣಿಕೆ ಮಾಡುವುದನ್ನು ತಪ್ಪಿಸಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.— ಮಾನ್ಯ ಉಪಾಧ್ಯಕ್ಷರೇ, ಈ ತಿದ್ದುಪಡಿಯ ಮಸೂದೆಯನ್ನು ನಾನೂ ಕೂಡ ಸ್ವಾಗತ ಮಾಡುತ್ತೇನೆ. ಕಾರಣ, ಕಳ್ಳಸಾಗಾಣಿಕೆಯಿಂದ ಅನೇಕರು ಇವತ್ತು ಕೋಟ್ಯಾಧೀಶರಾಗಿದ್ದಾರೆ, ಆಗುತ್ತಿದ್ದಾರೆ. ಅರಣ್ಯ ಸಂಪತ್ತನ್ನು ರಾಜ್ಯದಲ್ಲಿ ಕದಿಯುವುದಕ್ಕೆ ಇತಿ ಮಿತಿಯಿಲ್ಲದೆ ಆಗಿದೆ. ಇದರಲ್ಲಿ ವಿಪರೀತವಾದ ಮೋಸ ನಡೆಯುತ್ತಿದೆ. ಮಾನ್ಯ ದೊಡ್ಡಬೈರೇಗೌಡರು ಹೇಳಿದ ಹಾಗೆ ನಾವು ಒಂದು ಟನ್ ನೀಲಗಿರಿ ಮರವನ್ನು ಬೆಳೆಯುವುದಕ್ಕೆ ಸುಮಾರು 250 ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ ಆದರೆ ಅದನ್ನೇ ಸರ್ಕಾರದವರು ಮಾರುವಂಥ ಬೆಲೆ 125 ರೂಪಾಯಿಗಳು. ಇದರಿಂದ ಶ್ರೀಮಂತರು ಶ್ರೀಮಂತರಾಗುತ್ತಿದ್ದಾರೆಯೇ ಹೊರತು ಬಡವರು ಶ್ರೀಮಂತರಾಗುತ್ತಿಲ್ಲ. ಇವತ್ತು ದೇಶದ ಅರಣ್ಯ ಸಂಪತ್ತು ಏನು ಇದೆ ಅದರಿಂದ ಹೆಚ್ಚಿನ ಉತ್ಪನ್ನ ಬಂದು ರಾಜ್ಯದ ಬೊಕ್ಕಸಕ್ಕೆ ತುಂಬಬೇಕು. ಹಿಂದೆ ಯಾರೋ ಏನೋ ಮಾಡಿದ್ದಾರೆಂದು ನಾವು ಇಲ್ಲಿ ಚರ್ಚೆ ಮಾಡುವುದು ಬೇಡ. ಇದು ಕೇವಲ ಕೆಲವೇ ಜನರಿಗೆ ಸೇರಿರತಕ್ಕ ವಿಚಾರವಲ್ಲ. ಹಿಂದೆ ಕೈಗಾರಿಕೆಗಳವರಿಗೆ ಕಾಡಿನಲ್ಲಿ ಮರಗಳನ್ನು ಏನು ಅಗ್ರಿಮೆಂಟ್ ಮಾಡಿಕೊಳ್ಳುತ್ತಿದ್ದರೋ ಅದರ ಪರವಾವಧಿಯನ್ನು ಈ ಮಸೂದೆಯಲ್ಲಿ ಐದು ವರ್ಷಗಳಿಗೆ ಇಳಿಸಬೇಕು ಎಂದು ತಿಳಿಸಿದ್ದಾರೆ. ಅಗ್ರಿಮೆಂಟ್‌ನ್ನು ಕೊಡುವ ನೆಪದಲ್ಲಿ ಅಧಿಕಾರಿಗಳೆಲ್ಲ ಕೋಟ್ಯಾಧೀಶ್ವರರಾಗುವಂತೆ ಮಾಡತಕ್ಕ ಕಾರ್ಯ ಈ ದೇಶದಲ್ಲಿ ನಡೆಯಬಾರದು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ಕೆಲವೇ ಜನರ ಸ್ವತ್ತಾಗಬಾರದು. ಮತ್ತು ನಮ್ಮ ದೇಶದ ಮರಗಳು ಬೇರೆ ದೇಶಕ್ಕೆ ಕಳ್ಳಸಾಗಾಣಿಕೆಯಲ್ಲಿ ಹೋಗುವುದನ್ನು ತಪ್ಪಿಸಬೇಕು ಎಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡಿ, ಈ ಮಸೂದೆಗೆ ಬೆಂಬಲ ಕೊಟ್ಟು ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.— ಸನ್ಮಾನ್ಯ ಸಭಾಧ್ಯಕ್ಷರೇ, ಇದು ನಾವು ಸ್ವಾಗತಿಸಬೇಕಾದಂಥ ಮಸೂದೆ. 20-30 ವರ್ಷದ ಅಗ್ರಿಮೆಂಟನ್ನು ಮಾಡಿಕೊಂಡು ಅನೇಕ ಕೈಗಾರಿಕೆಗಳವರು ಅದರಲ್ಲಿಯೂ ದಾಂಡೇಲಿಯ ವೆಸ್ಟ್‌ಕೋಸ್ಟ್ ಪೇಪರ್ ಮಿಲ್‌ನವರು 15-20 ರೂಪಾಯಿಗಳ ಬೆಲೆಯಲ್ಲಿ ಮರವನ್ನು ಕೊಂಡಿದ್ದನ್ನು ನಾವು ಓದಿದ್ದೇವೆ. ಟಾಟಾ ಮತ್ತು ಬಿರ್ಲಾಗಳಿಗೆ ಯೂಕಲಿಪ್ಟಸ್ ಮರವನ್ನು ಅತಿ ಕಡಿಮೆ ಬೆಲೆಯಲ್ಲಿ ಕೊಡುವಂತೆ ಒಪ್ಪಂದ ಮಾಡಿಕೊಂಡು ದೇಶದ ಸಂಪತ್ತನ್ನು ಹಾಳು ಮಾಡಿದ್ದಾರೆ. ಈ ರೀತಿಯಲ್ಲಿ ಶ್ರೀಮಂತರಿಗೆ ಸರ್ಕಾರವೇ ಉತ್ತೇಜನ ಕೊಟ್ಟು, ದೇಶದಲ್ಲಿ ಗುತ್ತೇದಾರಿ ಬಂಡವಾಳ ಶಾಹಿಗಳನ್ನು ಬಲವಂತರನ್ನಾಗಿ ಮಾಡುತ್ತಿದ್ದಾರೆ. ಆದ್ದರಿಂದ ಈ ಮಸೂದೆಯಲ್ಲಿ 20-30 ವರ್ಷಗಳಿಗೆ ಅಗ್ರಿಮೆಂಟ್ ಮಾಡಿಕೊಳ್ಳುವುದನ್ನು ತಪ್ಪಿಸಿ ಐದು ವರ್ಷಗಳಿಗೆ ಒಪ್ಪಂದ ಮಾಡಿಕೊಳ್ಳುವಂತೆ ಪ್ರಾವಿಷನ್ ಮಾಡಿರುವುದು ಒಳ್ಳೆಯದು. ದೇಶದ ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವುದಕ್ಕೆ ಈ ಮಸೂದೆಯನ್ನು ಏನು ತಂದಿದ್ದಾರೆ ಅದನ್ನು ನಾವೆಲ್ಲರೂ ಸ್ವಾಗತ ಮಾಡಬೇಕು. ಐದು ವರ್ಷದ ಮೇಲೆ ಇವರಿಗೆ ಮತ್ತೆ ಒಪ್ಪಂದವನ್ನು ಮಾಡಿಕೊಂಡು ಹಾಗೆಯೇ ಮುಂದುವರಿಸಿಕೊಂಡು ಹೋಗುವುದನ್ನು ನಾವು ಒಪ್ಪುವುದಕ್ಕೆ ಸಾಧ್ಯವಿಲ್ಲ. ನಮ್ಮ ಜನರು ಒಂದು ಜೋಪಡಿಯನ್ನು ಹಾಕಿಕೊಳ್ಳಬೇಕೆಂದರೂ ಸಾಧ್ಯವಿಲ್ಲವಾಗಿದೆ. ಅನಂತರ ಈ ಕಳ್ಳಸಾಗಾಣಿಕೆ ಮಾಡುವವರಿಗೆ ಕೆಲವು ರಾಜಕೀಯ ಪಕ್ಷಗಳ ಬೆಂಬಲವೂ ಇದೆಯೆಂದು ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ಓದಿದ್ದೇನೆ. ಆದ್ದರಿಂದ ಅವರಿಗೆ ಶಿಕ್ಷೆಯನ್ನು ಯಾವ ವಿಧದಲ್ಲಿಯೂ ಕಡಿಮೆ ಮಾಡಬಾರದು. ಇನ್ನೂ ಉಗ್ರವಾದ ಶಿಕ್ಷೆಯನ್ನು ಕೊಟ್ಟು ಅರಣ್ಯ ಸಂಪತ್ತು ಲೂಟಿಯಾಗದಂತೆ ನೋಡಿಕೊಳ್ಳಬೇಕಾದ್ದು ಸರ್ಕಾರದ ಕರ್ತವ್ಯ. ಈ ದಿಸೆಯಲ್ಲಿ ದಿಟ್ಟ ಹೆಜ್ಜೆ ಇಟ್ಟಿರುವುದನ್ನು ನಾವು ಸ್ವಾಗತ ಮಾಡಬೇಕಾಗಿದೆ. ಒಟ್ಟಿನಲ್ಲಿ ರಾಜ್ಯದ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವುದು ಮತ್ತು ಕಳ್ಳಸಾಗಾಣಿಕೆಯನ್ನು ತಪ್ಪಿಸಲು ಹೊರಟಿರುವ ರೀತಿಯಲ್ಲಿ ಪೊಲಿಟಿಕಲ್ ವಿಲ್‌ನಿಂದ ಸರ್ಕಾರದವರು ಈ ಮಸೂದೆಯನ್ನು ಏನು ತಂದಿದ್ದಾರೆ ಅದನ್ನು ನಾನು ಬೆಂಬಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಜಿ. ಚನ್ನಪ್ಪ.— ಮಾನ್ಯ ಸಭಾಧ್ಯಕ್ಷರೇ, ಈ ದಿವಸ ಸದನದ ಮುಂದೆ ತಂದಿರತಕ್ಕ ಅರಣ್ಯಕ್ಕೆ ಸಂಬಂಧಪಟ್ಟ ಮಸೂದೆಯನ್ನು ನಾನು ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ಕೊಡುವುದಕ್ಕೆ ನಾನು ಇಷ್ಟಪಡುತ್ತೇನೆ. ಕರ್ನಾಟಕದಲ್ಲಿ ಸುಮಾರು 20 ವರ್ಷಗಳಿಂದ ನಾವು ಅರಣ್ಯವನ್ನು ನೋಡುತ್ತಾ ಬಂದಿದ್ದೇವೆ. ಈಗ ಅರಣ್ಯವೇ ಇಲ್ಲವಾಗಿ ಎಲ್ಲಾ ಕಡೆಯಲ್ಲಿಯೂ ಬಯಲು ಸೀಮೆ ಕಾಣುತ್ತಿದೆ. ಈ ಅರಣ್ಯ ದಟ್ಟವಾಗಿದ್ದಾಗ ಇಲಾಖೆಯಲ್ಲಿ ಅಧಿಕಾರಿಗಳ ಸಂಖ್ಯೆ ಕಡಿಮೆಯಾಗಿತ್ತು, ಅರಣ್ಯ ಕಡಿಮೆಯಾದಾಗ ಅಧಿಕಾರಿಗಳ ಸಂಖ್ಯೆಯೂ ಸಹ ಜಾಸ್ತಿಯಾಗುತ್ತಿದೆ. ಮೊದಲು ಎರಡು ಅಥವಾ ಮೂರು ಜನ ರೇಂಜರ್ಸ್ ಇರುತ್ತಿದ್ದು ಒಬ್ಬರು ಕನ್ಸರ್ವೇಟರ್ಸ್ ಇದ್ದರು ಈಗ ಜಿಲ್ಲಾ ಅರಣ್ಯ ಅಧಿಕಾರಿಗಳು, ರೇಂಜರ್ಸ್, ಗಾರ್ಡ್ಸ್ ಮತ್ತು ಕನ್ಸರ್ವೇಟರ್ಸ್ ಎಂದು ಬಹಳ ಜನ ಇದ್ದಾರೆ. ಇದರಿಂದ ಅರಣ್ಯ ಲೂಟಿಯಾಗುತ್ತಿದೆಯೇ ಹೊರತು ಅರಣ್ಯ ಬೆಳೆಯುತ್ತಿಲ್ಲ. ಅಧಿಕಾರಿಗಳ ಸಂಖ್ಯೆ ಜಾಸ್ತಿಯಾದ ಹಾಗೆ ಅರಣ್ಯವೂ ಜಾಸ್ತಿಯಾಗಿ ಬೆಳೆಯಬೇಕು. ಆದರೆ ಈ ರೀತಿಯಾಗದೆ ಅಧಿಕಾರಿಗಳೇ ಅರಣ್ಯವನ್ನು ಹಂಚಿಕೊಂಡಿರುವುದರಿಂದ ವರ್ಷ ವರ್ಷ ಕಾಡು ಹಾಳಾಗಿ ಹೋಗುತ್ತಿದೆ. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವುದರಲ್ಲಿ ಏನೂ ಅರ್ಥವಿಲ್ಲ ಇದಲ್ಲದೆ, ಕೈಗಾರಿಕೆಗಳವರಿಗೆ ನೂರು ಎಕರೆಗಳನ್ನು ಲೀಸ್ ಕೊಟ್ಟರೆ ಅಧಿಕಾರಿಗಳು ಶಾಮೀಲು ಆಗಿ ಸಾವಿರಾರು ಎಕರೆಗಳವರೆಗೆ ಮರಗಳನ್ನು ಕಡಿಯಲು ಅವಕಾಶ ಕೊಟ್ಟಿರುವ ನಿದರ್ಶನಗಳು ಬೇಕಾದಷ್ಟು ಇವೆ. ಆದ್ದರಿಂದ ಲೀಸ್ ಕೊಡತಕ್ಕ ವಿಷಯದಲ್ಲಿ ಸರ್ಕಾರದವರು ಸೂಕ್ತಕ್ರಮ ತೆಗೆದುಕೊಳ್ಳಬೇಕು ಇಲ್ಲದೇ ಹೋದರೆ ಇದನ್ನು ತಪ್ಪಿಸಿದರೂ ಸಹ ಒಳ್ಳೆಯದು ಎಂದು ನಾನು ಸಲಹೆ ಮಾಡುತ್ತೇನೆ. ದಾಂಡೇಲಿ ಪೇಪರ್ ಮಿಲ್‌ನವರು ನಮ್ಮಿಂದ ಮರವನ್ನು ಪಡೆದು ಪೇಪರನ್ನು ತಯಾರು ಮಾಡಿ ಅದನ್ನು ಬೊಂಬಾಯಿಗೆ ಕಳುಹಿಸಿ, ನಮಗೆ ಅಲ್ಲಿಂದ ಹೆಚ್ಚಿನ ದರದಲ್ಲಿ ಪೇಪರನ್ನು ಪಡೆಯುವಂತೆ ಮಾಡುತ್ತಿದ್ದಾರೆ. ಇದನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡು ಈ ರೀತಿಯಾಗುವುದನ್ನು ತಪ್ಪಿಸಬೇಕು.

ಕಾಡುಗಳನ್ನು ಕಡಿಯುತ್ತಿರುವಂಥ ಕೆಲಸಗಳು ನಡೆಯುತ್ತಲೇ ಇರುವಾಗ ಇಂಥ ಮಸೂದೆಗಳನ್ನು ಏತಕ್ಕೆ ತರಬೇಕು ? ಕಾಡುಗಳನ್ನು ಸರಿಯಾದ ರೀತಿಯಲ್ಲಿ ಸಂರಕ್ಷಣೆ ಮಾಡುವಂಥ ಶಕ್ತಿ ಇಲ್ಲದೇ ಹೋದರೆ, ಅಧಿಕಾರಿಗಳು ಏತಕ್ಕೆ ಬೇಕು ? ಇವತ್ತು ನಮ್ಮ ದೇಶವನ್ನು ಅಡ ಇಟ್ಟು; ಕಾಡು ಸಂರಕ್ಷಣೆಗಾಗಿ ವಿಶ್ವ ಬ್ಯಾಂಕಿನಿಂದ ಹಣ ತರುತ್ತಿದ್ದಾರೆ. ನಾವು ಚಿಕ್ಕವರಾಗಿದ್ದಾಗ ಇದ್ದಂಥ ಕಾಡು ಇವತ್ತು ಇಲ್ಲ. ನನ್ನ ಜೊತೆಯಲ್ಲಿ 10 ಗಂಟೆಗೆ ಬನ್ನಿ; ಹುಣಿಸೆ ಮರಗಳನ್ನು ಸಿಗಿದು ಲೋಡುಗಟ್ಟಲೆ ಸಾಗಿಸುವುದನ್ನು ತೋರಿಸುತ್ತೇನೆ.

ಇನ್ನು ಕೇಂದ್ರ ಸರ್ಕಾರದವರು ಶಿಕ್ಷೆ ಕೊಡುವುದನ್ನು ಕಡಿಮೆ ಮಾಡಬೇಕೆಂದು ಹೇಳುವುದು ಸರಿಯಲ್ಲ. ಈಗ ಇರುವಂಥ ಶಿಕ್ಷೆಯಲ್ಲಿಯೇ ಕಾಡು ಇಲ್ಲದಿರುವಾಗ, ಕೊಡತಕ್ಕ ಶಿಕ್ಷೆಯನ್ನು ಕಡಿಮೆ ಮಾಡಿದರೆ, ಯಾರನ್ನೂ ಲೆಕ್ಕಕ್ಕೆ ಇಟ್ಟುಕೊಳ್ಳದೇ ಕಾಡನ್ನು ಹಾಳು ಮಾಡುತ್ತಾರೆಂದು ಹೇಳುತ್ತೇನೆ. ಕಳ್ಳತನ ಮಾಡುವವರಿಗೆ ಕೈಕಾಲು ಕತ್ತರಿಸುವಂಥ ಉಗ್ರವಾದ ಶಿಕ್ಷೆ ಇರಬೇಕು. ಇವತ್ತು ದೇಶದಲ್ಲಿ ಕಾಡು ನಾಶವಾಗಿರುವುದರಿಂದ ಮಳೆಬೆಳೆ ಕೂಡ ಕಡಿಮೆಯಾಗಿರುವುದನ್ನು ಕಾಣುತ್ತಿದ್ದೇವೆ. ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಗುತ್ತಿಗೆ ಕೊಡುವುದನ್ನು ಮೊದಲು ಕಡಿಮೆ ಮಾಡಬೇಕೆಂದು ಹೇಳುತ್ತೇನೆ. 30-40 ವರ್ಷಗಳು ಲೀಸ್ ಕೊಡುವುದನ್ನು ಮೊದಲು ನಿಲ್ಲಿಸಬೇಕು. ಕಾಡಿಗೂ ರೈತರಿಗೂ ಸಂಬಂಧವಿದೆ. ರೈತರ ಮೇಲೆ ಹೆಚ್ಚು ಹೊರೆ ಹಾಕುವುದನ್ನು ಕಡಿಮೆ ಮಾಡಬೇಕು; ರೈತರ ಮೇಲೆ ಹೊರಲಾರದಷ್ಟು ಹೊರೆ ಹಾಕಿದ್ದೀರಿ; ಇದನ್ನು ತಪ್ಪಿಸಿ; ಅರಣ್ಯವನ್ನು ಸಂರಕ್ಷಣೆ ಮಾಡುವಂಥ ಕೆಲಸವನ್ನು ಸರ್ಕಾರದವರು ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ. ತಿಪ್ಪಯ್ಯ.— ಮಾನ್ಯ ಅಧ್ಯಕ್ಷರೇ, ಇವತ್ತು ರಾಜ್ಯದಲ್ಲಿ ಹಾಗೂ ರಾಷ್ಟ್ರದಲ್ಲಿ ಸಸ್ಯ ಸಂಪತ್ತನ್ನು, ವನ ಸಂಪತ್ತನ್ನು ಉಳಿಸಿಕೊಳ್ಳುವುದಕ್ಕೆ ಅಸಮರ್ಥರಾಗಿರುವುದರಿಂದಲೇ ಪ್ರಕೃತಿ ವಿಕೋಪಕ್ಕೆ ತುತ್ತಾಗುತ್ತಿದ್ದೇವೆ. ರಾಷ್ಟ್ರದಲ್ಲಿರತಕ್ಕ ಕಡಗಳ್ಳರು; ಮತ್ತು ಕಾಡುಗಳ್ಳರನ್ನು ಪತ್ತೆ ಮಾಡತಕ್ಕ ಸಿಬ್ಬಂದಿಗಳ ಜೊತೆಯಲ್ಲಿ ಕೆಲವು ರಾಜಕಾರಣಿಗಳು ಸೇರಿಕೊಂಡಿದ್ದಾರೆಂದು ಮಾನ್ಯ ಮಿತ್ರರು ಹೇಳಿದರು. ಇದರಿಂದ ಅಧಿಕಾರಿಗಳು ನಿರ್ಭಯವಾಗಿ ತಮ್ಮ ಕೆಲಸವನ್ನು ಮಾಡುವುದಕ್ಕೆ ತೊಂದರೆಯಾಗುತ್ತದೆ. ವನಸಂಪತ್ತನ್ನು ಹಾಳು ಮಾಡುವವರನ್ನು ರಕ್ಷಿಸುವಂಥ ಕೆಲಸವನ್ನು ನಮ್ಮ ಸರ್ಕಾರದವರು ಮುಂದುವರಿಸಿಕೊಂಡು ಹೋದರೆ, ಕೆಟ್ಟ ಹೆಸರು ಬಂದೇ ಬರುತ್ತದೆ. ಆದ್ದರಿಂದ ಅಧಿಕಾರಿಗಳಿಗೆ ಸೂಕ್ತ ಎಚ್ಚರಿಕೆಯನ್ನು ಕೊಡಬೇಕೆಂದು ಹೇಳುತ್ತೇನೆ. ಇರತಕ್ಕಂಥ ಶಿಕ್ಷೆಯು ಕಡಿಮೆಯಾಗಿರುವುದರಿಂದ ಸಂಪೂರ್ಣವಾಗಿ ಕಾಡಿನ ಲೂಟಿಯಾಗುತ್ತದೆ ಕಳ್ಳತನ ಮಾಡಿದವರಿಗೆ ಉಗ್ರವಾದ ಶಿಕ್ಷೆ ವಿಧಿಸಬೇಕು. ಯಾವುದೇ ಕಾರಣದಿಂದಲೂ ಶಿಕ್ಷೆಯನ್ನು ಕಡಿಮೆ ಮಾಡಬಾರದೆಂದು ಹೇಳುತ್ತೇನೆ. ಸ್ಮಗ್ಲಿಂಗ್ ಮಾಡುವವರನ್ನು ಹಿಡಿಯುವುದಕ್ಕೆ ಹೋದಾಗ ಗಾಡಿಗಳು, ಲಾರಿಗಳನ್ನು ಅಲ್ಲಿಯೇ ಬಿಟ್ಟು ಹೋಗುತ್ತಾರೆ; ಗಾಡಿಗಳನ್ನು ಬಿಟ್ಟು ಹೋದರೂ ಅದರಲ್ಲಿರುವ ಸಾಮಾನುಗಳನ್ನು ಕೂಡಲೇ ಹರಾಜು ಮಾಡುವಂಥ ಪದ್ಧತಿಯನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ. ವರ್ಷಗಟ್ಟಲೆಯಾದರೂ ಸಾಮಾನುಗಳು ಹರಾಜು

ಮಾಡಿರುವುದಿಲ್ಲ. ಸಂಬಂಧಪಟ್ಟ ಗಾಡಿಗಳನ್ನು ಹರಾಜು ಮಾಡಿರುವುದಿಲ್ಲ. ಈ ರೀತಿ ವಶಪಡಿಸಿ ಕೊಂಡಂಥ ವಸ್ತುಗಳನ್ನು ಕೂಡಲೇ ಹರಾಜು ಮಾಡಿದರೆ; ಸರ್ಕಾರದ ಬೊಕ್ಕಸಕ್ಕೆ ಸಾಕಷ್ಟು ಹಣ ಬರುತ್ತದೆ. ಇವತ್ತು ರೈತರಿಗೂ ಮತ್ತು ಕಾಡಿಗೂ ಬಹಳ ನಂಟು ಇದೆ. ರೈತನಾದವನು ಬೇಸಾಯಕ್ಕೆ ಬೇಕಾದ ಮರಮುಟ್ಟುಗಳನ್ನು ಕಾಡಿನಿಂದಲೇ ಪಡೆಯಬೇಕು. ಬೇಸಾಯದ ಸಾಮಾನುಗಳಿಗೆ ದುಬಾರಿ ದರ ಹಾಕಿದರೆ ಯಾವ ರೈತನು ಕೊಂಡುಕೊಳ್ಳುವುದಕ್ಕಾಗುವುದಿಲ್ಲ; ಸುಲಭ ದರದಲ್ಲಿ ಸಾಮಾನುಗಳನ್ನು ಒದಗಿಸುವಂಥ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಪರ್ಮಿಟ್‌ಗಳ ವಿಚಾರದಲ್ಲಿ ಹೇಳುವು ದಾದರೆ, ಫೋಟ್‌ಸ್ಟೇಟ್ ಪರ್ಮಿಟ್‌ಗಳನ್ನು ಕಂಟ್ರಾಕ್ಟುದಾರರೇ ಇಟ್ಟುಕೊಂಡು ಲಾರಿಗಳನ್ನು ತೆಗೆದು ಕೊಂಡು ಹೋಗುವುದನ್ನು ನೋಡಿದ್ದೇವೆ; ಪರ್ಮಿಟ್ ಪ್ರ್ಯಾಪ್ತಿಯನ್ನು ನಿಮ್ಮ ಹತ್ತಿರ ಇಟ್ಟುಕೊಳ್ಳ ಬೇಕು; ಇನ್ನು ರೈತರಿಗೆ ಬೇಕಾದಂಥ ಉರುವಲು ಕಟ್ಟಿಗೆ ಬಗ್ಗೆ ಹೇಳುವುದಾದರೆ, ಇರತಕ್ಕ ಕಾನೂನಿನ ಪ್ರಕಾರ ಒಂದು ಗಾಡಿ ಸೌದೆ ತರುವುದಕ್ಕೂ ಕಷ್ಟ ಇದೆ. ಮಲೆನಾಡಿನಲ್ಲಿ ಕನಿಷ್ಠ 5 ಗಾಡಿಗಳನ್ನಾದರೂ ಸೌದೆ ತರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ, ಕಾಡು ರಕ್ಷಣೆ ಬಗ್ಗೆ ತಂದಿರುವಂಥ ಅಮೆಂಡ್‌ಮೆಂಟ್‌ನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ.

ಶ್ರೀ ಮಲ್ಲಪ್ಪ.— ಮಾನ್ಯ ಅಧ್ಯಕ್ಷರೇ, ಅರಣ್ಯ ಸಂಪತ್ತಿನ ಬಗ್ಗೆ ಬಹಳ ಜನ ಸ್ನೇಹಿತರು ಮಾತ ನಾಡಿದ್ದಾರೆ. ಎಲ್ಲಾ ಕಡೆ "ಅರಣ್ಯ ಸಂಪತ್ತು ದೇಶದ ಸಂಪತ್ತು" ಎನ್ನುವ ಬೋರ್ಡುಗಳು ಇವೆ. ಆದರೆ, ಇಂದಿನ ಪರಿಸ್ಥಿತಿಯಲ್ಲಿ ಅರಣ್ಯ ನಾಶವಾಗಿರುವಂಥ ಪ್ರದೇಶಗಳಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಅರಣ್ಯ ಭೂಮಿಯನ್ನು ಬಗರ್‌ಹುಕ್ಕುಂ ಮಾಡುತ್ತಿದ್ದಾರೆ. ಮೊದಲು ಇದನ್ನು ತಡೆಗಟ್ಟಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ರಾಜ್ಯದಲ್ಲಿ ಅರಣ್ಯಗಳಲ್ಲಿ ಹಾಕತಕ್ಕ ಸಸಿಗಳು ಯಾವುದೆಂದರೆ ಪ್ರಭಲ ಮರ ಅರ್ಥಾತ್ ನೀಲಗಿರಿ ಮರಗಳನ್ನು ಬೆಳೆಸುತ್ತಿದ್ದಾರೆ. ಹಿಂದೆ ಮಾಡಿಕೊಂಡ ಒಪ್ಪಂದದ ಪ್ರಕಾರ ಒಂದು ಟನ್‌ಗೆ 125 ರೂಪಾಯಿನಂತೆ ಕೋಟ್ಯಾಧಿಪತಿಗಳಿಗೆ ಕೊಡುತ್ತಿರುವುದು ರಾಜ್ಯದ ಜನತೆಗೆ ದ್ರೋಹ ಮಾಡಿದಂತೆ ಎಂದು ಹೇಳಿದರೆ ತಪ್ಪಾಗಲಾರದು ಎಂದು ಭಾವಿಸುತ್ತೇನೆ. ಉರುವಲು ಕಟ್ಟಿಗೆಗೆ 600 ರೂಪಾಯಿ ಒಂದು ಟನ್ನಿಗೆ ಇರುವಾಗ; ಕೇವಲ 125 ರೂಪಾಯಿಗೆ ಒಂದು ಟನ್ ಏತಕ್ಕೆ ಕೊಡ ಬೇಕು. ಒಂದು ಟನ್ ಮರ ಬೆಳೆಸುವುದಕ್ಕೆ 225 ರೂಪಾಯಿ ಖರ್ಚು ಬರುವಾಗ ಈ ರೀತಿ ಕೊಡುವುದು ನ್ಯಾಯವೆ ? ಯಾವ ರೀತಿಯ ಒಪ್ಪಂದವೇ ಆಗಿರಲಿ, ಅತಿ ಕಡಿಮೆ ದರದಲ್ಲಿ ಮರವನ್ನು ಕೊಡುವು ದನ್ನು ನಿಲ್ಲಿಸಿ; ಕಾಲಕ್ಕೆ ಅನುಗುಣವಾಗಿ ದರವನ್ನು ಹೆಚ್ಚು ಮಾಡಬೇಕು. ಹಾಲಿ-ಫೈಬರ್ ಕಾರ್ಖಾನೆಗೆ ಕೊಡುವಂಥ ಉರುವಲು ಕಟ್ಟಿಗೆಯನ್ನು ನಿಲ್ಲಿಸಿದರೆ; ಕಡಿಮೆ ಬೆಲೆಗೆ ರಾಜ್ಯದ ಜನತೆಗೆ ಉರುವಲು ಸಿಗುತ್ತದೆ.

ಇದರಿಂದ ಅರಣ್ಯ ನಾಶಗೊಳಿಸತಕ್ಕದ್ದನ್ನು ತಡೆ ಹಿಡಿಯುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕ ದ್ದನ್ನು ತಮ್ಮ ಮೂಲಕ ಗಮನಕ್ಕೆ ತರಬಯಸುತ್ತೇನೆ. ಈ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ಸರ್ಕಾರದವರ ಗಮನಕ್ಕೆ ತರುವುದಕ್ಕೆ ಬಯಸುವುದೇನೆಂದರೆ, ಹರಿಹರ ಪಾಲಿಫೈಬರ್ಸ್ ಕಂಪನಿ ಏನಿದೆ ಅದೇ ರೀತಿಯಲ್ಲಿ ಒಂದು ಕಾರ್ಖಾನೆ ಹೊಸಪೇಟೆಯಲ್ಲಿ ಮಾಡುವುದಕ್ಕೆ ಪ್ರಯತ್ನ ನಡೆದಿದೆ ಎನ್ನತಕ್ಕ ಮಾತನ್ನು ಕೇಳಿದ್ದೇನೆ. ಅದೇ ರೀತಿ ರಾಣೆಬೆನ್ನೂರು ತಾಲ್ಲೂಕಿನಲ್ಲಿ ಇನ್ನೊಂದು ಕಾರ್ಖಾನೆಯನ್ನು ಪ್ರಾರಂಭ ಮಾಡುವ ಬಗ್ಗೆ ಅರ್ಜಿ ಹಾಕಿಕೊಂಡಿದ್ದಾರೆ ಎಂದು ನನಗೆ ತಿಳಿದು ಬಂದಿದೆ. ನಿಜವಾಗಿಯ ಅವರು ಏನಾದರೂ ಅರ್ಜಿಯನ್ನು ಹಾಕಿಕೊಂಡಿದ್ದರೆ ಅಂಥವರಿಗೆ ಲೈಸನ್ಸ್ ಕೊಡಬಾರದೆಂದು ಸರ್ಕಾರದಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಅಕಸ್ಮಾತ್ ಲೈಸನ್ಸ್‌ನ್ನು ಮಂಜೂರು ಮಾಡಿದ್ದೇ ಆದರೆ ರಾಜ್ಯಕ್ಕೆ ದ್ರೋಹ ಬಗೆದಂತಾಗುತ್ತದೆ. ಸರ್ಕಾರದವರು ಈಗ ತಂದಿರತಕ್ಕ ತಿದ್ದುಪಡಿಯನ್ನು ನಾನು ಒಪ್ಪುತ್ತೇನೆ. ಮತ್ತು ಸ್ವಾಗತಿಸುತ್ತೇನೆ. ಸ್ವಾಮಿ ನಾನು ಬೇರೆ ರಾಜ್ಯಗಳಾದ ಕೇರಳ, ತಮಿಳುನಾಡು, ಉತ್ತರ ಹಿಂದೂಸ್ಥಾನವ ಮತ್ತಿತರ ರಾಜ್ಯಗಳಲ್ಲಿ ನೋಡಿದ್ದೇನೆ, ಎಲ್ಲೂ ಸಹ ನೀಲಗಿರಿ ಮರಗಳು ಇಷ್ಟರ ಮಟ್ಟಿಗೆ ಬೆಳೆದಿಲ್ಲ. ಮತ್ತು ಅದಕ್ಕೆ ಅಲ್ಲಿಯ ಸರ್ಕಾರದವರು ಪ್ರೋತ್ಸಾಹವನ್ನು ನೀಡುತ್ತಿಲ್ಲ ಆದರೆ ನಮ್ಮ ರಾಜ್ಯದವರು ರಾಷ್ಟ್ರೀಯ ಹೆದ್ದಾರಿಯಲ್ಲಿ ಮತ್ತು ರಾಜ್ಯದ ಹೆದ್ದಾರಿಗಳಲ್ಲಿ ಗಿಡಮರ ಗಳನ್ನು ನೆಡಿಸುವುದಕ್ಕೆ ಬದಲಾಗಿ ಈ ನೀಲಗಿರಿ ಮರಗಳನ್ನು ನೆಡಿಸುವುದಕ್ಕೆ ಈಗ ಏನು ಪ್ರೋತ್ಸಾಹ ಕೊಡುತ್ತಿದ್ದಾರೆ, ಅದನ್ನು ಕೂಡಲೇ ನಿಲ್ಲಿಸಬೇಕೆಂದು ವಿನಂತಿ ಮಾಡಿಕೊಂಡು ಈಗ ತಂದಿರತಕ್ಕ ಮಸೂದೆಯನ್ನು ಸ್ವಾಗತಿಸಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ತಿದ್ದುಪಡಿ ವಿಧೇಯಕ ವನ್ನು ನೋಡಿದಾಗ ಬಹಳ ಸರಳವಾದಂಥ ಮತ್ತು ಕೇಂದ್ರ ಸರ್ಕಾರ ಒಂದು ಸೂಚನೆ ಕೊಟ್ಟಿದೆ, ಆ ಸೂಚನೆ ಪ್ರಕಾರ ನಾವು ಈ ವಿಧೇಯಕವನ್ನು ತಂದಿದ್ದೇವೆ ಅದಕ್ಕೆ ಎಲ್ಲಾರೂ ಒಪ್ಪಿಗೆ ಕೊಡಿ ಎಂದು ಹೇಳುವ ರೀತಿಯಲ್ಲಿ ತಂದಿದ್ದಾರೆ. ಮಾನ್ಯ ಲಕ್ಷ್ಮೀಸಾಗರ್ ಅವರು ಏನೋ ಪರಿಣತರಿದ್ದಾರೆ. ಅವರು ಕಾನೂನು ಮಂತ್ರಿಗಳಾದ ಮೇಲೆ ಇದು ಒಂದು ತರದ ಹೊಸ ಅಧ್ಯಾಯ ಪ್ರಾರಂಭವಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.— ನಿಮ್ಮ ಕಾಲದಲ್ಲಿ ಇದ್ದುದ್ದನ್ನೇ ನಾವು ಈಗ ಮುಂದುವರಿಸುತ್ತಿ

ದ್ದೇವೆ. ಹೊಸದಾಗಿ ತಂದಿರತಕ್ಕದ್ದೇನೂ ಅಲ್ಲ. ನೀವು ಅಧಿಕಾರದಲ್ಲಿದ್ದಾಗ ಒಂದು ವಾದ ಅಧಿಕಾರದಲ್ಲಿ ಇಲ್ಲದಿರುವಾಗ ಒಂದು ವಾದ ಮಾಡುವುದಾದರೆ, ಅದಕ್ಕೆ ನಾನೇನು ಹೇಳುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ — ನಿಮ್ಮ ಶಂಖದಿಂದ ತೀರ್ಥ ಬರುತ್ತಿದೆ, ಜನಗಳು ಸ್ವೀಕಾರ ಮಾಡುವಾಗ ಶ್ರೀ ಲಕ್ಷ್ಮೀಸಾಗರ್ ಅವರಿಂದ ತೀರ್ಥ ಬರುತ್ತಿದೆ ಎಂದು ಹೇಳಿ ಜನ ಸ್ವೀಕಾರ ಮಾಡುತ್ತಿದ್ದಾರೆ. ಅಂದರೆ ತಾವು ಏನು ಹೇಳುತ್ತೀರಿ, ಜನ ತಮ್ಮಲ್ಲಿ ವಿಶ್ವಾಸ ಇಟ್ಟುಕೊಂಡಿದ್ದಾರೆ, ಜನ ನಮ್ಮ ಹಿಂದೆ ಇದ್ದಾರೆ ಎಂದು ಹೇಳುತ್ತಿದ್ದೀರಿ. ಆದರೆ ಇವತ್ತು ನಿನ್ನೆ ತಂದಂಥಹ ಎರಡು ಬಿಲ್ಲುಗಳನ್ನು ಟೈಟಲ್ ಮತ್ತು ಪ್ರಿಯಾಂಬಲ್ ನೋಡಿದಾಗ ಏನೋ ಮಹಾ ಕ್ರಾಂತಿಕಾರಕ ಬದಲಾವಣೆ ಆಯಿತು ಎಂದು ನಾವು ತಿಳಿದುಕೊಂಡಿದ್ದೆವು. ಆದರೆ ಮೊದಲನೆ ಪ್ಯಾರಗ್ರಾಫನ್ನು ನೋಡಿ ಸುಮ್ಮನೆ ಇದ್ದುಬಿಟ್ಟಿದ್ದರೆ ಆದರಿಂದ ಜನಗಳಿಗೆ ಮೋಸ ವಂಚನೆ ಆಗುತ್ತಿತ್ತು. ಈ ಬಿಲ್ಲಿನ ಮೊದಲನೆ ಸೆಂಟೆನ್ಸ್‌ನಲ್ಲಿ ಈ ರೀತಿಯಾಗಿದೆ.

"The Government of India while giving their assent to the Karnataka Forest (Amendment) Bill, 1980 had suggested amendments to section 68, 86, 87 of the Karnataka Forest Act to empower the Court to impose lesser sentence of imprisonment and fine."

ಎಂದು ಹೇಳಿ ಅಷ್ಟಕ್ಕೆ ನಿಂತುಬಿಟ್ಟಿಲ್ಲ. ಮತ್ತೆ ಇನ್ನು ಸ್ವಲ್ಪ ಮುಂದಕ್ಕೆ ಹೋಗಿದ್ದೀರಿ. ಕೇಂದ್ರ ಸರ್ಕಾರದವರು ನಮಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ ಎಂದು ಹೇಳಿದ್ದೀರಿ. ಈ ಸದನದ ಸದಸ್ಯರು ಮತ್ತು ಕರ್ನಾಟಕದ ಜನತೆ ಇದನ್ನು ತಿಳಿದುಕೊಳ್ಳಬೇಕಾಗುತ್ತದೆ. ಕೇಂದ್ರ ಸರ್ಕಾರದವರು ಏನು ಸಲಹೆ ಕೊಟ್ಟಿದ್ದಾರೆ ಎನ್ನುವುದನ್ನು ಜನತೆ ತಿಳಿದುಕೊಳ್ಳಬೇಕಾಗುತ್ತದೆ. ಆದರೆ ಇವತ್ತು ಅವರು ಕೊಟ್ಟ ಸಲಹೆಗಿಂತ ಜಾಸ್ತಿ ಬದಲಾವಣೆ ಮಾಡಬೇಕೆಂದು ರಾಜ್ಯ ಸರ್ಕಾರಕ್ಕೆ ಏನಾದರೂ ಸಲಹೆ ಕೊಟ್ಟಿದ್ದಾರೆಯೇ? ಆದರೆ ಕೆಲವು ಸಾರಿ ತೀರ ಅವಶ್ಯಕವಾದರೆ ಮಾತ್ರ ಕೆಲವು ಬದಲಾವಣೆ ಮಾಡಿ ತರಬೇಕಾಗುತ್ತದೆ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಉದಾಹರಣೆಗೆ ಮೊನ್ನೆ ತಂದಂಥ ಬಿಲ್ಲು ಏನಿದೆ, Scheduled Caste prohibition of alienation bill, ಇದರಲ್ಲಿ ಅವರು ಹೇಳಿರುವುದು ಏನೆಂದರೆ You lessen the rigorous and hardship. It is very hard, very rigid, ಆದುದರಿಂದ ಅವರಿಗೆ ಅಪೀಲು ಮಾಡುವುದಕ್ಕೆ ಅವಕಾಶ ಇರಬೇಕೆಂದು ಹೇಳಿದ್ದಾರೆ. Provision to meet the principles of natural justice ಆದರೆ ಇದರಲ್ಲಿ ಯಾವುದೊಂದು ಬದಲಾವಣೆ ಮಾಡಬೇಕೆಂದು ಹೊರಟಿದ್ದೀರೋ ಅದು ಸಂಪೂರ್ಣವಾಗಿ ಮೂಲ ಕಾಯಿದೆ-1964 ಸೆಕ್ಷನ್ 5ರಲ್ಲಿ ಏನಿದೆ, ಇದು ಅದಕ್ಕಿಂತಲೂ ಡೈಲ್ಯೂಟ್ ಆಗುತ್ತದೆ. ಒರಿಜಿನಲ್ ಆ್ಯಕ್ಟ್‌ನಲ್ಲಿ ಅದು ಈಗಾಗಲೇ ಈ ರೀತಿಯಾಗಿದೆ. :

"In any case of forest offence having recourse of cutting, up-rooting or removal or damage to Sandal-wood tree or any part of the sandal-wood tree belonging to the Government, the offender shall on conviction be punishable with imprisonment for a term which may extend to two years or fine which may extend to Rs. 2,000/- or both."

ಅನಂತರ ಅದಕ್ಕೆ ಅಮೆಂಡ್‌ಮೆಂಟ್ ಮಾಡಿದ ಮೇಲೆ ಅದು ಜಾಸ್ತಿಯಾಯಿತು. ಫಸ್ಟ್ ಅಫೆನ್ಸ್‌ಗೆ ಇಷ್ಟು ಸೆಕೆಂಡ್ ಅಫೆನ್ಸ್‌ಗೆ ಇಷ್ಟು ಎಂದು ನಿಗದಿಯಾಯಿತು. ಆದರೆ ತಾವು ಈಗ ತಂದಿರತಕ್ಕ ತಿದ್ದುಪಡಿಯಿಂದ ಅದು 30-20 ರೂಪಾಯಿಗಳ ವರೆಗೆ ಫೈನ್ ಹಾಕಬಹುದಾಗಿದೆ. ಮತ್ತು 3 ವರ್ಷ ಶಿಕ್ಷೆ ಇರತಕ್ಕದ್ದನ್ನು ಕೇವಲ 1 ವರ್ಷಕ್ಕೆ ಮಾಡಬಹುದಾಗಿದೆ. ಆದುದರಿಂದ ಒಟ್ಟಿನಲ್ಲಿ ನೀವು ಈಗ ತರುತ್ತಿರತಕ್ಕ ತಿದ್ದುಪಡಿಯಿಂದ ಈ ಮಸೂದೆಯನ್ನು ತುಂಬಾ ಡೈಲ್ಯೂಟ್ ಮಾಡುತ್ತಿದ್ದೀರಿ

Sri A. Lakshmisagar.— It provides for both imprisonment and fine. Please read it.

Sri M. Veerappa Moily.— it is the Provision for 86 and 87.

"Provided further that the court may, for any adequate and special reasons to be mentioned in the judgement, impose a lesser sentence of imprisonment and fine".

ಶ್ರೀ ಎ. ಲಕ್ಷ್ಮೀಸಾಗರ್.— ಸರಿಯಾಗಿ ನೋಡಿ, ಫೈನ್ ಅಲ್ಲ ಇಂಪ್ರಿಸನ್‌ಮೆಂಟ್ ಎಂದು ಹೇಳಿದ್ದೇವೆ.

Sri M. Veerappa Moily.— I will read it again ...

"Provided further that the court may, for any adequate and special reasons to be mentioned in the judgement, impose a lesser sentence or imprisonment and fine".

3 ವರ್ಷಕ್ಕೆ ಬದಲು ಒಂದು ವಾರ ಎಂದು ಮಾಡಬಹುದು. ಆ ರೀತಿ ಮಾಡದೇ ಇರುವುದಕ್ಕೆ ಪ್ರಾಹಿಬಿಷನ್ ಎಲ್ಲಿದೆ? 25 ಸಾವಿರ ರೂಪಾಯಿಗಳ ಫೈನ್ ಹಾಕುವ ಕಡೆ 10ರೂ., 50ರೂ.ಗಳ ಫೈನ್ ಹಾಕಬಹುದು. ಐ.ಪಿ.ಸಿ. ತಮಗೆ ಗೊತ್ತಿದೆ, ಕೋರ್ಟಿನಲ್ಲಿ ಕೆಲಸ ಮಾಡಿದ ಅನುಭವ ಕೂಡ ತಮಗೆ ಇದೆ. ಎಷ್ಟೋ ಕ್ರಿಮಿನಲ್ ಅಫೆನ್ಸ್ ಮಾಡಿದವರಿಗೆ ಕಡಿಮೆ ಶಿಕ್ಷೆಯಾಗಿರತಕ್ಕದ್ದು ಇದೆ. ಇವತ್ತು ಕಳ್ಳ ಸಾಗಾಣಿಕೆ ಮಾಡತಕ್ಕವರಿಗೆ, ಈ ರಾಜ್ಯದ ಸಂಪತ್ತನ್ನು ಲೂಟಿ ಮಾಡಿ ಕೊಳ್ಳೆ ಹೊಡೆಯುತಕ್ಕವರನ್ನು ಹಿಡಿದು ಶಿಕ್ಷೆ ಮಾಡಿಸುವುದಕ್ಕೆ ನಿಮಗೆ ರಾಜಕೀಯ ಇಚ್ಛಾಶಕ್ತಿ ಇದ್ದ ಹಾಗಿಲ್ಲ. ಅಂಥಾ ಕಳ್ಳಸಾಗಾಣಿಕೆದಾರರನ್ನು, ಲಾಭಕೋರರನ್ನು ಸಂಪೂರ್ಣವಾಗಿ ಹಿಡಿದು ಶಿಕ್ಷೆ ಮಾಡಲಿಕ್ಕೆ ನಿಮಗೆ ಮನಸ್ಸು ಮತ್ತು ಆ ಮನೋಸ್ಥೈರ್ಯ ಇಲ್ಲ. ನಿಮಗೆ ಅವರನ್ನು ಕಂಡರೆ ಹೆದರಿಕೆಯಾಗಿದೆ ಎಂದು ಕಾಣಿಸುತ್ತದೆ. ಅಥವಾ ಯಾರಿಗಾದರೂ ಸಹಾಯ ಮಾಡಬೇಕೆಂದು ಇದನ್ನು ಮಾಡಿದ್ದೀರಾ? I have to make a charage against this Government. ಏಕೆಂದರೆ, ಹಿಂದಿನವರೇ ಡ್ರಾಫ್ಟ್ ಮಾಡಿಬಿಟ್ಟಿದ್ದಾರೆ ಎಂದು ತಾವು ಹೇಳಬಹುದು. ಯಾರು ಡ್ರಾಫ್ಟ್ ಮಾಡಿದ್ದರೂ ಅದು ತಪ್ಪೇ. ಆಗ ನನ್ನ ಗಮನಕ್ಕೆ ಅದುಬರಲಿಲ್ಲ. I was the Minister incharge of Finance. As Minister I have not to know this. May be the charge might have taken place at the official level. They must have drafted... ಆದರೆ ನಮ್ಮ ಮಟ್ಟಿಗೆ ಹೇಳುವುದಾದರೆ at least to that extent you keep the originality ತಾವು ಈ ಕಾನೂನನ್ನು ಸಂಪೂರ್ಣವಾಗಿ ಡಿಲಿಟ್ ಮಾಡಿದ್ದೀರಿ. ದಯಮಾಡಿ ಆಲೋಚನೆ ಮಾಡಿ, ಇದು ಪ್ರತಿಷ್ಠೆ ಪ್ರಶ್ನೆಯಾಗಬಾರದು. ಶ್ರೀಮಾನ್ ಲಕ್ಷ್ಮೀಸಾಗರ್‌ರವರು ಇದರ ಬಗ್ಗೆ ದೀರ್ಘವಾಗಿ ಆಲೋಚನೆ ಮಾಡುವುದು ಒಳ್ಳೆಯದು. ಏಕೆಂದರೆ, ಅಂತಹವರನ್ನು ಖಂಡಿತವಾಗಿ ತಾವು ಪನಿಷ್ ಮಾಡಬೇಕು, ಅಂತಹವರನ್ನು ನಿಜವಾಗಿಯೂ ಸಂಪೂರ್ಣವಾಗಿ ನಿಗ್ರಹಿಸಬೇಕು ಎಂಬ ಉದ್ದೇಶ ತಮಗೆ ಇದ್ದಂಥ ಪಕ್ಷದಲ್ಲಿ ಈ ಪ್ರಾವಿಸೋವನ್ನು ಹಾಕತಕ್ಕದ್ದು ಸಂಪೂರ್ಣವಾಗಿ ತಪ್ಪಾಗುತ್ತದೆ. ಇದರಿಂದ ಸ್ಯಾಂಡಲ್‌ವುಡ್ ಸ್ಮಗಲಿಂಗನ್ನು ತಡೆಹಿಡಿಯುತಕ್ಕ ಪ್ರಯತ್ನದಲ್ಲಿ ಸಂಪೂರ್ಣವಾಗಿ ವಿಫಲರಾಗುತ್ತೀರಿ ಎಂದು ನಾನು ಇವತ್ತು ತಮಗೆ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಅವರಿಗೆ ಹೆಚ್ಚಿನ ಶಿಕ್ಷೆ ವಿಧಿಸಬೇಕೆಂದು ಏನು ಕಾನೂನು ಮಾಡಿದ್ದೆವು, ಆ ಕಾನೂನನ್ನು ಸಂಪೂರ್ಣವಾಗಿ ತೆಗೆಯುತಕ್ಕ ಒಂದು ಪ್ರಯತ್ನ ತಾವು ಮಾಡಿದರೆ, ಅದರಿಂದ ನಮ್ಮ ರಾಜ್ಯದ ಹಿತಾಸಕ್ತಿಗೆ ಸಹಾಯ ಆಗುವುದಿಲ್ಲ, ರಾಜ್ಯದ ಜನರಿಗೆ ಸಹಾಯ ಆಗುವುದಿಲ್ಲ, ಇದು ಕಳ್ಳಸಾಗಾಣಿಕೆದಾರರಿಗೆ ಮತ್ತು ಈ ಸಂಪತ್ತನ್ನು ಅಪಹರಿಸತಕ್ಕ ಜನರಿಗೆ ಸಂಪೂರ್ಣವಾಗಿ ಸಹಾಯ ಆಗುತ್ತದೆಂದು ನಾನು ಹೇಳಬಯಸುತ್ತೇನೆ.

ಇನ್ನು ಎರಡನೆಯದಾಗಿ, Fixation of seinorage rate ಇದನ್ನು 1981ನೇ ಇಸವಿಯಲ್ಲಿ ನಾವು ಪ್ರಥಮವಾಗಿ ಬದಲಾವಣೆ ಮಾಡಬೇಕು ಎಂದು ಇತ್ತು. ಅನೇಕ ವರ್ಷಗಳ ಕಾಲ ಬಹಳ ಕಡಿಮೆ ರೇಟಿನಲ್ಲಿ ಈ ಉದ್ಯಮದವರು ಅವರ ಕೈಗಾರಿಕೆಗಳಿಗೆ ಬೇಕಾದಂಥ ಕಚ್ಚಾ ಸಾಮಗ್ರಿಗಳನ್ನು ಒಯ್ಯುತ್ತಿದ್ದರು. ಇದಕ್ಕೆ ಅನೇಕ ವರ್ಷಗಳ ಲೀಸ್ ಇತ್ತು. Very long leases.... ಟರ್ಮಿನೇಟ್ ಮಾಡಬೇಕು ಮತ್ತು ಮಾರ್ಕೆಟ್ಟಿಗೆ ಸರಿಸಮಾನವಾದ ರೇಟನ್ನು ಅವರಿಗೆ ಹಾಕಬೇಕೆಂಬ ಎರಡು ಉದ್ದೇಶಗಳಿಂದ for the first time our Govt. took a decision in 1981. ಅದಕ್ಕೂ ಕ್ಯಾಬಿನೆಟ್ ಸಬ್ ಕಮಿಟಿ ಆಗಿದೆ. ಈ ವಿಚಾರವನ್ನು ಸಂಪೂರ್ಣವಾಗಿ ಆಲೋಚನೆ ಮಾಡಬೇಕು ಮತ್ತು ರೇಟನ್ನು ಹೆಚ್ಚು ಮಾಡಬೇಕೆಂದು ಇತ್ತು. ಇದಕ್ಕೆ ರಾಜಕೀಯ ಇಚ್ಛಾಶಕ್ತಿ ಬೇಕಾಗುತ್ತದೆ. ಈ ಬಗ್ಗೆ ಕಠಿಣವಾದ ಒಂದು ನಿರ್ಣಯ ನಾವು ತೆಗೆದುಕೊಂಡಿದ್ದೆವು. A cabinet Sub-committee was formed. I was the Chairman of that Committee. ಅದನ್ನು ನಿರ್ಣಯ ಮಾಡಬೇಕೆಂದು 1981ರಲ್ಲಿ ಗವರ್ನ್‌ಮೆಂಟ್ ಆರ್ಡರ್ ಕೂಡಾ ಇದರ ಬಗ್ಗೆ ಹೊರಡಿಸಿದೆ. ಅದರ ಮೇಲೆ ಅವರು ಹೈಕೋರ್ಟಿಗೆ ರಿಟ್ ಹಾಕಿದರು. ಇದು ಯಾವ ಸಂದರ್ಭದಲ್ಲಿ ಆಗಿದೆ ಎಂದು ತಮಗೆ ಗೊತ್ತಿದೆ. ವೆಸ್ಟ್‌ಕೋಸ್ಟ್ ಪ್ಲೈವುಡ್ ಕಂಪನಿ ಇರಲಿ, ಹರಿಹರ ಪಾಲಿಫೈಬರ್ಸ್ ಇರಲಿ, ಇದೆಲ್ಲಾ ಇವರು ಮಂತ್ರಿಯಾಗಿ ಸರಕಾರದಲ್ಲಿದ್ದ ಸಮಯದಲ್ಲಿ ಆದುದು. ತಾವು ವಿಚಾರ ಮಾಡಿ If my memory is correct, not even a single inch of land is given except Jamma Malli-one small piece of land in coorg. ಅದು ಬಿಟ್ಟರೆ ಒಂದು ಇಂಚು ಜಾಗ ಕೂಡಾ ಫಾರೆಸ್ಟ್ ಬೇಸ್ಡ್ ಇಂಡಸ್ಟ್ರೀಸ್‌ಗೆ ನಾವು ಕೊಟ್ಟಿಲ್ಲ. ಆದುದರಿಂದ ಇವತ್ತು ಅದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು, ಇದು ಒಂದು. ಮಾನ್ಯ ಅಧ್ಯಕ್ಷರೇ,

ನಮ್ಮ ಈಗಿನ ಸಚಿವರು ಈ ಪದವಿಯನ್ನು ತೆಗೆದುಕೊಂಡ ಮೇಲೆ ಒಂದು ದೊಡ್ಡ ಹೇಳಿಕೆಯನ್ನು ಕೊಟ್ಟರು. ಬಹುಶಃ ಜೂನ್ 16ರಲ್ಲಿ ಎಂದು ಕಾಣುತ್ತದೆ. Minister calls for change of forest policy" ಎಂದು ಒಂದು ಹೇಳಿಕೆಯನ್ನು ಕೊಟ್ಟರು. ಆಗ ನಾವು ಅಂದುಕೊಂಡೆವು, ಬಹಳ ಜೋರಾಗಿ ಕೆಲಸ ಮಾಡುತ್ತಾರೆ, ಕೂರ್ಗ್‌ನಿಂದ ಬಂದವರು. ಕಣ್ಣೆದುರಿಗೇ ನಡೆಯುತಕ್ಕಂಥ ಆಕ್ರಮ ಇದೆ, ಯಾವ ಒಂದು ಫೀಲಿಂಗ್ ಇದೆ, ಅದನ್ನು ನೋಡಿದರೆ ಯಾರಿಗೂ ಕೂಡಾ ಮನ ಕರಗಬೇಕು. ಮನಕರಗಿ ಈ ತರಹ ಮಾಡುತ್ತಿದ್ದಾರೆ ಎಂದು ಅಂದುಕೊಂಡೆವು. ಆದರೆ ತಮಗೆ ಸರಕಾರದಲ್ಲಿ ಏನು ತೊಂದರೆ ಇದೆಯೋ ಗೊತ್ತಾಗಲಿಲ್ಲ. ಬಹಳ ಮುಗ್ಧತನದಿಂದ ಹೇಳಿಕೆ ಕೊಟ್ಟಿರಬಹುದು. ಆದರೆ ಸರಕಾರದಲ್ಲಿ ಇಂದೆ ಲಕ್ಷಾಂತರ ಎಕರೆ ಜಾಗವನ್ನು, ಕೋಟ್ಯಾಂತರ ರೂಪಾಯಿ ಲೂಟಿ ಮಾಡಲಿಕ್ಕೆ ಯಾರು ಲೀಸ್ ಕೊಟ್ಟಿದ್ದರೊ ಅಂತಹವರು ಅಧಿಕಾರದಲ್ಲಿದ್ದಾರೆ ಎನ್ನುವುದನ್ನು ಮರೆತು ಬಿಟ್ಟು ಹೇಳಿಕೆ ಕೊಟ್ಟಿರಬಹುದು. ಆ ಹೇಳಿಕೆ ಕೊಟ್ಟ ಮೇಲೆ, ಫಾರೆಸ್ಟ್ ಆ್ಯಕ್ಟ್ ಮೇಲೆ ಕಾಂಪ್ರೆಹೆನ್ಸೀವ್ ಲೆಜಿಸ್ಲೇಷನ್‌ನ್ನು ಒಳ್ಳೆಯ ತಿದ್ದುಪಡಿಯನ್ನು ತಾವು ತರುತ್ತೀರಿ ಎಂದು ನಾವು ನಿರೀಕ್ಷೆ ಮಾಡಿದ್ದೆವು. ತಮಗೆ ಗೊತ್ತಿರುವ ಹಾಗೆ 1981ರಲ್ಲಿ ನಾವು ಗವರ್ನ್‌ಮೆಂಟ್ ಆರ್ಡರ್ ಹೊರಡಿಸಿದ ಮೇಲೆ ಅವರು ಹೈಕೋರ್ಟ್‌ಗೆ ಹೋದರು, ಹೈಕೋರ್ಟ್‌ಗೆ ಹೋದ ಮೇಲೆ ಅಲ್ಲಿ ಏನು ಬದಲಾವಣೆ ಮಾಡಬೇಕೆಂದು ಸೂಚನೆ ಕೊಟ್ಟರು, ಆ ಸೂಚನೆಯನ್ನು ಕೂಡಾ ನಾವು ಆ ಸಂದರ್ಭದಲ್ಲಿ Still I remember, we never wanted to agree.... 1981ರಲ್ಲಿ ಅಫಿಶಿಯಲ್ ಕಮಿಟಿ ಏನು ತೀರ್ಮಾನ ಮಾಡಿತ್ತು. ಅದನ್ನು 1982ರಲ್ಲಿ ಅಫಿಶಿಯಲ್ ಕಮಿಟಿಯಲ್ಲಿ ಕೊಟ್ಟಿರತಕ್ಕ ರೇಟ್ ಬಹಳ ಕಡಿಮೆಯಾಗಿದೆ, ಅದನ್ನು ಜಾಸ್ತಿ ಮಾಡಬೇಕು ಎಂಬ ಚಿಂತನೆ ಇತ್ತು. 1981ನೇ ಇಸವಿಯಲ್ಲಿ ಹೆಚ್ಚಿದ್ದು, ಅದನ್ನು 1982ನೇ ಅಫಿಶಿಯಲ್ ಕಮಿಟಿ ಮಾಡಬೇಕೆಂದು ಕೇಳಿದಾಗ ಹೈಕೋರ್ಟಿನಲ್ಲಿ ಅಡ್ವೋಕೇಟ್ ಜನರಲ್‌ರವರೊಡನೆ ಮಾತನಾಡಿ, ಅವರ ಸಲಹೆ ತೆಗೆದು ಕೊಂಡಾಗ, ಇಲ್ಲಿ ಕುಳಿತುಕೊಂಡಿದ್ದಂಥ ಸನ್ಮಾನ್ಯ ಬೊಮ್ಮಾಯಿಯವರು ದೊಡ್ಡ ಆಕ್ಷೇಪಣೆ ಎತ್ತಿದರು. ಏನೆಂದರೆ ಕೋಟ್ಯಾಂತರ ರೂಪಾಯಿ ಲೂಟಿಯಾಗಿದೆ, ನೀವು ಮಾಲೀಕರ ಜೊತೆಯಲ್ಲಿ ಶಾಮೀಲಾಗಿ ದ್ದೀರಿ, ಕೋಟ್ಯಾಂತರ ರೂಪಾಯಿ ನಿಮ್ಮ ಪಕ್ಷ ಮಾಡಿದೆ, ಎಂಬ ದೊಡ್ಡ ಆಪಾದನೆ ಮಾಡಿದರು ಹಾಗಾದರೆ ಈಗ ನಾವು ನಿಮಗೆ ಏನು ಹೇಳಬೇಕು? ಅದೇ 1981ರ ವರದಿಯನ್ನು ಬದಲಾವಣೆ ಮಾಡಿ 1982ರಲ್ಲಿ ಅಫಿಶಿಯಲ್ ಕಮಿಟಿ ಕೊಟ್ಟಂಥ ವರದಿಯನ್ನು ಪುಷ್ಟೀಕರಿಸಿ ಅನುಷ್ಠಾನ ಮಾಡ ಬೇಕಾದರೆ. ಆಗ ನೀವು ಕೋಟ್ಯಾಂತರ ರೂಪಾಯಿ ಮಾಡುತ್ತಿದೆ ನಿಮ್ಮ ಪಕ್ಷ ಎಂದು ಹೇಳಿದವರಲ್ಲ, ನಾಳೆ ನಿಮಗೂ ಕರ್ನಾಟಕ ಜನ ಅದೇ ಅಪವಾದ ಮಾಡಿ ಬಿಟ್ಟು ತೋರಿಸುತ್ತಾರೆ. ಅದನ್ನು ತಪ್ಪಿಸಿ ಕೊಳ್ಳಲಿಕ್ಕೆ ತಾವು ಪ್ರಯತ್ನ ಮಾಡಲಿಲ್ಲ. ಅದರ ಬದಲಿಗೆ ಅದೇ 1982ರ ರೇಟನ್ನು ಅಫಿಶಿಯಲ್ ಕಮಿಟಿಯ ವರದಿಯನ್ನು ತಾವು ಕಣ್ಮುಚ್ಚಿ ಸ್ವೀಕಾರ ಮಾಡಿದ್ದೀರಿ, ಇದರಲ್ಲಿ ಯಾರಿಗೋ ಲಾಭ ಮಾಡತಕ್ಕಂಥ, ಸಹಾಯ ಮಾಡತಕ್ಕಂಥ ಒಂದು ವ್ಯವಸ್ಥೆ ತಾವು ಮಾಡುವುದಕ್ಕೆ ಹೊರಟಿದ್ದೀರಿ ಎಂದು ಸಂಪೂರ್ಣವಾಗಿ ಸರಕಾರದ ಮೇಲೆ ಆಪಾದನೆ ಮಾಡಬೇಕಾಗುತ್ತದೆ. ಇವತ್ತು ತಾವು ಆಲೋಚನೆ ಮಾಡಿ forest have become very scarce ಸಾಕಷ್ಟು ಬೆಲೆ ಆಗಿದೆ. ಈ ಸಂದರ್ಭದಲ್ಲಿ ತಾವು ಇವತ್ತು 1982ರ ರೇಟನ್ನು ನಿರ್ಣಯ ಮಾಡಿದರೂ ಕೂಡಾ ಬದಲಾವಣೆ ಮಾಡತಕ್ಕಂಥ ಒಂದು ಪ್ರಾಮಾಣಿಕ ಪ್ರಯತ್ನ ಮತ್ತು ಪುನರಾಲೋಚನೆ ಮಾಡತಕ್ಕಂಥ ಒಂದು ಪ್ರಯತ್ನವನ್ನು ತಾವು ಏಕೆ ಮಾಡಲಿಲ್ಲ? ಕ್ಯಾಬಿನೆಟ್ ಅಥವಾ ಇದರ ಬಗ್ಗೆ ತಮ್ಮ ಮನಸ್ಸನ್ನು ಹರಿಸಿ, ರೇಟನ್ನು ಹೆಚ್ಚು ಮಾಡ ಲಿಕ್ಕೆ ಏಕೆ ಪ್ರಯತ್ನ ಮಾಡಲಿಲ್ಲ ಎಂದು ನಾನು ಕೇಳಲಿಕ್ಕೆ ಇಚ್ಛೆಪಡುತ್ತೇನೆ. ಆದುದರಿಂದ ಈಗ ತಂದಂಥ ಮಸೂದೆ, ಕರ್ನಾಟಕ ರಾಜ್ಯದ ಅರಣ್ಯ ಸಂಪತ್ತನ್ನು ಇನ್ನೂ ಕೂಡಾ ಲೂಟಿ ಮಾಡಲಿಕ್ಕೆ ಇದೆ. ಏಕೆಂದರೆ ಐದು ವರ್ಷ ತಾವು ಮಾಡಬೇಕು ಅದರ ಬಗ್ಗೆ ಮಾನ್ಯ ಕೃಷ್ಣನ್ ಅವರು ಹೇಳಿದ್ದಾರೆ at a time ಎಂದು ಹೇಳಿ ಅದನ್ನು ಮುಂದುವರಿಸತಕ್ಕಂಥ ಒಂದು ಪ್ರಯತ್ನ ಏನಿದೆ 5 years or even it may extend 30 years or 90 years also .... ಈ ವ್ಯವಸ್ಥೆಯನ್ನು ತಾವು ಅವಕಾಶ ಮಾಡಿಕೊಡುವುದರಿಂದ ಕರ್ನಾಟಕ ರಾಜ್ಯದ ಜನರ ಹಿತಾಸಕ್ತಿಯನ್ನು ಇಟ್ಟುಕೊಂಡಿಲ್ಲ, ತಾವು ಮಾಲೀಕರ ಹಿತಾಸಕ್ತಿಯನ್ನು ಹೆಚ್ಚು ಗಮನಕ್ಕೆ ತೆಗೆದುಕೊಂಡು ಈ ಮಸೂದೆಗೆ ತಿದ್ದುಪಡಿಯನ್ನು ತಂದಿದ್ದೀರಿ ಎಂದು ಈ ಮಸೂದೆ ಸ್ಪಷ್ಟವಾಗಿ ತೋರಿಸುತ್ತಿದೆ. ಆದುದರಿಂದ ತಾವು ದಯಮಾಡಿ ಇದನ್ನು ಪಾಸ್ ಮಾಡಲಿಕ್ಕೆ ಅವಸರ ಮಾಡಬೇಡಿ ತಾವು ಹೊಸಬರು, ಏನೋ ಸುಧಾರಣೆ ಮಾಡಲಿಕ್ಕೆ ಹೊರಟಿದ್ದೀರಿ. ಆದರೆ ನಿಮ್ಮ ಕೈಯಲ್ಲೇ ಮಂಜೂರು ಮಾಡಿಸಿ ಇವತ್ತು ಸರಕಾರದ ಮೇಲೆ ತಮ್ಮ ಮೇಲೆ ಒಂದು ದೊಡ್ಡ ಅಪವಾದ ತರತಕ್ಕಂಥ ಪ್ರಯತ್ನ ಏನು ನಡೆದಿದೆ ಅದನ್ನು ತಪ್ಪಿಸತಕ್ಕ ಜವಾಬ್ದಾರಿ ತಮ್ಮದಿದೆ ಎಂದು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಆದುದರಿಂದ ಇದನ್ನು ಅವಸರವಾಗಿ ಪಾಸ್ ಮಾಡಬೇಡಿ, ಆಲೋಚನೆ ಮಾಡಿ, ಪನಿಷ್‌ಮೆಂಟ್ ವಿಚಾರದಲ್ಲೂ, ಇತರೇ ವಿಚಾರದಲ್ಲೂ ಕೂಡಾ ತಾವು ಮಾಡತಕ್ಕಂಥ ಕಾನೂನು This is a

retrograde step, it is against the interest of the forest policy of this state, which is being announced from time to time.... ಆದುದರಿಂದ ಸರಕಾರ ತಂದಿರತಕ್ಕ ಪ್ರತಿಯೊಂದು ಅಮೆಂಡ್‌ಮೆಂಟ್ ಕೂಡಾ ನಮ್ಮ ಒಂದು ಹಿತಾಸಕ್ತಿಗೆ ಆಘಾತವನ್ನು ಮಾಡತಕ್ಕಂಥ ಒಂದು ಕೆಲಸವಾಗಿದೆ. ಇವತ್ತು ಸರಕಾರ ಈ ಕೆಲಸವನ್ನು ಏನು ಮಾಡಿದೆ ಅದನ್ನು ಪುನರ್‌ಪರಿಶಿಲನೆ ಮಾಡಬೇಕು, ಅದಕ್ಕೆ ಸಂಬಂಧಪಟ್ಟ ತಿದ್ದುಪಡಿ ತರಬೇಕೆಂದು ಆಗ್ರಹ ಪೂರ್ವಕವಾಗಿ ತಮ್ಮ ಮುಖೇನ ಸರಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ಇಲ್ಲದಿದ್ದರೆ ಬಹಳ ತೊಂದರೆ ಬರುತ್ತದೆ. ಆಮೇಲೆ ನೀವು ಪಶ್ಚಾತ್ತಾಪ ಪಡತಕ್ಕಂಥ ಸಂದರ್ಭ ಕೂಡಾ ಬರಬಹುದು. ಆದ್ದರಿಂದ ಅದನ್ನು ಮಾಡಬೇಡಿ ಎಂದು ನಾನು ಸರಕಾರಕ್ಕೆ ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ವೈ. ಕೆ. ರಾಮಯ್ಯ (ಕುಣಿಗಲ್) — ಮಾನ್ಯ ಅಧ್ಯಕ್ಷರೇ, ಈ ಒಂದು ತಿದ್ದುಪಡಿಯನ್ನು ಸರ್ಕಾರ ತಂದಿರುವ ಉದ್ದೇಶದ ಬಗ್ಗೆ ಯಾರ ತಕರಾರೂ ಇಲ್ಲ. ಯಾವುದೇ ಒಂದು ರಾಜ್ಯದಲ್ಲಿ ಅದರಲ್ಲೂ ವ್ಯವಸಾಯಕ್ಕೆ ಪ್ರಧಾನವಾಗಿರುವ ರಾಜ್ಯದಲ್ಲಿ ವನ್ಯ ಸಂಪತ್ತನ್ನು, ಅಥವಾ ಕಾಡನ್ನು ಕಾಪಾಡಿಕೊಳ್ಳದಿದ್ದರೆ ಸ್ವಲ್ಪ ಕಷ್ಟವಾಗುತ್ತದೆ. ಆ ದೃಷ್ಟಿಯಿಂದ ಕಾಡನ್ನು ಕಾಪಾಡುವ ಒಳ್ಳೆಯ ಒಂದು ಉದ್ದೇಶದಿಂದ ಈ ಕಾನೂನಿನ ತಿದ್ದುಪಡಿಯನ್ನು ತಂದಿದ್ದೇವೆ. ವಿರೋಧಪಕ್ಷದ ನಾಯಕರು ಮಾತನಾಡುವಾಗ ಈ ತಿದ್ದುಪಡಿಯಿಂದ ವನ್ಯ ಸಂಪತ್ತು ಹಾಳಾಗಿಬಿಡುತ್ತದೆಂದು ಹೇಳಿದರು. ಅದಕ್ಕುತ್ತರವಾಗಿ ಈ ತಿದ್ದುಪಡಿಯಿಂದ ವನ್ಯ ಸಂಪತ್ತನ್ನು ಹಾಳು ಮಾಡುವುದಿಲ್ಲ. ಅರಣ್ಯ ಸಂಪತ್ತನ್ನು ಉಳಿಸಿಕೊಳ್ಳುವುದಕ್ಕೆ ಇದರಿಂದ ಅನುಕೂಲವಾಗುತ್ತದೆಂದು ಹೇಳಬೇಕಾಗಿದೆ. ಈ ಒಂದು ತಿದ್ದುಪಡಿಯಲ್ಲಿ ಪ್ರಧಾನವಾಗಿ ತಂದಿರುವುದು ಎರಡು ತಿದ್ದುಪಡಿಗಳು ಸೆಕ್ಷನ್ 86 ಮತ್ತು 87. ನಮ್ಮ ರಾಜ್ಯದಲ್ಲಿ ಅಪರಾಧಿಗಳು ಸಿಕ್ಕುತ್ತಿಲ್ಲ, ಅಂತ ಹೇಳುತ್ತಿಲ್ಲ. ಅದು ತಮಗೂ ಗೊತ್ತಿದೆ. ಆದರೆ ಏನಾಗಿದೆ ಎಂದರೆ ಇದರ ಬಗ್ಗೆ ಕೇಸ್ ಹಾಕಿದಾಗ ಇಂಪ್ರಿಸನ್‌ಮೆಂಟ್ ಅಥವಾ ಶಿಕ್ಷೆ ಕಡ್ಡಾಯವಾಗಿತ್ತು. ನ್ಯಾಯಾಧೀಶರಿಗೆ ಬೇರೆ ಯಾವುದೇ ಮಾರ್ಗವಿರಲಿಲ್ಲ. ಇದು ತಮಗೂ ಗೊತ್ತಿದೆ. ನಿಮಗೆ ನನ್ನ ಜೀವನದ ಅನುಭವದಲ್ಲಿ ಆದದ್ದನ್ನು ಹೇಳುವುದಾದರೆ, ಹಳ್ಳಿಯಲ್ಲಿರತಕ್ಕಂತಹ ರೈತರು ತಲೆ ಮೇಲೆ ಸೌದೆಯನ್ನು ತಮ್ಮ ಉಪಯೋಗಕ್ಕಾಗಿ ತೆಗೆದುಕೊಂಡು ಬರುತ್ತಾರೆ. ಹಳ್ಳಿಯಲ್ಲಿರತಕ್ಕ ಒಬ್ಬ ರೈತ ಹೆಗಲ ಮೇಲೆ ನೇಗಿಲ ತುಂಡನ್ನು ಹೊತ್ತು ಬರುತ್ತಿರುವಾಗ ಅಧಿಕಾರಿಗಳು ಅವನನ್ನು ಹಿಡಿದು ಕೇಸು ಹಾಕುತ್ತಾರೆ. ಆ ರೈತ ಕೋರ್ಟಿನ ಮುಂದೆ ಬಂದಾಗಲೂ ನಾನು ಕಳ್ಳಸಾಗಾಣಿಕೆಗಾಗಿ ತೆಗೆದುಕೊಂಡು ಹೋಗುತ್ತಿಲ್ಲ ಹೊಲ ಉಳುವುದಕ್ಕೆ ನೇಗಿಲು ತುಂಡು ಬೇಕಾಗಿತ್ತು. ಅದಕ್ಕಾಗಿ ತೆಗೆದುಕೊಂಡು ಹೋಗುತ್ತಿದ್ದೇನೆಂದು ಎವಿಡೆನ್ಸ್‌ನಲ್ಲಿ ನಿಜವನ್ನೂ ಒಪ್ಪಿಕೊಂಡರೂ, ನ್ಯಾಯಾಧೀಶರಿಗೆ ಆ ರೈತನ ಮೇಲೆ ದಂಡ ಅಥವಾ ಶಿಕ್ಷೆಯನ್ನು ಹಾಕುವುದನ್ನು ಬಿಟ್ಟರೆ ಬೇರೆ ಮಾರ್ಗವೇ ಇಲ್ಲ. ಕೋರ್ಟಿನಲ್ಲಿ ಆ ರೈತ ತಾನು ತಂದಂತಹ ಸೌದೆ, ಕಟ್ಟಿಗೆಗೆ ಮತ್ತೆ ಹೆಣ ಸುಡುವುದಕ್ಕೆ ಸೌದೆ ಬೇಕು. ನಮ್ಮಲ್ಲಿ ಮದುವೆ ಮಾಡುವುದಕ್ಕೆ ಊರಿನವರೆಲ್ಲರೂ ಹೋಗಿ ಸೌದೆಯನ್ನು ಕಡಿದುಕೊಂಡು ಬರುತ್ತಾರೆ. ಆಗ ಅರಣ್ಯ ಅಧಿಕಾರಿಗಳು ಅಂತಹವರ ಮೇಲೆ ಕೇಸ್ ಹಾಕುತ್ತಾರೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಗಂಧದ ತುಂಡಿನಲ್ಲಿ ಪೂರ್ತಿ ಹೆಣವನ್ನು ಸುಡುವುದಿಲ್ಲ. ಒಂದು ಚೂರು ಹಾಕುತ್ತಾರೆ ಅಷ್ಟೆ. ಅದರಲ್ಲೇ ಪೂರ್ತಿಯಾಗಿ ಹೆಣವನ್ನು ಸುಡುತ್ತಾರೆಯೋ?

ಶ್ರೀ ವೈ.ಕೆ. ರಾಮಯ್ಯ.— ಅದೇ ವಿಷಯಕ್ಕೆ ಬರುತ್ತೇನೆ. ಸೆಕ್ಷನ್ 86ಕ್ಕೆ ತಿದ್ದುಪಡಿಯನ್ನು ತಂದನಂತರ ವಿಶೇಷ ಕಾರಣಗಳು ಇದ್ದಲ್ಲಿ, ಮತ್ತೆ ಸಕಾರಣಗಳು ಇದ್ದಲ್ಲಿ ನ್ಯಾಯಾಧೀಶರು ಕಡಿಮೆ ಶಿಕ್ಷೆ ಹಾಗೂ ಕಡಿಮೆ ದಂಡವನ್ನು ಹಾಕಲು ಅವಕಾಶ ಮಾಡಿಕೊಡುತ್ತದೆ. ಮುಂಚೆ ಈ ಒಂದು ಅವಕಾಶ ಇರಲಿಲ್ಲ.

ಶ್ರೀ ಎನ್. ಜಿ. ನಾಯಕ್ — ಸೆಕ್ಷನ್ 86 ಮತ್ತು 87 ಇರತಕ್ಕಂತಹದ್ದು ಗಂಧದ ಮರಕ್ಕೆ ಸಂಬಂಧಪಟ್ಟದ್ದು. ಮಾನ್ಯ ಸದಸ್ಯರು ಸೌದೆ ಅಂತ ತಪ್ಪು ಓದುತ್ತಿದ್ದಾರೆ.

ಡಾ॥ ವಿ.ಎಸ್. ಆಚಾರ್ಯ. — ಗಂಧದ ಕಟ್ಟಿಗೆಗೆ ಸಂಬಂಧಪಟ್ಟ ಅಪರಾಧಗಳ ಬಗ್ಗೆ ಹಾಕುವಂತಹ ಶಿಕ್ಷೆಯ ಬಗ್ಗೆ ಸೆಕ್ಷನ್ 86 ಇರುವುದು ಬೇರೆಯದಕ್ಕಲ್ಲ.

ಶ್ರೀ ವೈ. ಕೆ. ರಾಮಯ್ಯ — ಅದಕ್ಕೆ ನಂತರ ಬರುತ್ತೇನೆ. ನಾನು ಉದಾಹರಣೆಗಳನ್ನು ಕೊಟ್ಟುಕೊಂಡು ಬರುತ್ತಿದ್ದೇನೆ. ಗಂಧದ ಮರನನ್ನು ತೆಗೆದುಕೊಂಡರೆ, ಖಾಸಗಿಯವರು ಗಂಧದ ಮರದ ಪ್ಲಾಂಟೇಷನ್ ಅನ್ನು ಮಾಡುವುದನ್ನು ನಿಷೇಧ ಮಾಡಿದ್ದಾರೆ. ಯಾರ ಮನೆಯಲ್ಲಿ ಗಂಧದ ಮರ ಇಲ್ಲ? ಎಲ್ಲರ ಮನೆಯಲ್ಲೂ ಗಂಧದ ಮರ ಇದೆ. ಹಾಗಾದರೆ ಇವರೆಲ್ಲರೂ ಜೈಲಿಗೆ ಹಾಕೋಣವೇ ? ಪೂಜೆ ಮಾಡುವುದಕ್ಕೆ ಗಂಧ ತೇಯಬೇಕು. ಯಾರಾದರೂ ಮುದ್ರೆ ಹಾಕಿಕೊಳ್ಳಬೇಕಾದರೆ ಗಂಧದ ತುಂಡನ್ನು ಉಪಯೋಗಿಸುತ್ತಾರೆ. ಆದ್ದರಿಂದ ಕಾನೂನನ್ನು ಕಾನೂನಿನ ದೃಷ್ಟಿಯಿಂದ ನೋಡುವುದು ಬೇಡ. ನನ್ನ ಮನೆಯಲ್ಲೂ ಇದೆ. ಹಾಗಾದರೆ ನಮ್ಮೆಲ್ಲರನ್ನೂ ಜೈಲಿಗೆ ಕಳುಹಿಸೋಣವೇ ? ಆದರೆ ಇದಕ್ಕೆ ವಿಶೇಷವಾದ ಕಾರಣಗಳು ಇದ್ದಾಗ್ಯೂ ನ್ಯಾಯಾಧೀಶರು ಶಿಕ್ಷೆ ಅಥವಾ ದಂಡವನ್ನು ಕೊಡುವುದು ಬೇಡ ಅಂತ.

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಸದಸ್ಯರು ಹೇಳಿದ ರೀತಿ ಎಲ್ಲರ ಮನೆಯಲ್ಲೂ ಗಂಧದ ಮರ ಇದೆ ಎನ್ನುವ ಅರ್ಥ ಬರುತ್ತದೆ.

ಶ್ರೀ ಎನ್. ಜಿ ನಾಯಕ್.—ಯಾರೂ ಮರವನ್ನೇ ಇಟ್ಟುಕೊಂಡಿರುವುದಿಲ್ಲ. ಗಂಧದ ತುಂಡನ್ನು ಇಟ್ಟುಕೊಂಡಿರುತ್ತಾರೆ.

ಶ್ರೀ ವೈ. ಕೆ. ರಾಮಯ್ಯ.— ಇನ್ನೊಂದು ಉದಾಹರಣೆಯನ್ನು ಕೊಡುವುದಾದರೆ, ಗಂಧದ ಮರವನ್ನು ಖಾಸಗಿಯವರು ಇಟ್ಟುಕೊಂಡಿರುವುದು ಅಪರಾಧ. ಆದರೆ ಇಲ್ಲಿರುವ ಬಹಳ ಜನ ಮಾನ್ಯ ಸದಸ್ಯರು ತಮ್ಮ ಜೆಬ್ಬಿನ ಮೇಲೆ ಅಥವಾ ಹಣೆಯ ಮೇಲೆ ಗಂಧದ ಮುದ್ರೆಯನ್ನು ಹಾಕಿಕೊಂಡಿರುವುದನ್ನು ನೋಡಬಹುದು. ಹಾಗಾದರೆ ಅವರೆಲ್ಲರನ್ನೂ ಜೈಲಿಗೆ ಕಳುಹಿಸಬಹುದೇ ?

ಶ್ರೀ ಎಂ. ಎಸ್. ಕೃಷ್ಣನ್.— ಗಂಧದ ತುಂಡು ಮಾರುತ್ತಿದ್ದಾರೆ. ಅದನ್ನು ಕೊಂಡು ಕೊಂಡು ಬಂದು ಮೈಮೇಲೆಲ್ಲಾ ಹಚ್ಚಿಕೊಳ್ಳಲಿ ಯಾರು ಬೇಡ ಅಂತಾರೆ? ಆದರೆ ಅದನ್ನು ಬಿಟ್ಟು ಕದ್ದು ತೆಗೆದುಕೊಂಡು ಬಂದಂತಹವರಿಗೆ ಶಿಕ್ಷೆಯನ್ನು ವಿಧಿಸಬೇಕೆಂಬುದು ಕಾನೂನಿನಲ್ಲಿದೆ.

ಶ್ರೀ ವೈ ಕೆ. ರಾಮಯ್ಯ.— ಸಮಾಜವನ್ನು ತಿದ್ದುವುದಕ್ಕೆ ಹೊರಟಾಗ ಕಾನೂನಿನ ಚೌಕಟ್ಟಿನಲ್ಲಿ ಕಾನೂನುಗಳನ್ನು ಪಾಸು ಮಾಡುವುದರಿಂದ ಸಮಾಜವನ್ನು ತಿದ್ದುವುದಕ್ಕೆ ಸಾಧ್ಯವಿಲ್ಲ. ಅದಕ್ಕಿಂತ ಮುಖ್ಯವಾಗಿ ಕಾನೂನನ್ನು ಜಾರಿಗೊಳಿಸುವಂತಹ ಅಂಗ ಏನಿದೆ ಅದು ಸರಿಯಾಗಿಲ್ಲದಿದ್ದರೆ ಈ ಸಮಾಜವನ್ನು ತಿದ್ದುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಈಗ ಈ ಒಂದು ತಿದ್ದುಪಡಿಯನ್ನು ತಂದಿರುವುದು ಏತಕ್ಕೆಂದರೆ, ಕೆಲವು ಸಕಾರಣಗಳು ಇದ್ದಾಗ, ಕಡಿಮೆ ದಂಡವನ್ನು ವಿಧಿಸುವಂತಹ ಅವಕಾಶ ನ್ಯಾಯಾಧೀಶರಿಗೆ ಕೊಡಬೇಕು. ಅದಕ್ಕಾಗಿ ಇದನ್ನು ತಂದಿದ್ದೇವೆ.

ಇನ್ನೊಂದು ಸೆಕ್ಷನ್ 101 (ಬಿ) ಇದನ್ನು ಹೊಸದಾಗಿ ಸೇರಿಸುವುದಕ್ಕೆ ತಿದ್ದುಪಡಿಯನ್ನು ತಂದಿದ್ದಾರೆ. ಈ ದೇಶದಲ್ಲಿ ಇತ್ತೀಚೆಗೆ ಕಳೆದ 10 ವರ್ಷಗಳಿಂದ ಅರಣ್ಯ ಸಂಪತ್ತನ್ನು ನೋಡಿಕೊಳ್ಳುವ ಬಗ್ಗೆ ಸರ್ಕಾರ ನಡೆದುಕೊಂಡಂತಹ ರೀತಿ ನೀತಿಯನ್ನು ನೋಡಿದಾಗ ಇದು ಅತಿ ಅವಶ್ಯಕ. ಎರಡು ಕಾರಣಗಳಿಂದ ಹಿಂದಿನ ಸರ್ಕಾರದವರು ಕಾನೂನು ಮಾಡಿದ್ದಾರೆ. 30 ವರ್ಷಗಳಿಗೆ ಕಾಡನ್ನು ಕೊಟ್ಟಿರುವಂತಹ ಅಗ್ರಿಮೆಂಟ್. ತಾವು ದಯಮಾಡಿ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನ್ನು ನೋಡಬೇಕು. ಈಗ ಆಗಿರತಕ್ಕಂತಹ ಅಗ್ರಿಮೆಂಟ್ ಪ್ರಕಾರ ನಮ್ಮ ಕರ್ನಾಟಕದಲ್ಲಿರತಕ್ಕ ಅರಣ್ಯ ಸಂಪತ್ತು ಸಂಪೂರ್ಣವಾಗಿ ಮುಗಿದುಹೋದ ಪಕ್ಷದಲ್ಲೂ ಅಂಡಮಾನ್ ನಿಕೋಬಾರ್‌ನಿಂದ ಸೌದೆಯನ್ನು ಇಂಪೋರ್ಟ್ ಮಾಡಿಕೊಂಡು ಅವರಿಗೆ ನಾವು ಸೌದೆಯನ್ನು ಒಪ್ಪಿಸಬೇಕು. ಕರ್ನಾಟಕದಲ್ಲಿರತಕ್ಕ ಅರಣ್ಯ ಸಂಪತ್ತು ಸಂಪೂರ್ಣವಾಗಿ ಮುಗಿದು ಹೋದರೂ ಎಲ್ಲಿಂದಲಾದರೂ ತಂದು ಸೌದೆಯನ್ನು ಅವರಿಗೆ ಒಪ್ಪಿಸಲೇಬೇಕು. ಆದ್ದರಿಂದ ಸೆಕ್ಷನ್ 101 (ಬಿ) ಹೊಸದಾಗಿ ತಿದ್ದುಪಡಿಯನ್ನು ತಂದಿರುವುದು ನಿಜವಾಗಿಯೂ ಸ್ವಾಗತಾರ್ಹವಾಗಿದೆ. ಏಕೆಂದರೆ ಇರತಕ್ಕಂತಹ ಲೀಸ್ ಪೀರಿಯೆಡ್‌ನ್ನು ನಮ್ಮಲ್ಲಿರತಕ್ಕಂತಹ ಅರಣ್ಯ ಸಂಪತ್ತನ್ನು ನೋಡಿಕೊಂಡು ರೆಡ್ಯೂಸ್ ಮಾಡುವಂತಹದಕ್ಕೆ ಅವಕಾಶ ಇದೆ. ಆದ್ದರಿಂದ ಇದನ್ನು ಒಪ್ಪಬೇಕೆಂದು ಕೇಳಿಕೊಳ್ಳುತ್ತಾ, ಇದು ಸ್ವಾಗತಾರ್ಹವಾದ ತಿದ್ದುಪಡಿಯಾಗಿದೆ ಎಂದು ತಿಳಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎ. ಜೀವಿಜಯ (ಅರಣ್ಯ ಮಂತ್ರಿಗಳು) — ಮಾನ್ಯ ಅಧ್ಯಕ್ಷರೆ, ಅನೇಕ ಸದಸ್ಯರು ಈ ಅರಣ್ಯ ತಿದ್ದುಪಡಿ ಕಾಯಿದೆಯ ಬಗ್ಗೆ ಮಾತನಾಡಿದ್ದಾರೆ. ಮೊದಲನೆಯದಾಗಿ ಹಿರಿಯರಾದಂತಹ ಶ್ರೀಮಾನ್ ರಾಮಕೃಷ್ಣರವರು ಈ ಅರಣ್ಯ ತಿದ್ದುಪಡಿ ಕಾಯಿದೆಯ ಸೆಕ್ಷನ್ 68 ಮತ್ತು 86 ರ ಬಗ್ಗೆ ಮಾತನಾಡುತ್ತಾ ಶಿಕ್ಷೆಯನ್ನು ವಿಧಿಸುವುದರಲ್ಲಿ ಪೂರಕವಾಗಿ ತಿದ್ದುಪಡಿಯಾಗುವುದಿಲ್ಲ ಅಂತ ಏನು ಹೇಳಿದ್ದಾರೆ, ಅದನ್ನು ಸರ್ಕಾರ ಪ್ರೆಸ್ ಮಾಡುವುದಿಲ್ಲ ಅಂದರೆ 86 ಮತ್ತು 87ನೇ ಸೆಕ್ಷನ್‌ನ್ನು. ಆದರೆ ಸೆಕ್ಷನ್ 68 ರಲ್ಲಿ ಏನೊಂದು ತಿದ್ದುಪಡಿಯನ್ನು ತಂದಿದ್ದೇವೆಂದರೆ ಅರಣ್ಯ ಅಧಿಕಾರಿಗಳು ಅರಣ್ಯ ಸಂಪತ್ತು ಸ್ಮಗ್ಲಿಂಗ್ ಆಗುವಾಗ, ಅದನ್ನು ಸೀಜ್ ಮಾಡುತ್ತಾರೆ. ನಂತರ ಅಲ್ಲಿರುವಂತಹ ಅರಣ್ಯ ಅಧಿಕಾರಿ ಬೇರೆ ಕಡೆಗೆ ವರ್ಗವಾಗಿರುತ್ತಾರೆ. ಮುಂದೆ ಕೇಸು ನಡೆಯುವಾಗ ಆ ಅಧಿಕಾರಿಗಳು ಸ್ಥಳಕ್ಕೆ ಬರಬೇಕಾಗಿರುತ್ತದೆ ಇದರಿಂದ ಸಾಕಷ್ಟು ಸಮಯ ಹಾಳಾಗುವುದರಿಂದ, ಅರಣ್ಯ ಅಧಿಕಾರಿ ಅಥವಾ ಇತರೆ ಅರಣ್ಯ ಅಧಿಕಾರಿಗಳಿಗೆ ಈ ಒಂದು ಅಧಿಕಾರವನ್ನು ಕೊಟ್ಟಿದ್ದೇವೆ.

ಅಧ್ಯಕ್ಷರೆ ನಮ್ಮ ವಿರೋಧ ಪಕ್ಷದ ನಾಯಕರಾದ ಮೊಯಿಲಿಯವರು ವಿಚಾರಗಳನ್ನು ಟ್ವಿಸ್ಟ್ ಮಾಡುವುದರಲ್ಲಿ ನಿಪುಣರಿದ್ದಾರೆ. ವಿಷಯಗಳನ್ನು ಏನು ಹೇಳಬೇಕಾಗಿತ್ತೋ ಅದನ್ನು ಟ್ವಿಸ್ಟ್ ಮಾಡಿ ಹೇಳುವುದರಲ್ಲಿ ಪರಿಣಿತರಿದ್ದಾರೆ. ತಾ॥ 28-6-82ರಲ್ಲಿ ಅವರ ಸಚಿವ ಸಂಪುಟದಲ್ಲಿ ಏನು ತೀರ್ಮಾನವಾಗಿತ್ತೋ ಆ ತೀರ್ಮಾನವನ್ನು ಈಗ ನಾವು ತಿದ್ದುಪಡಿ ಮಾಡಿಕೊಂಡು ಅನುಷ್ಠಾನಕ್ಕೆ ತರಬೇಕಾಗಿದೆ. ನನ್ನ ಹತ್ತಿರ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿ ಇದೆ; ಅದನ್ನು ಈ ಸಂದರ್ಭದಲ್ಲಿ ಓದಿದರೆ ರಾಜಕೀಯವಾಗಿ ಉಪಯೋಗಿಸಿಕೊಂಡಿರಿ ಎಂದು ಹೇಳಬಾರದು.

ಶ್ರೀ ಎಂ. ವೀರಪ್ಪ ಮೊಯಿಲಿ.— ನಾನು ರೆವ್ಯೂ ಮಾಡಿ ಎಂದು ಹೇಳಿದ್ದೆ.

ಶ್ರೀ ಬಿ. ಎ. ಜೀವಿಜಯ. — ಸ್ವಲ್ಪ ಓದುತ್ತೇನೆ, ಕೇಳಿ.

I will read from the Report of the Public Accounts Committee (Twelth Report). I reads thus :

"The department stated that the Karnataka Forest Act was amended w.e.f. 23rd Feb'81 and under Section 101 (A) newly introduced, even a holder of a lease or agreement entered into prior to the commendement of the amended Act was liable to pay for all forest produce at the rates specified in the rules, not withstanding anything contained in the agreements. The seigniorage rate now fixed for eucalyptus was Rs 810 per tonne (as against Rs. 24/65 per tonne ex-plantation fixed under the agreements). However, 2 companies (Gwalior Rayon Silk Manufacturing Co. Ltd., and West Coast Paper Mills Ltd) filed writ petitions and obtained stay orders in March-April 1981. It was stated that the matter was still pending decision by the Courts. Gwolior Rayon had subsequently agreed to pay Rs. 120 per tonne which was reported to be the rate at which were buying the wood from other sources, Government had also appointed a Committee of Officers to re-examine the matter relating to revision of the rates notified in Feb. 1981."

ಈ 810 ರೂಪಾಯಿಗಳನ್ನು ಅಂದಿನ ಸರ್ಕಾರ ಏನು ನಿಗದಿ ಮಾಡಿತ್ತು. ಅದು ಸರಿ ಎಂದು ನಾನು ಒಪ್ಪುವುದಿಲ್ಲ. ಏಕೆಂದರೆ ಅದನ್ನು ಟಿಂಬರಿಗೆ ಎಂದು ಗೊತ್ತುಮಾಡಿದ್ದು. ಈ ಕಚ್ಚಾವಸ್ತುವಿನ ಇಂಡಸ್ಟ್ರಿ ಏನಿದೆ ಅದಕ್ಕೆ 1 ಸಿ.ಎಂ.ಟಿ. ಮರ ಬೇಕಾಗಿತ್ತು. ಅದಕ್ಕೋಸ್ಕರ ಒಂದು ಸಿ.ಎಂ.ಟಿ.ಗೆ 10 ರೂ.ನಂತೆ 81 ಸಿ.ಎಂ.ಟಿ.ಗೆ 810 ರೂ. ದರವನ್ನು ನಿಗದಿ ಮಾಡಿದರು.

It further says :

"The Committee enquired of the circumstances in which the rate of Rs. 810 per tonne fixed by Government. The Government spokesman explained that during the discussion in the Court, it was pointed out by the Gove nment sp ksman that Harihar Polyfibres were buying eucalyptus from other sources at a much higher rate than those fixed in the agreements with Government and that the representative of the Company admitted in the Court they were buying the wood at Rs. 105 to 120 per tonne from other sources; on the basis of this admission, and pending disposal of the writ petition, the Court had passed orders fixing the rate of Rs. 120 per tonne for payment in cash by the Company, purely as on interim arrangement. Subsequently. this provisional rate of Rs. 120 was specified in a joint memorandum, submitted to the Court in November 1981. The Company was accordingly paying at this rate from November 1981.

7.5 The Chief Conservator of Forests informed the Committee that he had not been consulted when the rate of Rs 120 per tonne was agreed to He also informed the Committee that the market price at which the Company was actually purchasing the wood at the time would be "atleast Rs. 250 per MT" at the site.

7.6 The Committee are surprised that the market rate (Rs. 120 per tonne) mentioned by the Company had been accepted

by Government–if the copany was buying at Rs. 250 per MT, as stated by the Chief Cons rvator of Forests, the statement made by Company in the Court should have been disputed with adequate data."

ಛೀಫ್ ಕನ್ಸರ್‌ವೇಟರ್ ಏನು ಹೇಳಿದರು ಎಂದರೆ, ಸ್ಪಾಟ್‌ನಲ್ಲಿ ಮಾರ್ಕೆಟ್ ರೇಟ್ 250 ರೂಪಾಯಿ ಆಗುತ್ತದೆಂದು ಹೇಳಿದರು. ಗ್ವಾಲಿಯರ್‌ನವರು, ಹರಿಹರ ಪಾಲಿಫೈಬರ್ಸ್‌ನವರು ಮತ್ತು ವೆಸ್ಟ್‌ಕೋಸ್ಟ್‌ನವರು 250 ರೂಪಾಯಿ ಎಂದು ಹೇಳಿದ್ದನ್ನು ಹಿಂದಿನ ಸರ್ಕಾರದವರು ಕೋರ್ಟಿನಲ್ಲಿ ಹೇಳಬಹುದಾಗಿತ್ತು. ಅದರ ಬದಲು 120 ರೂಪಾಯಿ ಎಂದು ಹೇಳಿಕೆ ಕೊಟ್ಟಿದ್ದರಿಂದ ಅಂದಿನ ಸರ್ಕಾರಕ್ಕೆ ನಷ್ಟವಾಗಿದೆ ಎಂದು ಸಮಿತಿ ತನ್ನ ವರದಿಯಲ್ಲಿ ಹೇಳಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಅದು ಏತಕ್ಕೆ ?

ಶ್ರೀ ವೈ. ರಾಮಕೃಷ್ಣ.— 1981 ರಲ್ಲಿ ರೇಟ್ ಫಿಕ್ಸ್ ಆಗಿದ್ದರೆ ಇದು 1984ನೇ ಇಸವಿ. ಅದು ಔಟ್ ಆಫ್ ರೇಟ್ ಆಗಿದೆ. ಹಾಲಿ ಇರತಕ್ಕ ದರವನ್ನು ಗಣನೆಗೆ ತೆಗೆದುಕೊಳ್ಳುವುದಕ್ಕೆ ನೀವು ಒಂದು ಸಮಿತಿ ಮಾಡಿ ಅಕ್ಕಪಕ್ಕದ ರಾಜ್ಯದಲ್ಲಿ ಮಾರುಕಟ್ಟೆ ದರ ಏನಿದೆ ಅದನ್ನು ನೋಡಿ ತಾತ್ಕಾಲಿಕವಾಗಿ ಒಂದು ದರವನ್ನು ಗೊತ್ತು ಮಾಡಿ. ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿ ಕೂಡ ಅದನ್ನೇ ಹೇಳಿದೆ.

ಶ್ರೀ ಬಿ. ಎ. ಜೀವಿಜಯ.— ಏತಕ್ಕೆ ಎಂದು ಹೇಳುತ್ತೇನೆ; ನಾನೇನು ಹೆಚ್ಚು ಓದುವುದಕ್ಕೆ ಹೋಗುವುದಿಲ್ಲ.

ಡಾ॥ ಹೆಚ್. ಎಲ್. ತಿಮ್ಮೇಗೌಡ.—ಸೀನಿಯರೇಜ್ ರೇಟನ್ನು ಸರ್ಕಾರದವರು ಮಾಡಿದ ಮೇಲೆ ಮುಖ್ಯಮಂತ್ರಿಗಳು ಅರಣ್ಯ ಮಂತ್ರಿಗಳನ್ನು ಕೇಳದೆ ಅದನ್ನು ಕಡಿಮೆ ಮಾಡಿದರು. ಅದನ್ನು ನೋಟಿಫೈ ಮಾಡಿದ ಮೇಲೆ ಅರಣ್ಯ ಮಂತ್ರಿಗಳನ್ನು ಪ್ರಶ್ನೆ ಮಾಡಲು ಅದನ್ನೆಲ್ಲ ನಾನು ಹೇಳುವುದಿಲ್ಲ, ಸರ್ಕಾರದವರು ನೋಟಿಫೈ ಮಾಡಿದ್ದಾರೆಂದರು. ನೋಟಿಫೈ ಮಾಡಿದ ಸರ್ಕಾರಿ ಆಜ್ಞೆ ಕೂಡ ಬಂತು. ಆದರೆ ಆಮೇಲೆ ಅರಣ್ಯ ಮಂತ್ರಿಗಳಿಗೆ ಗೊತ್ತಿಲ್ಲದ ಹಾಗೆ ಮುಖ್ಯಮಂತ್ರಿಗಳು ಕಡಿಮೆ ಮಾಡಿದರು. ಆಗ 8–10 ಕೋಟಿ ರೂಪಾಯಿ ನಷ್ಟವಾಗುತ್ತದೆಂದು ಗಲಾಟೆ ಮಾಡಿದರೂ ಏನೂ ಮಾಡಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.— ತಾವು ಹೇಳುವುದು ಸರ್ಕಾರಕ್ಕೆ 8 ಕೋಟಿ ರೂಪಾಯಿ ನಷ್ಟವಾಯಿತು ಎಂದು. ನಾವು ಹೇಳುವುದು ಇಷ್ಟೆ : 1982 ರಲ್ಲಿ ಏನು ದರವನ್ನು ಗೊತ್ತು ಮಾಡಲಾಗಿತ್ತು ಅದನ್ನು ರಿವ್ಯೂ ಮಾಡಬೇಕೆಂಬುದು ಸರ್ಕಾರದ ಆಲೋಚನೆಯಲ್ಲಿ ಕೂಡ ಇತ್ತು. ಈಗ ಪಬ್ಲಿಕ್ ಅಕೌಂಟ್ಸ್ ಕಮಿಟಿ ಕೂಡ 8 ಕೋಟಿ ರೂಪಾಯಿ ನಷ್ಟವಾಗುತ್ತದೆಂದು ವರದಿ ಕೊಟ್ಟ ಮೇಲಾದರೂ ತಾವು ಗಮನಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಸರ್ಕಾರಕ್ಕೆ ನಷ್ಟವಾಗುತ್ತದೆಂದು ಕಂಡುಬಂದಾಗ ಕೋರ್ಟಿಗೆ ಮತ್ತೆ ಮನವಿ ಸಲ್ಲಿಸಬಹುದಾಗಿತ್ತು. ಹಿಂದಿನ ಸರ್ಕಾರದವರು ಹೇಳಿದ್ದನ್ನು ನೀವು ಏನು ಒಪ್ಪಿಕೊಳ್ಳಬೇಕೆಂದು ಇಲ್ಲ; ಅದನ್ನು ರಿವ್ಯೂ ಮಾಡಬಹುದಾಗಿತ್ತು. ಈ ವಿಚಾರವನ್ನು ಕಳೆದ ಸಾರಿ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದರು. ನಾವೂ ಕೂಡ ಅದನ್ನು ರಿವ್ಯೂ ಮಾಡಬೇಕು. ಸರ್ಕಾರಕ್ಕೆ ಅದರಿಂದ ನಷ್ಟವಾಗುತ್ತದೆಂದು ಹೇಳಿದ್ದೆವು. ಈಗ ಡಾ॥ ತಿಮ್ಮೇಗೌಡರು ಏನು ಹಿಂದಿನ ಸರ್ಕಾರ ಗೊತ್ತು ಮಾಡಿದ ದರ ಕಡಿಮೆಯಾಗಿದೆ ಎಂದು ಹೇಳುತ್ತಿದ್ದಾರೆ ಅದನ್ನೇ ಏತಕ್ಕೆ ಅನುಷ್ಠಾನ ಮಾಡುವುದಕ್ಕೆ ಆರ್ಡರ್ ಮಾಡಿದ್ದೀರಿ ?

ಡಾ॥ ಹೆಚ್. ಎಲ್. ತಿಮ್ಮೇಗೌಡ.— ಮಾಡಿದ್ದನ್ನೇ ಜಸ್ಟಿಫೈ ಮಾಡುವುದು ಸರಿಯಲ್ಲ.

ಉಪಾಧ್ಯಕ್ಷರು.— ಮಂತ್ರಿಗಳು ಉತ್ತರಿಸುತ್ತಾರೆ ಬಿಡಿ.

Sri B. A. Jivijaya — The Report further says :

"Pending final decision of Government, Forest Department is supplying forest produce to Industties at the old rates after obtaining a bank guarantee for Rs. 5 lakhs only, in accordance with the modified instructions issued by Government on 9th April 1981."

ಉಪಾಧ್ಯಕ್ಷರು.— ಟೈಮಾಯಿತು, ಬೇಗ ಮುಗಿಸಿ.

Sri B. A. Jivijaya.— "When asked about the adequate of the amount of the Bank guarantee, the Secretary to Government stated that the revised instructions were issued on a note of the Chief Secretary conveying the orders of the Chief Minister to the effect. The note reads as follows :

"In partial modification of orders issued earlier, the Chief

Minister desired on 8th April 1981 that the raw material required by the Plywood Industry may be issued

(a) Payment of cost at the old rates

(b) Production of bank guarantee for Rs. 5 lakhs.

(c) Production of a written undertaking to pay such amount of seiniorage as might be fixed by Government finally.

ಹಿಂದಿನ ಸರ್ಕಾರ ಏನು ನಿರ್ಧಾರ ತೆಗೆದುಕೊಂಡಿತ್ತು ಆ ನಿರ್ಧಾರವನ್ನು ಅವರು ಇಂಪ್ಲಿಮೆಂಟ್ ಮಾಡಲಿಲ್ಲ. 28-6-1982 ರಲ್ಲಿ ಮಂತ್ರಿಮಂಡಲದ ಸಭೆ ಆಗಿದೆ. 29-6-1982 ರಲ್ಲಿ ರೇಟ್ಸ್ ರಿವೈಸ್ ಆಗಿದೆ. ಮೊದಲು ಒಂದು ಟನ್ನಿಗೆ 105 ರೂಪಾಯಿ ಇದ್ದುದನ್ನು 120 ರೂಪಾಯಿಗೆ ರಿವೈಸ್ ಮಾಡಿ ಸರ್ಕಾರ ಏನು ರೇಟ್ ನಿಗದಿ ಮಾಡಿತ್ತು ಆ ವ್ಯತ್ಯಾಸವನ್ನು ಪಡೆಯುವುದಕ್ಕೆ ಒಂದು ವರ್ಷ 4 ತಿಂಗಳ ವರೆಗೆ ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ನಾವು ಕಾನೂನು ಇಲಾಖೆಯವರಿಗೆ ಈ ಬಗ್ಗೆ ಕೇಳಿದಾಗ ಇದನ್ನು ಇಂಪ್ಲಿಮೆಂಟ್ ಮಾಡಬೇಕಾದರೆ ತಿದ್ದುಪಡಿ ತರಬೇಕು ಎಂದು ಹೇಳಿದರು. ಅದಕ್ಕೋಸ್ಕರ ಈ ತಿದ್ದುಪಡಿಯನ್ನು ತಂದಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.— ನಮಗೆ ಸ್ವಲ್ಪ ಅರ್ಥವಾಗುವಂತೆ ಹೇಳಿದರೆ ಒಳ್ಳೆಯದು. 120 ರೂಪಾಯಿಗೆ ಫಿಕ್ಸ್ ಮಾಡಿದ್ದನ್ನು 250 ರೂಪಾಯಿಗೆ ಜಾಸ್ತಿ ಮಾಡಿದರು ಎಂದು ಹೇಳಿದರೆ ನಮಗೆ ಅರ್ಥವಾಗುವುದಿಲ್ಲ.

ಶ್ರೀ ಬಿ. ಎ. ಜೀವಿಜಯ.— 250 ರೂಪಾಯಿ ಬೆಲೆ ಇದೆ ಎಂದು ಚೀಫ್ ಕನ್ಸರ್ವೇಟರ್ ಆಫ್ ಫಾರೆಸ್ಟ್ ಹೇಳಿದ್ದರು. ಕೋರ್ಟಿನಲ್ಲಿ ಕೇಸ್ ತೀರ್ಮಾನವಾಗುವವರೆಗೆ 120 ರೂಪಾಯಿ ಕೊಡುವುದಕ್ಕೆ ಸರ್ಕಾರ ಕೂಡ ಒಪ್ಪಿಕೊಂಡಿತ್ತು. ಅದಾದಮೇಲೆ ಸರ್ಕಾರದವರೇ 205 ರೂಪಾಯಿ ರೇಟ್ ಫಿಕ್ಸ್ ಮಾಡಿದ್ದರು. ಈ 14 ತಿಂಗಳಲ್ಲಿ ಏನು ರೇಟ್ ನಿಗದಿ ಮಾಡಿದ್ದರು ....

ಶ್ರೀ ಎಂ. ಎಸ್. ಕೃಷ್ಣನ್.— 250 ರೂಪಾಯಿ ಜಾರಿಗೆ ಬರಲಿಲ್ಲ.

ಶ್ರೀ ಬಿ. ಎ. ಜೀವಿಜಯ— ಮಂತ್ರಿಮಂಡಲದಲ್ಲಿ ತೀರ್ಮಾನ ತೆಗೆದುಕೊಂಡಿದ್ದರು. ರೆಟ್ರಾಸ್ಪೆಕ್ಟಿವ್ ಎಫೆಕ್ಟ್‌ಗೆ ತರುವುದರಿಂದ ಎಲ್ಲ ಕೈಗಾರಿಕೆಗಳವರೂ ಒಂದು ಟನ್ನಿಗೆ 260 ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಎಷ್ಟೆಷ್ಟು ಹಣ ಸಿಗಬೇಕು ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಪ್ಲೈ ಉಡ್ ಇಂಡಸ್ಟ್ರೀಸ್‌ನಿಂದ ಒಂದು ಲಕ್ಷ ಕ್ಯುಬಿಕ್ ಮೀಟರ್‌ಗೆ ಮೂರೂವರೆ ಕೋಟಿ ರೂಪಾಯಿ ಬರಬೇಕಾಗಿದೆ. ಚಿಪ್ ಬೋರ್ಡ್ಸ್‌ನವರು 78 ಸಾವಿರ ಕ್ಯುಬಿಕ್ ಮೀಟರ್ಸ್‌ಗೆ 98 ಲಕ್ಷ ರೂಪಾಯಿ ಕೊಡಬೇಕಾಗಿದೆ. ಮ್ಯಾಚ್ ಉಡ್ ಇಂಡಸ್ಟ್ರೀಸ್‌ನವರು 52.5 ಲಕ್ಷ ಕೊಡಬೇಕಾಗಿದೆ. ಪ್ಯಾಕಿಂಗ್ ಕೇಸ್‌ನವರು ಮೂರು ಸಾವಿರ ಕ್ಯುಬಿಕ್ ಮೀಟರ್ಸ್‌ಗೆ ಹತ್ತೂವರೆ ಲಕ್ಷ ಕೊಡಬೇಕಾಗಿದೆ. ಬೊಂಬು ತೆಗೆದುಕೊಳ್ಳುವವರು 1 ಕೋಟಿ 20 ಲಕ್ಷ ರೂಪಾಯಿಗಳನ್ನು, ನೀಲಗಿರಿ ತೆಗೆದುಕೊಳ್ಳುವವರು 1 ಲಕ್ಷ 40 ಸಾವಿರ ಮೆಟ್ರಿಕ್ ಟನ್ನಿಗೆ 2 ಕೋಟಿ 87 ಲಕ್ಷ ರೂಪಾಯಿಗಳನ್ನು, ಫೈರ್ ಉಡ್‌ನವರು 42 ಲಕ್ಷ 44 ಸಾವಿರ ರೂಪಾಯಿಗಳನ್ನು, ಗ್ರಾಸ್‌ನವರು 5 ಸಾವಿರ ಮೆಟ್ರಿಕ್ ಟನ್ನಿಗೆ ಒಂದು ಕೋಟಿ 63 ಲಕ್ಷ 23 ಸಾವಿರ ರೂಪಾಯಿಗಳನ್ನು ಕೊಡಬೇಕು. ಅಂದರೆ ಒಟ್ಟು 9 ಕೋಟಿ 63 ಲಕ್ಷ 20 ಸಾವಿರ ರೂಪಾಯಿಗಳು ಬರಬೇಕು ಅದರಲ್ಲಿ ಮೂರು ಕೋಟಿ ಚಿಲ್ಲರೆ ಹಣ ವಸೂಲು ಮಾಡಿದ್ದೇನೆ. ಇದನ್ನು ರೆಟ್ರಾಸ್ಪೆಕ್ಟೀವ್ ಎಫೆಕ್ಟಿನಿಂದ ತರುವುದರಿಂದ ನಮ್ಮ ಸರ್ಕಾರಕ್ಕೆ 5 ರಿಂದ 6 ಕೋಟಿ ರೂಪಾಯಿ ಆದಾಯ ಬರುತ್ತದೆ. 5 ವರ್ಷ ಸಮಯ ಏನು ನಿಗದಿ ಮಾಡಿದ್ದೇವೆ ಅದಕ್ಕೆ ಕಾರಣ ಇದೆ ಮಾನ್ಯ ವಿರೋಧ ಪಕ್ಷದ ನಾಯಕರು ನಿಮ್ಮ ಕಾಲದಲ್ಲಿ ಏನೂ ಕೊಡಲಿಲ್ಲ ಎಂದು ಹೇಳಿದರು. ತಮಗೆ ಈ ಸದನದಲ್ಲಿ ಮತ್ತು ಮೇಲ್ಮನೆಯಲ್ಲಿ ಈ ಬಗ್ಗೆ ಬೇಕಾದಷ್ಟು ವಾದವಿವಾದ ನಡೆದಿದೆ

ಶ್ರೀ ಎಂ. ವೀರಪ್ಪ ಮೊಯಿಲಿ.— ಅದೂ ಕೂಡ ಸರ್ಕಾರಿ ಅಲ್ಲ; ಜಮ್ಮಾ ಮಲೈಗೆ ಸಂಬಂಧಪಟ್ಟಿದ್ದು.

ಶ್ರೀ ಎಸ್. ಸೂರ್ಯನಾರಾಯಣರಾವ್.— ಯಾರೋ ಕಾಂಗ್ರೆಸ್ ಜನರಲ್ ಸೆಕ್ರೆಟರಿಯವರಿಗೆ ಕೊಟ್ಟಿದ್ದರು ಎಂದು ಪೇಪರ್‌ನಲ್ಲಿ ಬಂದಿತ್ತು, ನನ್ನ ಜ್ಞಾಪಕ ಸರಿಯಾಗಿದ್ದರೆ.

ಶ್ರೀ ಬಿ. ಎ. ಜೀವಿಜಯ.— ಅದು ಜಮ್ಮಾ ಏಲಕ್ಕಿ ವ್ಯವಸಾಯ ಮಾಡತಕ್ಕ ಜಮೀನನ್ನು ಕೊಟ್ಟಿದ್ದರು. 11 ಕೈಗಾರಿಗಳಿಗೆ 2 ಸಾವಿರ ಇಸವಿಯವರೆಗೆ ಲೀಸ್‌ಗೆ ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ನಾವು ಕೊಡಲಿಲ್ಲ. ಹಿಂದೆ ಕೊಟ್ಟಿದ್ದು.

ಶ್ರೀ ಬಿ. ಎ. ಜೀವಿಜಯ.— 1979 ರಿಂದ ಕೊಟ್ಟಿದ್ದಾರೆ. ಹೊಸ ಸರ್ಕಾರ ಬಂದಮೇಲೆ ಈ ನೀತಿ ನಿಯಮಗಳನ್ನು ಬದಲಾಯಿಸಬೇಕು ಎಂದು ಮಾಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.— ನಾವು ಕೊಟ್ಟಿಲ್ಲ ಎಂದು ಮೊಯಿಲಿಯವರು ಹೇಳುತ್ತಾರೆ. ಹಾಗಾದರೆ ಇನ್ಯಾರು ಕೊಟ್ಟವರು ?

ಶ್ರೀ ಎಂ. ವೀರಪ್ಪ ಮೊಯಿಲಿ.— ಹಿಂದೆ.

ಶ್ರೀ ಎಂ. ಎಸ್. ಕೃಷ್ಣನ್.— ಎಲ್ಲಾ ಕಾಂಗ್ರೆಸ್ ಸರ್ಕಾರವೇ ತಾನೆ?

ಶ್ರೀ ಬಿ. ಎ. ಜೀವಿಜಯ.— ಇದರ ಬಗ್ಗೆ ಚರ್ಚೆ ಮಾಡಿಕೊಂಡು ಹೋದರೆ ಇಡೀ ದಿವಸ ಸಮಯ ಕಳೆಯಬೇಕಾಗುತ್ತದೆ. ಅದು ಬೇಡ ಎಂದು ನನಗನ್ನಿಸುತ್ತದೆ. ದೀರ್ಘಾವಧಿಯಲ್ಲಿ ಏನು ಅಗ್ರಿಮೆಂಟ್ ಮಾಡಿಕೊಂಡಿದ್ದರು ಅದರ ಪ್ರಕಾರ ನ್ಯಾಯ ಸಮ್ಮತವಾಗಿ ಆ ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳು ಸಿಗಬೇಕಾಗಿದೆ. ಅದು ಆಗಿಲ್ಲ. ಸಮನಾದ ಹಂಚಿಕೆಯಾಗಬೇಕು. ಸೀನಿಯರೇಜ್ ರೇಟನ್ನು ಎರಡು ವರ್ಷಕ್ಕೊಮ್ಮೆ ರಿವೈಸ್ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆ. ಹಿಂದೆ ಏನು 20-30 ವರ್ಷಕ್ಕೆ ಲೀಸ್ ಕೊಡುತ್ತಿದ್ದರು ಅದನ್ನು ಈಗ 5 ವರ್ಷಕ್ಕೆ ಸೀಮಿತಗೊಳಿಸಿದ್ದೇವೆ. ಸನ್ಮಾನ್ಯ ಸದಸ್ಯರಾದ [illegible]ಯ್ಯನವರು ಮತ್ತಿತರ ಅನೇಕ ಸದಸ್ಯರು ಹೇಳಿದಹಾಗೆ ಉರುವಲು ಕಟ್ಟಿಗೆ ಸಮಸ್ಯೆ ಬಗೆಹರಿಸುವುದಕ್ಕೆ ಹಿಂದಿನ ಅಗ್ರಿಮೆಂಟಿನಿಂದ ಕಷ್ಟವಾಗಿದೆ. ಹರಿಹರ ಪಾಲಿಫೈಬರ್ಸ್‌ಗೆ ಎಷ್ಟು ಯುಕ್ಲಿಪ್ಟಸ್ ಬೇಕಿದ್ದರೂ ಕೊಡಬೇಕಾಗಿತ್ತು. ಆದರೆ ಈ ತಿದ್ದುಪಡಿಯಿಂದ ಉರುವಲು ಕಟ್ಟಿಗೆಗೆ ತೊಂದರೆಯಾಗದಂತೆ ಆಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.— ಹಲವಾರು ಲಕ್ಷಾಂತರ ರೂಪಾಯಿ ಕೊಡಬೇಕೆಂದು ಹೇಳಿದ್ದೀರಿ. ಎಲ್ಲಾ ಸೇರಿ 6 ಕೋಟಿ ರೂಪಾಯಿ ಬರುತ್ತದೆಂದು ಹೇಳಿದ್ದೀರಿ. ಹಿಂದಿನದೆಲ್ಲಾ ಸೇರಿಸಿದರೆ 10 ಕೋಟಿ ರೂಪಾಯಿ ಆಗುತ್ತದೆ. ಸರ್ಕಾರಕ್ಕೆ ಹಣ ಬರುವ ಬಗ್ಗೆ ನಮ್ಮ ವಿರೋಧವಿಲ್ಲ. ಆದಾಯದ ದೃಷ್ಟಿಯಿಂದ ಅದು ಬರಬೇಕು. ನೀವು ಸೀನಿಯರೇಜ್ ರೇಟ್ ಹೆಚ್ಚಿಗೆ ಮಾಡಿ ವಸೂಲು ಮಾಡುವುದಕ್ಕೆ ಹೋಗಿ ಕೈಗಾರಿಕೆಗಳನ್ನು ಮುಚ್ಚಿದರೆ ಏನು ಮಾಡುತ್ತೀರಿ ಎಂಬುದನ್ನೂ ಯೋಚನೆ ಮಾಡಬೇಕು.

ಶ್ರೀ ಬಿ. ಎ. ಜೀವಿಜಯ.— ಈ ಕೈಗಾರಿಕೆಗಳನ್ನು ಅವಲಂಬಿಸಿರತಕ್ಕ ಅನೇಕ ಕೈಗಾರಿಕೆಗಳಿವೆ. ಅದರಲ್ಲಿ 40-45 ಸಾವಿರ ಕಾರ್ಮಿಕರಿದ್ದಾರೆ. ಕೆಲವು agreement on assured basis ಎಂದು ಇದೆ. ಸರ್ಕಾರ ಅರಣ್ಯವನ್ನು ಲೀಸ್‌ಗೆ ಕೊಡಬೇಕಾದರೆ 5 ವರ್ಷ ಎಂದು ಅವಧಿ ಇದ್ದರೂ subject to availability ಎಂದು ಹಾಕಿದೆ. ಇಲ್ಲದಿದ್ದರೆ ಮರ ಕಡಿಯುವಾಗ ಅವರಿಗೆ ಮರ ಸಿಗದಿದ್ದರೆ ಅವರಿಗೆ ಮರಗಳನ್ನು ಒದಗಿಸಬೇಕಾದುದು ಸರ್ಕಾರದ ಜವಾಬ್ದಾರಿಯಾಗುತ್ತದೆ. ಎರಡು ಲಕ್ಷ ಟನ್ ಕೊಡಬೇಕೆಂದು ಕೆಲವು ಅಗ್ರಿಮೆಂಟ್‌ಗಳಿರುತ್ತವೆ. ಕೆಲವು ಸಂದರ್ಭದಲ್ಲಿ ಸರ್ಕಾರಕ್ಕೆ ಅಷ್ಟು ಕೊಡಲು ಸಾಧ್ಯವಾಗದೇ ಹೋಗಬಹುದು. ಆದ್ದರಿಂದ subject to availability ಎಂದು ಹಾಕಿದ್ದೇವೆ. ಇದರಿಂದ ಕೈಗಾರಿಕೆಗಳಿಗೆ ಕೂಡ ತೊಂದರೆಯಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— Subject to availability ಎಂದು ಹೇಗೆ ಹೇಳುವುದಕ್ಕಾಗುತ್ತದೆ? ಇಷ್ಟು ವರ್ಷಕ್ಕೆ ಎಂದು ಅಗ್ರಿಮೆಂಟ್ ಮಾಡಿಕೊಂಡು ಸೀನಿಯರೇಜ್ ರೇಟ್ ಫಿಕ್ಸ್ ಮಾಡಿದ ಮೇಲೆ ಅವರಿಗೆ ಮರ ತೆಗೆದುಕೊಳ್ಳಲು ಅಧಿಕಾರ ಇರುತ್ತದೆ. ಅವರಿಗೆ ಕೊಡುವಾಗಲೇ ಇಷ್ಟಿಷ್ಟು ಮರ ಎಂದು ಅಂದಾಜು ಮಾಡಿರುತ್ತೀರಿ. ಆ ತರಹ ಕೊಡಲು ಅಗ್ರಿಮೆಂಟ್ ಆದಮೇಲೆ ಮಧ್ಯೆ ಮರ ಸರಬರಾಜು ಮಾಡುವುದಕ್ಕಾಗುವುದಿಲ್ಲ ಎಂದು ಹೇಳುವುದು ಸರಿಯೆ? ಹಾಗೆ ಮಾಡಿದರೆ ತೊಂದರೆಯಾಗುವುದಿಲ್ಲವೆ?

ಶ್ರೀ ಎಸ್. ಜಿ. ನಾಯಕ್.— ಅಂಥ ಸಂದರ್ಭದಲ್ಲಿ ಬೇರೆ ಜಮೀನಿನಲ್ಲಿ ಮರ ಬೆಳೆಸುವುದಕ್ಕೆ ಅವಕಾಶ ಮಾಡಿಕೊಳ್ಳಬಹುದಲ್ಲ?

ಶ್ರೀ ಬಿ. ಎ. ಜೀವಿಜಯ.— ಒಂದು ಸಾವಿರ ಎಕರೆ ಜಮೀನನ್ನು ಸರ್ಕಾರ ಲೀಸ್‌ಗೆ ಕೊಟ್ಟರೆ ಒಂದು ವರ್ಷದಲ್ಲೇ ಒಂದು ಸಾವಿರ ಎಕರೆಯಲ್ಲಿ ಮರ ಕಡಿಯುವುದಕ್ಕಾಗುವುದಿಲ್ಲ. ಅದಕ್ಕೆ ವರ್ಕಿಂಗ್ ಪ್ಲಾನ್ ಇದೆ. ಅದರ ಪ್ರಕಾರ ಒಂದು ವರ್ಷದಲ್ಲಿ 40 ಎಕರೆಯಂತೆ ಕಡಿಯಬೇಕು; ಮತ್ತು ಮರಗಳನ್ನೂ ಕೂಡ ಇಷ್ಟೇ ಕಡಿಯಬೇಕು ಎಂದು ನಿಗದಿ ಮಾಡಿರುತ್ತೇವೆ. ಅದು ಬಿಟ್ಟು 100-200 ಎಕರೆಯಲ್ಲಿ ಮರಗಳನ್ನು ಒಂದೇ ವರ್ಷದಲ್ಲಿ ಕಡಿಯುವುದಕ್ಕಾಗುವುದಿಲ್ಲ. ನಾವು ಕೈಗಾರಿಕೆಗಳವರ ಜೊತೆ ಎಷ್ಟು ಮೀಟರಿಗೆ ಒಪ್ಪಂದ ಮಾಡಿಕೊಂಡಿರುತ್ತೇವೆ ಅಷ್ಟು ಮರಗಳು ಕಡಿಯುವ ಸಂದರ್ಭದಲ್ಲಿ ಸಿಗದಿದ್ದರೆ ಆಗ ಅಷ್ಟು ಮರಗಳನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಾವು subject to availability ಎಂದು ಹಾಕಿದ್ದೇವೆ

ಶ್ರೀ ಎಂ. ಎಸ್. ಕೃಷ್ಣನ್.— ಇದು ಕಾನೂನು ಪ್ರಕಾರ ಸರಿಯೇ ಎಂದು ನಾನು ಕೇಳುತ್ತೇನೆ.

ಶ್ರೀ ಬಿ. ಎ. ಜೀವಿಜಯ.— ಎಷ್ಟೋ ವರ್ಷಗಳಿಂದ ನಮ್ಮ ಅರಣ್ಯದಲ್ಲಿ ಕೆಲಸ ನಡೆಯುತ್ತಿದೆ. ಒಂದಲ್ಲಾ ಒಂದು ವಿಧದಲ್ಲಿ 23 ಲಕ್ಷ ಹೆಕ್ಟೇರ್ ಅರಣ್ಯದಲ್ಲಿ ಕೆಲಸ ನಡೆಯುತ್ತಿದೆ. ಮೊದಲಿನಿಂದಲೂ ಕ್ರಮಬದ್ಧವಾಗಿ ಗುತ್ತಿಗೆಗೆ ಕೊಟ್ಟು ವರ್ಕಿಂಗ್ ಪ್ಲಾನ್ ಪ್ರಕಾರ ಮರಗಳನ್ನು ಕಡಿದಿದ್ದರೆ ಅರಣ್ಯಕ್ಕೆ ಮಾರಕ ಆಗುತ್ತಾ ಇರಲಿಲ್ಲ. ಇವತ್ತು ವ್ಯಾಪಕವಾಗಿ ಅರಣ್ಯದಿಂದ ಮರಗಳು ಹೋಗುತ್ತಾ ಇವೆ. ಹೊಸ ಫ್ಯಾಕ್ಟರಿಗಳನ್ನು ಹಾಕತಕ್ಕ ಕಾಲದಲ್ಲಿ ಅರಣ್ಯ ಇಲಾಖೆಯ ಅನುಮತಿಯನ್ನು ಪಡೆದುಕೊಳ್ಳಲಾಗುತ್ತಿಲ್ಲ. ಹಾಗೂ ಫ್ಯಾಕ್ಟರಿಯವರು ಎಕ್ಸ್‌ಪಾಂಡ್ ಮಾಡಿದಾಗಲೂ ಸಹ ಅರಣ್ಯ ಇಲಾಖೆ ಪರ್ಮಿಷನ್ ತೆಗೆದು

ಕೊಂಡಿಲ್ಲ. ಅವರು ಎಕ್ಸ್‌ಪಾಂಡ್ ಮಾಡಿ ಅದಕ್ಕೆ ಬೇಕಾದಂತಹ ಮರದ ಬಗ್ಗೆ..........

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಮಂತ್ರಿಗಳು ಪಿ. ಎ. ಸಿ. ವರದಿಗೆ ಪ್ರಾಮುಖ್ಯತೆ ಕೊಡಬೇಕೆಂದು ಹೇಳುತ್ತಿದ್ದಾರೆ ಮಾನ್ಯ ಕಾನೂನು ಮಂತ್ರಿಗಳಾದ ಲಕ್ಷ್ಮೀಸಾಗರ್ ಅವರೂ ಇದನ್ನು ಗಮನಿಸಬೇಕು ಮಾನ್ಯ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ 29-6-1982 ರಲ್ಲಿ ಏನು ವರದಿ ಕೊಡ ಲಾಗಿದೆ ಅದರಲ್ಲಿ ಪೇಜ್ 22 ಹಾಗೂ 23 ರಲ್ಲಿ ನವ ಿ ಡಿಸಿರತಕ್ಕ ರೆಕಮಂಡೇಷನ್ಸ್ ತಾವು ಓದಿದ್ದೀರಾ?

ಶ್ರೀ ಬಿ. ಎ. ಜೀವಿಜಯ. — ನಾನು ಅದನ್ನು ಓದಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ನೀವು ಓದಿದ್ದೀರಿ, ಆದರೆ ಸಭೆಗೆ ತಾವು ಓದಿಲ್ಲ. ನಾನು ಅದನ್ನು ಇಲ್ಲಿ ಓದುತ್ತೇನೆ. ಈಗಿನ ಕೈಗಾರಿಕೆ ಮಂತ್ರಿಗಳಾಗಿರುವ ಎಸ್. ಆರ್. ಬೊಮ್ಮಾಯಿಯವರು ಅಂದು ಆ ಕಮಿಟಿಯ ಅಧ್ಯಕ್ಷರಾಗಿದ್ದರು. This is the recommendation of the Public Accounts Committee which was headed by Sri S. R. Bommai who is at present the Minister for Industries.

"The Committee recommend : (a) The revised rates for the forest produce to be supplied to industries should not be less than the rates fixed in the Rules in force on 19th Feb. 1981.

(b) Such rates should be made applicable from the date from the amendment to the forest Act came into effect viz., 23rd February 1981. Action taken in the matter be reported to the Committee within 3 months indicating also whether the entire arrears due from the different companies have been only recovered."

ಈಗ ಅದನ್ನು ರೆಟ್ರಾಸ್‌ಪೆಕ್ಟೀವ್ ಎಫೆಕ್ಟ್‌ಗೆ ಕೊಡಬೇಕೆಂದು ಮಸೂದೆ ಮಾಡುತ್ತಿದ್ದೀರಿ. ಆದುದರಿಂದ ತಾವು ಇವತ್ತು ಮಾನ್ಯ ಬೊಮ್ಮಾಯಿಯವರು ಕೊಟ್ಟಿರತಕ್ಕ ಪಿ.ಎ.ಸಿ ವರದಿಯನ್ನು ಉಲ್ಲಂಘನೆ ಮಾಡಿದ್ದೀರಿ ಇದರಿಂದ ತಮಗೆ ಅನುಕೂಲವಾಗುವುದಿದ್ದರೆ ಮಾಡಿ. ಆದರೆ ಜನ ಮಾತ್ರ ಪ್ರಶ್ನೆ ಹಾಕುತ್ತಾರೆ ಇವತ್ತು ಏನು ಮಸೂದೆಯನ್ನು ತಂದಿದ್ದೀರಿ ಇದರಿಂದ ಇವತ್ತು ಸರ್ಕಾರಕ್ಕೆ ಸುಮಾರು 8ಕೋಟಿ ರೂಪಾಯಿ ನಷ್ಟವಾಗುತ್ತದೆಂದು ಹೇಳುತ್ತೇನೆ. ಇದರಿಂದ ಇವತ್ತಿನ ದಿವಸ ನಿಮ್ಮ ಪಕ್ಷದ ಒಬ್ಬ ಸದಸ್ಯರು ಕೊಟ್ಟಿರತಕ್ಕ ಒಂದು ವರದಿಯನ್ನು ಗಾಳಿಗೆ ತೂರುತ್ತಿದ್ದೀರಿ ಎಂದು ನಾನು ತಮ್ಮ ಮುಖಾಂತರ ಮಾನ್ಯ ಕಾನೂನು ಸಚಿವರಾದ ಲಕ್ಷ್ಮೀಸಾಗರ್ ಅವರ ಗಮನಕ್ಕೆ ತರುತ್ತಿದ್ದೇನೆ

Dr. V. S. Acharya.— Please read page 4, Statement of objects and reasons :

"The seigniorage rates were revised with effect from 29th June 1982 on the basis of the recomendations of an offical committee constituted for the purpose. The rates fixed from 29th June 1982 are less than the rates which came into force on 23rd February 1981. In view of the anomaly that the earlier rates for the period from 23rd February 1981 to 29th June 1982 were higher than the rates which came into force from 29th June 1982 rates were decided to be given retrospective effect from 23rd February 1981."

ಸ್ವಾಮಿ ಒಂದು ರೇಟಿನ ನಂತರ ಇನ್ನೊಂದು ರೇಟನ್ನು ಫಿಕ್ಸ್ ಮಾಡಿ ನಂತರ ಹಿಂದೆ ನಿಶ್ಚಯ ಮಾಡಿರತಕ್ಕದ್ದು ಕಡಿಮೆ ಎಂದು ಹೇಳಿ, ಮುಂದೆ ನಿಶ್ಚಯಮಾಡಿದ ರೇಟನ್ನು ಹಿಂದಿನ ಅವಧಿಯಲ್ಲಿ ನಿರ್ಧಾರ ಮಾಡಬೇಕೆಂದು ಎಂದರೆ ಆಶ್ಚರ್ಯವಾಗುತ್ತದೆ. ಇವತ್ತು ಈ ಪ್ರಕಾರ ನೀವು ವಸೂಲಿ ಮಾಡಿದರೆ ನನ್ನ ಪ್ರಕಾರ ಅದನ್ನು ವಾಪಸ್ಸು ಕೊಡಬೇಕಾಗಬಹುದು ಎಂದೆನಿಸುತ್ತದೆ ಹೆಚ್ಚಿಗೆ ತೆಗೆದುಕೊಳ್ಳತಕ್ಕದ್ದು ಯಾವ ಮ್ಯಾಥಮೆಟಿಕ್ಸ್ ಸ್ವಾಮಿ? ಇದು ಸ್ವಲ್ಪ ಅರ್ಥ ಆಗುವ ಹಾಗೆ ಹೇಳಿ ಸ್ವಾಮಿ? ಇದರಿಂದ ನಿಜವಾಗಿ ಸರ್ಕಾರಕ್ಕೆ ಹಣ ಬರುವುದಾದರೆ ನಮ್ಮ ಅಡ್ಡಿ ಇಲ್ಲ.

ಶ್ರೀ ಬಿ.ಎ. ಜೀವಿಜಯ.— 23-2-71ರಲ್ಲಿ ಏನು ಒಂದು ದರ ಇತ್ತು ಅದು ಪರಿಷ್ಕರಣ ಆದ ಮೇಲೆ ಅದು 810 ರೂಪಾಯಿಯಾಗಿ...........

ಶ್ರೀ ಡಾ॥ ವಿ. ಎಸ್. ಆಚಾರ್ಯ.— ಮೊದಲು ಎಷ್ಟು ಇತ್ತು ಸ್ವಾಮಿ?

ಶ್ರೀ ಬಿ.ಎ. ಜೀವಿಜಯ.— ಮೊದಲು 24 ಹಾಗೂ 65 ರೂಪಾಯಿ ಇತ್ತು ಸ್ವಾಮಿ. ಅದನ್ನು

ಕಮಿಟಿ ರಿಪೈಸ್ ಮಾಡಿ 810 ರೂಪಾಯಿ ಎಂದು ನಿಗದಿ ಮಾಡಿದರು. ಅದಕ್ಕೆ ಒಂದು ತಪೆ ಅರ್ಜಿ ಬಂದಿತು. ಆ ನಂತರ ಅದನ್ನು 120 ರೂಪಾಯಿಗಳಿಗೆ ಕೋರ್ಟಿನಲ್ಲಿ ನಿಗದಿ ಮಾಡಲಾಯಿತು. ಆಮೇಲೆ ಅವರು ಹಿಂದಿನಿಂದ ಅನ್ವಯವಾಗುವ ಹಾಗೆ 205 ರೂಪಾಯಿಗಳಿಗೆ ಫಿಕ್ಸ್ ಮಾಡಿದರು. ಈ 14 ತಿಂಗಳಲ್ಲಿ ರೂ. 120 ಹಾಗೂ ರೂ. 205ರ ಏನು ವ್ಯತ್ಯಾಸ ಇದೆ. ಆ ಹಣ ಸರ್ಕಾರಕ್ಕೆ ಬರಬೇಕಾಗುತ್ತದೆ. ಮತ್ತು ಅದನ್ನು ಮಾಡಬೇಕಾದರೆ ಒಂದು ತಿದ್ದುಪಡಿಯನ್ನು ತರಬೇಕಾಯಿತು. ಹಿಂದಿನಿಂದ ಪಡೆದುಕೊಳ್ಳುವ ಹಾಗೆ ತಿದ್ದುಪಡಿ ಮಾಡಿರುವುದರಿಂದ ಹಿಂದಿನಿಂದ ಅನ್ವಯವಾಗುವ ಹಾಗೆ ಎಲ್ಲಾ ಸೇರಿ 224 ರೂಪಾಯಿಗಳಂತೆ 23-2-81 ರಿಂದ ಕೊಡಬೇಕಾಗುತ್ತದೆ. ಈ ಪ್ರಕಾರ ನಾನು ಕೊಟ್ಟ ಮಾಹಿತಿ ಪ್ರಕಾರ ಸರ್ಕಾರಕ್ಕೆ ಸುಮಾರು 9ಕೋಟಿ 63ಲಕ್ಷ ರೂಪಾಯಿಗಳು ಬರುತ್ತಾ ಇದೆ.

ಶ್ರೀ ಎಂ. ಎಸ್. ಕೃಷ್ಣನ್.— 120 ರೂಪಾಯಿ ಇದ್ದುದನ್ನು 205 ರೂಪಾಯಿ ಎಂದು ಮಾಡಿದರು: ಎಂದರೆ ಈ ವ್ಯತ್ಯಾಸ ಏನು 85 ರೂಪಾಯಿ ಇದೆ ಅದರ ಪ್ರಕಾರ 14 ತಿಂಗಳಲ್ಲಿ 9 ಕೋಟಿ ರೂಪಾಯಿ ಬರುತ್ತದೆಯೋ?

ಶ್ರೀ ಬಿ.ಎ. ಜೀವಿಜಯ.— ಹೌದು. ಆದುದರಿಂದ ಏನು ಈ ತಿದ್ದುಪಡಿಯನ್ನು ತಂದಿದ್ದೇವೆ ಇದರಿಂದ ಸರ್ಕಾರಕ್ಕೆ ಅಧಿಕ ಲಾಭ ಇದೆ. ಹಾಗೂ ಅರಣ್ಯ ನೀತಿಯನ್ನು ಕೂಡ ಪುನರ್‌ಪರಿಶೀಲನೆ ಮಾಡುವುದಕ್ಕೆ ಸಾಧ್ಯವಿದೆಯೆಂದು ತಮ್ಮ ಮುಖಾಂತರ ಸದನದ ಗಮನಕ್ಕೆ ತಂದು, ಸಭೆ ಈ ಒಂದು ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

Mr. Deputy Speaker – The ques'ion is:

"That the Karnataka Forest (Amendment) Bill. 1984, be tal en into consideration."

The motion was adopted

Clause by Clause Consideration

Clause-2

Mr. Deputy Speaker. — The question is:

"That Clause 2 do stand part of the Bill."

The motion was adopted

Clause 2 was added to the Bill.

Clause 2 and 3

Mr. **Deputy Speaker.**—The Hon. Minister of State for Forests has given a notice for deletion of Clauses 3 and 4. I now put Clausee 3 and 4 to the vote of the House. The question is:

"That Clauses 3 and 4 do stand part of the Bill."

The motion was negatived

Clauses 3 and 4 were deleted from the Bill.

Clause 5

Mr. **Deputy Speaker** — There is an amendment by hon. mem ber Sri M.S. Krishnan to Clause 5.

Sri M.S Krishnan.— Sir, I beg to move the following amendment to Clause 5:

"(i) That a full stop be put after "Five years" in line 5 of the Clause.

(ii) If after entering in to agreement it is deemed necessary and expedient to alter the terms in respect of supply of tree, wood timer or other produce, the Government shall have the power to do so, however, after hearing to the persons concerned."

The question was proposed.

Sri M S. Krishnan — I will explain. Clause 5 as it is now reads thus:

"No lease, agreement or any other document entered in to by the State Government and providing for supply of fire-wood,

timer or other forest produce by the State Government shall at a time be for a term exceeding five years and the supply under every such lease, agreement or other document shall be subject to the condition of availability of such tree, wood, timber or other forest produce."

I have no objection at all so far as the first portion of it is concerned. It is a good thing. It shall not exceed five years. But the second portion is not correct. Having entered into an agreement if you say that you are not going to supply timber, what will happen to the people who have entered into an agreement?

Sri B.A. Jivijaya — We say, 'subject to the availability'. We concede some areas to some Industries. Supposing trees are not available, how can the Government supply it?

Sri M.S. Krishnan.— Once you have entered into an agreement means you have thought of the pros and cons of the agreement. ಮರ ಇದೆ ಎಂದು ಅಂದಾಜು ಮಾಡಿ ಇಂತಿಂಥಾ ಫ್ಯಾಕ್ಟರಿಗಳವರಿಗೆ ಕೊಡಬಹುದೆಂದು ಮಾಡಿಕೊಂಡಿರುತ್ತೀರಿ. ಇಷ್ಟು ದಿವಸದಲ್ಲಿ ಬೆಳೆಯುತ್ತದೆಂದು ಅಂದಾಜು ಮಾಡಿರುತ್ತೀರಿ ಅದನ್ನು ಮಾಡಿಕೊಂಡ ಮೇಲೆ ಮತ್ತೆ ಆಗುವುದಿಲ್ಲ ಅಂದರೆ ಅದು ನ್ಯಾಯವೇ? ನಾಳೆ ಫ್ಯಾಕ್ಟರಿ ಮುಚ್ಚಿಕೊಂಡು ಹೋದರೆ ಬೀದಿಗೆ ಬೀಳುತ್ತಾರೆ. ಆಗ ಡೆಮಾನ್‌ಸ್ಟ್ರೇಷನ್ ತೆಗೆದುಕೊಂಡು ಬರುವುದು, ಪೋಲೀಸರಿಂದ ಏಟುಗಳನ್ನು ತಿನ್ನುವುದು. ಇತ್ಯಾದಿ Is it fair?

ಶ್ರೀ ಬಿ.ಎ. ಜೀವಿಜಯ.— ನಾವು ಈ ಕ್ಲಾಸ್ ಹಾಕಿದ ಕೂಡಲೇ ಏನೂ ಆಗುವುದಿಲ್ಲ, ಎಷ್ಟು ಸಾಧ್ಯವಿದೆ ಅಷ್ಟು ಕೊಡುತ್ತೇವೆ. ಮರ ಎಲ್ಲಿ ಇರುವುದಿಲ್ಲ, ಎಲ್ಲಿ ಸಾಧ್ಯವಾಗುವುದಿಲ್ಲ, ಅಂಥ ಸಂದರ್ಭದಲ್ಲಿ ಅಗ್ರಿಮೆಂಟ್ ಇದ್ದರೂ ಕಷ್ಟವಾಗುತ್ತದೆ. ಸಾಧ್ಯವಾದಷ್ಟು ಮರಗಳನ್ನು ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

Mr. Deputy Speaker.— I will now put the Amendment moved by hon. Member Sri M.S Krishnan to the vote of the House. The question is:

"That Clause 5 be amended as follows:

(i) That a full stop be put after "five years" in line 5 of the Clause.

(ii) If after entering in to agreement it is deemed necessary and expident to alter the terms in respect of supply of tree, wood, timber or other produce, the Government shall have the power to do so, however, after hearing to the persons concerned."

The amendment was negatived

Mr Deputy Speaker.— The question is:

"That Clause 5 do stand part of the Bill."

The motion was adopted.

Clause 5 was added to the Bill.

Clauses 6, 7 and 8

Mr. Deputy Speaker.— The question is:

That Clauses 6, 7 and 8 do stand part of the Bill."

The motion was adopted

Clauses 6 7 and 8 were added to the Bill.

Clause 1.

Mr. Deputy Speaker.— The question i

"That Clause 1, the Long Title, the preamable and the enacting formula do stand part of the Bill."

The motion was adopted

Clause 1, the Long Title, the preamable and the Enacting Formula were added to the Bill.

MOTION TO PASS

Sri B.A. Jivijaya — Sir, I beg to move:

"That the Karnataka Forest (Amendment) Bill, 1984, be passed.

Mr. Deputy Speaker — The question is:

"That the Karnataka Forest (Amendment) Bill, 1984 be passed."

The motion was adopted and the Bill was passed.

The Karnataka Silk Worm, Cocoon and Silk yarn (Regulation of production supply, Distribution and (Amendment) Bill, 1984.

Motion to Consider

Smt. Chandra Prabha Urs (Minister for Social Welfare and Sericulture). — Sir. I beg to move:

"That the Karnataka Silkworm Seed, Cocoon and Silk Yarn (Regulation of Production, Supply, Distribution and Sale) (Amendment) Bill, 1984, be taken into consideration.

The question was proposed

ಶ್ರೀಮತಿ ಚಂದ್ರಪ್ರಭಾ ಅರಸ್ (ಸಮಾಜ ಕಲ್ಯಾಣ ಹಾಗೂ ರೇಷ್ಮೆ ವ್ಯವಸಾಯ ಮಂತ್ರಿಗಳು). — ಮಾನ್ಯ ಅಧ್ಯಕ್ಷರೇ, ನಮ್ಮ ರೇಷ್ಮೆ ಇಲಾಖೆಗೆ ಸಂಬಂಧಪಟ್ಟ ಹಾಗೆ ಕೆಲವೊಂದು ಹಣಕಾಸಿನ ಸಹಾಯವನ್ನು, ಸರ್ಕಾರ ಲೋನ್ ಮುಖಾಂತರ ಕೊಡತಕ್ಕಂತಾದ್ದಕ್ಕೆ ನಮ್ಮ ನಿರ್ದೇಶಕರ ಅಧಿಕಾರ ವ್ಯಾಪ್ತಿಯಲ್ಲಿ ಪೆನಾಲ್ಟಿ ಅಥವಾ ಫೈನ್ ಹಾಕಲಿಕ್ಕೆ ಅಧಿಕಾರ ಇದೆ. ಆದರೆ ಮೋಡ್ ಆಫ್ ರೆಕವರಿ, ಮರುಪಾವತಿ ಮಾಡದೇ ಇದ್ದವರಿಗೆ, ವಸೂಲಾತಿ ಮಾಡಲಿಕ್ಕೆ ನಮ್ಮಲ್ಲಿ ಅಧಿಕಾರದ ಚೌಕಟ್ಟಿನಲ್ಲಿ ಸಾಧ್ಯವಿಲ್ಲದೇ ಇದ್ದುದರಿಂದ, ಮೋಡ್ ಆಫ್ ರೆಕವರಿ, ಈ ಡ್ಯೂಸ್, ನಮ್ಮ ಇಲಾಖೆಗೆ ಸಂಬಂಧಪಟ್ಟ ಹಾಗೆ ಕೆಲವು ಬಾಕಿ ವಸೂಲಿ ಮಾಡಲಿಕ್ಕೆ ಕಂದಾಯ ಇಲಾಖೆಯಲ್ಲಿ ಇರತಕ್ಕ ಕೆಲವು ಕಾನೂನು ಏನು ಇದೆ ಅದೇ ರೀತಿ, ಇಲ್ಲೂ ವಸೂಲು ಮಾಡಲಿಕ್ಕೆ ಈ ಕಾನೂನಿಗೆ ಕೆಲವೊಂದು ತಿದ್ದುಪಡಿಗಳನ್ನು ತಂದಿದ್ದೇವೆ. ಇದಕ್ಕೆ ಅನುಮತಿ ಕೊಡಬೇಕೆಂದು ತಮ್ಮ ಮೂಲಕ ಈ ಸಭೆಯನ್ನು ಕೇಳಿಕೊಳ್ಳುತ್ತೇನೆ. Under section 12 of the Karnataka Silk Worm Seed, Cocoon and Silk Yarn (Regulation of Production, Supply, Distribution and Sale) Act, 1959, the Director of Sericulture is vested with powers to impose penalty on persons who have contravened the provisions of section 3, 7, 8 and 8A of the said Act. The Act does not provide for the mode of recovery of such penalty from such persons. It is proposed to provide for the recovery of penalty and other amount due as arrears of Land Revenue.

It is also considered necessary to take power to make rules with retrospective effect. Hence I seek the approval of the Bill.

ಶ್ರೀ ವೈ. ರಾಮಕೃಷ್ಣ (ಆನೇಕಲ್). — ಸನ್ಮಾನ್ಯ ಉಪಾಧ್ಯಕ್ಷರೆ, ಈ ಬಿಲ್ಲನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಮಾನ್ಯ ಸಚಿವೆಯವರು ಈಗ ತಾನೇ ತಿಳಿಸಿದರು. ರೇಷ್ಮೆ ಇಲಾಖೆಯಿಂದ ರೇಷ್ಮೆ ಬೆಳೆಗಾರರಿಗೆ ಅಥವಾ rearಗೆ ಸಾಲವನ್ನು ಕೊಡುತ್ತೇವೆ. ಅದನ್ನು ರಿಕವರಿ ಮಾಡಿಕೊಳ್ಳುವುದಕ್ಕೆ ಈಗಿರತಕ್ಕ ಕಾನೂನಿನಲ್ಲಿ ಅವಕಾಶವಿಲ್ಲ. ಆದ್ದರಿಂದ ಈ ಒಂದು ತಿದ್ದುಪಡಿಯನ್ನು ತಂದು ತನ್ಮೂಲಕ ಕೊಟ್ಟಿರತಕ್ಕ ಸಾಲವನ್ನು ರಿಕವರಿ ಮಾಡುತ್ತೇವೆ ಎಂದು. ಇವರು ತಂದಿರತಕ್ಕ ಬಿಲ್

ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಏನಿದೆ ಎಂಬುದನ್ನು ಇವರೇ ಓದಿದ್ದಾರೆ. ಇವರು ಯಾವುದನ್ನು ಕಂದಾಯದ ಬಾಕಿ ಎಂದು ಪರಿಗಣಿಸುತ್ತಾರೆ? ಇವರು ಕೊಡತಕ್ಕ ಸಾಲವನ್ನು ಅಲ್ಲ. ಈಗ ರೈತರಿಗೆ ಕೊಟ್ಟಿರತಕ್ಕದ್ದು ಸಾಲ, ಕೋ–ಆಪರೇಟಿವ್ ಸೊಸೈಟಿಗಳು ಅಥವಾ ನ್ಯಾಷನಲೈಸ್ಡ್ ಬ್ಯಾಂಕಿನಿಂದ ಕೊಟ್ಟಿರತಕ್ಕ ಸಾಲವನ್ನು ಯಾವ ರೀತಿ ವಸೂಲ್ಮಾಡಬೇಕೆಂಬುದು ನಮಗೆ, ತಮಗೆ ಹಾಗೂ ಎಲ್ಲಾ ಮಾನ್ಯ ಸದಸ್ಯರಿಗೂ ಗೊತ್ತಿದೆ. ಡೈರೆಕ್ಟರ ರವರು ಹಾಕಿರತಕ್ಕ ದಂಡವನ್ನು ವಸೂಲ್ಮಾಡುವುದಕ್ಕೆ ಸೆಕ್ಷನ್ 3, 7, ಮತ್ತು 8ರಲ್ಲಿ ಏನು ಹೇಳಿದೆ ಎಂದರೆ :—

"(3) Regulation of Production etc. of Silkworm seed: No person shall produce, prepare, store, transport, sell or otherwise distribute or dispose of silkworm see except under and in accordance with the terms and conditions of a licence granted under this Act.

ಅವನಿಗೆ ಡೈರೆಕ್ಟರ್‌ರವರು ಫೈನನ್ನು ಹಾಕಿದರೆ ಆತನು ಸರ್ಕಾರಕ್ಕೆ ಅಪೀಲು ಮಾಡಿಕೊಳ್ಳುವುದಕ್ಕೆ ಅವಕಾಶ ಮತ್ತು ಅಧಿಕಾರ ಇದೆ. ಸರ್ಕಾರದವರು ಅದಕ್ಕೆ ದಂಡವನ್ನು ಹಾಕಲೇಬೇಕೆಂಬುದು ಹೇಳುವುದಾದರೆ ಅದನ್ನು ಯಾವ ರೀತಿ ನಿಗದಿ ಮಾಡಿಕೊಳ್ಳಬೇಕೆಂಬುದಕ್ಕೆ ಪ್ರಾವಿಷನ್ ಇಲ್ಲ. ಆದರೆ ಇದರಲ್ಲಿ ಏನಾಗಿದೆ? ಸೆಕ್ಷನ್ 3, 7. ಮತ್ತು 8ರಲ್ಲಿ ಏನಿದೆ ಇದು ಒಂದು ರೀತಿಯ ಆರ್ಬಿಟ್ರರಿ ಕ್ಲಾಸ್ ತರಹ ಇದೆ. ಇದರ ಮೇಲೆ ಲಾಯರ್‌ಗಳು ಯಾರೂ ವಾದ ಮಾಡುವಂತಿಲ್ಲ, ಕೋರ್ಟಿನಲ್ಲಿ ಇವನ ಪರವಾಗಿ ಯಾರೂ ವಕಾಲತ್ತು ವಹಿಸಿಕೊಂಡು ಹೋಗುವಂತಿಲ್ಲ. ಇಲ್ಲಿ ಡೈರೆಕ್ಟರ್‌ರವರಿಗೆ ಪೂರ್ಣ ಅಧಿಕಾರವನ್ನು ಕೊಟ್ಟಿದ್ದೇವೆ. ರೈತ ಅಥವಾ ಈ ಉದ್ಯಮದಲ್ಲಿ ಯಾರು ನಿರತನಾಗಿರುತ್ತಾನೆ ಅವನಿಗೆ ಕೂಡಲೇ ಫೈನ್ ಹಾಕಬೇಕು, ಇದು ಇವರು ಈ ದಿವಸ ಸಭೆಯ ಮುಂದೆ ತಂದಿರತಕ್ಕ ತಿದ್ದುಪಡಿ. ಇದನ್ನು ಯಾರೂ ಕೂಡ ಒಪ್ಪುವುದಿಲ್ಲ. ನಾನು ಮೊದಲೇ ಹೇಳಿದಂತೆ ಸರ್ಕಾರದಿಂದ ರೈತ ಸಾಲವನ್ನು ಕೆಲವು ಷರತ್ತುಗಳ ಮೇಲೆ ಪಡೆದು ಅದನ್ನು ಮತ್ತೆ ವಾಪಸ್ಸು ಕೊಡದಿದ್ದರೆ ಅವನ ಮೇಲೆ ಕ್ರಮ ತೆಗೆದುಕೊಂಡಾಗ ಅವನು ಸರ್ಕಾರಕ್ಕೆ ಅಪೀಲು ಹಾಕಿಕೊಳ್ಳುವುದಕ್ಕೆ ಅವಕಾಶ ಇದೆ. ಆದರೆ ಸರ್ಕಾರೀ ಅಧಿಕಾರಿಯೇ ಹಾಕಿದಂಥ ದಂಡವನ್ನು ಅವನು ಕೊಡದಿದ್ದರೆ ಲ್ಯಾಂಡ್ ರೆವಿನ್ಯೂ ಕೋಡ್ 161 ರಿಂದ 164ರವರೆಗಿನ ನಿಯಮದ ಪ್ರಕಾರ ಬೆಳೆಗಾರ ಯಾರಿದ್ದಾನೆ ಅವನ ಮನೆಯಲ್ಲಿರತಕ್ಕ ಎತ್ತು, ಗಾಡಿ ನೊಗ, ನೇಗಿಲು, ಅಥವಾ ಅವನ ಮನೆಯಲ್ಲಿರುವ ದವಸ ಧಾನ್ಯ, ಅಥವಾ ಬೇರೆ ರೀತಿಯ ಸಾಮಾನುಗಳನ್ನು ಏನು ಬೇಕಾದರೂ ಅಟ್ಯಾಚ್‌ಮೆಂಟ್ ಮಾಡಬಹುದು. ಅವನ ಚರಾಸ್ತಿ, ಅಥವಾ ಸ್ಥಿರಾಸ್ತಿಗಳನ್ನು ಅಟ್ಯಾಚ್‌ಮೆಂಟ್ ಮಾಡಬಹುದು. ಆದರೆ ಇಲ್ಲಿ ಲೈಸನ್ಸ್ ರಿನ್ಯೂ ಮಾಡುವುದನ್ನು ಮರೆತರೆ ಅವನಿಗೆ ದಂಡ ಹಾಕುವುದು ಸರಿಯೇ ಇದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಕೋರ್ಟ್‌ನಲ್ಲಿ ಕೂಡ ಮೊದಲು ಜಡ್ಜ್‌ಮೆಂಟ್ ಆಗುತ್ತದೆ, ಅದರ ಮೇಲೆ ಅವನು ಅಪೀಲು ಹೋಗುತ್ತಾನೆ, ಅನಂತರ ಡಿಕ್ರಿ ಆಗುತ್ತದೆ. ಅನಂತರ ಅಟ್ಯಾಚ್‌ಮೆಂಟ್ ಎಕ್ಸಿಕ್ಯೂಟ್ ಆಗುತ್ತದೆ. ಈ ಒಂದು ಆಧಾರದ ಮೇಲೆ ನಾವು ಕೊಡತಕ್ಕ ಲೋನ್‌ನ್ನು ರಿಕವರಿ ಮಾಡುತ್ತೇವೆಂದು ತಾವು ಹೇಳುವುದು ಸರಿಯಲ್ಲ, ಸಣ್ಣ ರೈತರು 19–15 ಗಂಟೆಯಲ್ಲಿ ರೇಷ್ಮೆ ಬೆಳೆಯನ್ನು ಇಟ್ಟುಕೊಂಡಿರುತ್ತಾರೆ. ಉದಾಹರಣೆಗೆ ನನ್ನ ತಾಲ್ಲೂಕಿನಲ್ಲಿ ಇರುವುದನ್ನೇ ಹೇಳುವುದಾದರೆ, ನನ್ನ ತಾಲ್ಲೂಕು ಸೀಡ್ ಏರಿಯ. ಅಲ್ಲಿ ಎಂ. 5ನ್ನೇ ಹಾಕಬೇಕೆಂದು ನಿಯಮ ಇದೆ. ಆದರೆ ಅಲ್ಲಿನ ರೈತರು ಏನು ಮಾಡುತ್ತಾರೆ ಎಂದರೆ ಹಳೇ ಮೈಸೂರು ಕಡ್ಡಿಯನ್ನು ಹಾಕುತ್ತಾರೆ. ಏಕೆ ಇದನ್ನು ಹಾಕುತ್ತೀರಿ ಎಂದು ಕೇಳಿದರೆ ಆ ರೈತರು ಏನು ಹೇಳುತ್ತಾರೆಂದರೆ ಸ್ವಾಮಿ, ಸಣ್ಣ ಸಣ್ಣ ಮರಿಗಳಿಗೆ ಈ ಸೊಪ್ಪನ್ನು ಹಾಕಿದರೆ ಚೆನ್ನಾಗಿ ತಿನ್ನುತ್ತವೆ. ಸ್ವಲ್ಪ ಅವು ಬೆಳೆದ ಮೇಲೆ ಎಂ. 5ನ್ನು ಹಾಕಿದರೆ ಚೆನ್ನಾಗಿ ತಿನ್ನುತ್ತವೆ ಎಂದು ಹೇಳುತ್ತಾರೆ. ಹಾಗಾದರೆ ಈ ರೈತರಲ್ಲಿ ಎಷ್ಟು ಅವರಿಗೆ ತಾವು ದಂಡವನ್ನು ಹಾಕಿದ್ದೀರಿ ಸ್ವಾಮಿ? ಈ ಜನರಿಗೆ ತಾವು ದಂಡವನ್ನು ಹಾಕಿದರೆ ಬಹಳ ಕಷ್ಟ ಇದೆ. ಮಾನ್ಯ ಉಪಾಧ್ಯಕ್ಷರೇ, ತಮ್ಮ ಕ್ಷೇತ್ರ ಕೂಡ ಇದರಲ್ಲೇ ಸೇರಿಕೊಂಡಿದೆ. ಸರ್ಕಾರದವರು ಕೊಡುವ ಕಷ್ಟವನ್ನು ನೋಡಿ ನಾವು ಈ ಬೆಳೆಯನ್ನು ಬೆಳೆಯುದೇ ಒಂದು ದೊಡ್ಡ ಅಪರಾಧ ಎನ್ನುವಂತಾಗಿದೆ ಎಂದು ಹೇಳುತ್ತಿದ್ದಾರೆ. ಈ ರೇಷ್ಮೆಯನ್ನು ಬೆಳೆಯುತಕ್ಕ ರೈತರಿಗೆ ಎಷ್ಟು ತೊಂದರೆ ಇದೆ ಎಂದರೆ ಒಂದು ಕಡೆ ಹೂಜಿ ನೊಣದ ಕಾಟ, ಇನ್ನೊಂದು ಕಡೆ ಇವರ ಕಾಟ ಮೊದಲು ಚೈನಾ ಸಿಲ್ಕನ್ನು ತರಿಸಿ ಅವರಿಗೆ ತೊಂದರೆ ಕೊಟ್ಟಿದ್ದಾಯಿತು. ಈ ಎಲ್ಲ ಕಾರಣಗಳಿಂದ ರೇಷ್ಮೆ ಉದ್ಯಮ ಬಹಳ ಕಷ್ಟದಲ್ಲಿದೆ ಸ್ವಾಮಿ. ಇತ್ತೀಚೆಗೆ ನಾನು ಚನ್ನಪಟ್ಟಣಕ್ಕೆ ಹೋಗಿದ್ದಾಗ ಅಲ್ಲಿ ವಿಚಾರಿಸಿದ್ದೇನೆ, ಮೊದಲು 4 ಸಾವಿರ ಕೆ.ಜಿ. ಬರುತ್ತಿದ್ದುದು ಇವತ್ತು 1 ಸಾವಿರ ಕೆ.ಜಿ.ಗೆ ಇಳಿದಿದೆ. ಪರಿಸ್ಥಿತಿ ಹೀಗಿರುವಾಗ ನಾವು ಈ ಒಂದು ಕಾನೂನು ತಂದು ಬಡ ಕೂಲಿಗಾರರ ಮೇಲೆ, ಬಡ ರೈತರ ಮೇಲೆ ದಂಡವನ್ನು ಹಾಕಿ ವಸೂಲ್ಮಾಡುತ್ತೇವೆಂದು ಹೊರಟರೆ ಅವರಿಗೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ತಾವು ಇದನ್ನು ದಯವಿಟ್ಟು ತರಬೇಡಿ. ಸೆಕ್ಷನ್ 3, 7. ಮತ್ತು 8

ಏನಿದೆ ಇದರಲ್ಲಿ ಪ್ರತಿಯೊಂದಕ್ಕೂ ಲೈಸನ್ಸ್ ಹೋಲ್ಡರ್ ಆಗಿರಬೇಕೆಂದಿದೆ. ಸೆಕ್ಷನ್ 4ರಲ್ಲಿ

"No person shall rear silkworms from a person who other than silkworm seed obtained from a peason who holds a licence under this Act."

ಎಲ್ಲೆಲ್ಲಿ ತಪ್ಪುಗಳನ್ನು ಮಾಡುವುದಕ್ಕೆ ಅವಕಾಶ ಇದೆ ಅಲ್ಲೆಲ್ಲಾ ಲೈಸನ್ಸ್ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ತಾವು ದಂಡ ಹಾಕುವುದಕ್ಕೆ ಅಧಿಕಾರ ಇದೆ. ಆದರೆ ದಂಡವನ್ನು ಹಾಕಲೇಬೇಕೆಂದು ಏನೂ ಇಲ್ಲ. ಫಾರೆಸ್ಟ್ ವಿಚಾರದಲ್ಲಿ ದಂಡವನ್ನು ಹಾಕಲೇಬೇಕೆಂದು ನಾವು ಒತ್ತಿ ಹೇಳಿದ್ದೇವೆ. ಆದರೆ ಸಣ್ಣ ಪುಟ್ಟ ತಪ್ಪುಗಳಿಗೆ ಅಂದರೆ ಲೈಸನ್ಸ್ ರಿನ್ಯೂ ಮಾಡಲಿಲ್ಲ, ಎಂ. 5ನ್ನು ಹಾಕಿದ್ದಾರೆ ಎಂದು ಹೇಳಿ ಅವರಿಗೆ ದಂಡವನ್ನು ಹಾಕುವುದು ಬೇಡ. ಅವರಿಗೆ ದೊಡ್ಡದಾಗಿ ದಂಡ ಹಾಕುವುದು ಬೇಡ. ಅವರ ಲೈಸನ್ಸ್‌ನ್ನು ಒಂದೆರಡು ತಿಂಗಳು ಟೆಂಪೊರರಿಯಾಗಿ ರದ್ದು ಮಾಡಿದರೆ ಅದೇ ಅವರಿಗೆ ಒಂದು ರೀತಿಯ ಶಿಕ್ಷೆಯಾದಂತಾಗುತ್ತದೆ. ಇದನ್ನು ತಾವು ಯೋಜನೆ ಮಾಡಬೇಕು. ಅದನ್ನು ಬಿಟ್ಟು ಲ್ಯಾಂಡ್ ರೆವಿನ್ಯೂ ಅರಿಯರ್ಸ್ ಎಂದು ಟ್ರೀಟ್ ಮಾಡಬೇಕೆಂದು ಹೇಳುವುದಾದರೆ ಜನರು ತಮ್ಮ ಮೇಲೆ ತಿರುಗಿ ಬೀಳುತ್ತಾರೆ. ನಿಮ್ಮ ಈ ನೀತಿ ಒಳ್ಳೆಯದಾಗುವುದಿಲ್ಲ. ಇವತ್ತು ತಮ್ಮ ಮಂತ್ರಿಮಂಡಲದಲ್ಲಿ ಸಿಲ್ಕ್ ವಿಚಾರದಲ್ಲಿ ಚೆನ್ನಾಗಿ ತಿಳಿದುಕೊಂಡಿರುವ ಅನುಭವೀ ಸಚಿವರು ಬಹಳ ಜನರು ಇದ್ದಾರೆ. ಅವರ ಸಲಹೆಗಳನ್ನು ತೆಗೆದುಕೊಳ್ಳಿ. ಅದು ಬಿಟ್ಟು ಈ ರೀತಿಯ ತಿದ್ದುಪಡಿಯನ್ನು ಸಭೆಯ ಮುಂದೆ ಏನು ತಂದಿದ್ದೀರಿ ಇದು ಬಹಳ ತಪ್ಪಾಗುತ್ತದೆ. ಬಡವರಿಗೆ ತೊಂದರೆಯಾಗುತ್ತದೆ. ಆದ್ದರಿಂದ ತಾವು ಇದನ್ನು ವಾಪಸ್ಸು ತೆಗೆದುಕೊಂಡು ಮತ್ತೊಮ್ಮೆ ಪರಿಶೀಲಿಸಿ ಸಭೆಯ ಮುಂದೆ ತನ್ನಿ ಎಂದು ಹೇಳಿ ಈ ತಿದ್ದುಪಡಿ ಮಸೂದೆಯನ್ನು ನಾನು ವಿರೋಧ ಮಾಡುತ್ತೇನೆ.

ಶ್ರೀಮತಿ ಚಂದ್ರಪ್ರಭಾ ಅರಸ್ (ಸಮಾಜ ಕಲ್ಯಾಣ ಮತ್ತು ರೇಷ್ಮೆ ಸಚಿವರು) — ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ಸದಸ್ಯರಾದ ಶ್ರೀ ವೈ. ರಾಮಕೃಷ್ಣರವರು ಹೇಳಿದ ಕಳಕಳಿ ಅರ್ಥವಾಯಿತು. ಆದರೆ ಸಣ್ಣ ರೈತರು, ಸಣ್ಣ ರೀಲರ್ಸ್ ಅಥವಾ ಇನ್ನಿತರ ಉದ್ದಿಮೆದಾರರಿಗೆ ಬಹಳವಾಗಿ ಈ ಒಂದು ಕಾನೂನನ್ನು ಉಲ್ಲಂಘನೆ ಮಾಡತಕ್ಕಂಥದ್ದಾಗಿರುತ್ತದೆ. ಯಾರು ಕಾನೂನಿನ ಚೌಕಟ್ಟಿನಲ್ಲಿ ಬಾರದೆ ಹೊರಗೆ ಅವರು ಅವ್ಯವಹಾರ, ವ್ಯಾಪಾರ ಮಾಡುವುದಕ್ಕೆ ಹೊರಟಿದ್ದಾರೆ ಅವರಿಂದ ಹೆಚ್ಚಿಗೆ ಈ ಒಂದು ಇಂಡಸ್ಟ್ರೀಗೆ ಧಕ್ಕೆ ಬರತಕ್ಕಂಥದ್ದಾಗಿರುತ್ತದೆ. ಉದಾಹರಣೆಗೆ ಮೊಟ್ಟೆ ಮಾರಾಟ ಮಾಡಲು ಲೈಸೆನ್ಸ್ ಇದ್ದರೆ ಅದರ ಪ್ರಕಾರ ಮೊಟ್ಟೆಯನ್ನು ಹೊರಗೆ ತೆಗೆದುಕೊಂಡು ಹೋಗಿ ಮಾಲನ್ನು ಮಾರಾಟ ಮಾಡಲು ಅವಕಾಶ ಇದೆ. ಇನ್ನಿತರ ಸಂದರ್ಭಗಳಲ್ಲಿ ಸಾಲ ಪಡೆದವರು, ಲೈಸೆನ್ಸ್ ಪಡೆಯದೆ ಇರುವವರು ಅವ್ಯವಹಾರ ಮಾರಾಟ ಮಾಡಿದರೆ ಕಾನೂನಿನ ಚೌಕಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲು ಅವಕಾಶವಿರುತ್ತದೆ. ಸಣ್ಣ ರೈತರು ಮತ್ತು ರೀಲರ್‌ಗಳನ್ನು ಗಮನದಲ್ಲಿಟ್ಟುಕೊಂಡೆ ಈ ಒಂದು ತಿದ್ದುಪಡಿಯನ್ನು ತರಲಾಗಿದೆ. ಉದಾಹರಣೆಗೆ ಹೇಳುವುದಾದರೆ ಕೆಲವಾರು ದಿವಸಗಳಿಂದ ಆಂಧ್ರದಿಂದ ರೇಷ್ಮೆ ಬರುತ್ತಿದೆ. ಅವರು ಅದನ್ನು ಹುರಿಮಾಡಿ ಟ್ವಿಸ್ಟೆಡ್ ಮಾಡಿರತಕ್ಕಂಥದು ಎಂದು ಹೇಳುತ್ತಾರೆ. ಕಾನೂನು ಪ್ರಕಾರ ರೇಷ್ಮೆಯನ್ನು ಮಾರಾಟ ಮಾಡುವಂತೆಯೇ ಇಲ್ಲ. ಮತ್ತೆ ಅವರು ಹೇಳುತ್ತಾರೆ ಇದು ಕಚ್ಚಾ ರೇಷ್ಮೆಯಲ್ಲ ಟ್ವಿಸ್ಟೆಡ್ ರೇಷ್ಮೆ ಎಂದು ಹೇಳುತ್ತಿರುತ್ತಾರೆ. ಇಂಥ ಒಂದು ಸಂದರ್ಭದಲ್ಲಿ ಫೈನ್ ಹಾಕಬೇಕಾಗುತ್ತದೆ. ಅಲ್ಲದೆ ಕೋರ್ಟಿಗೆ ಅವರನ್ನು ಎಳೆಯುವುದಕ್ಕೂ ಅವಕಾಶಗಳು ಇವೆ. ಸಣ್ಣ ಉದ್ದಿಮೆದಾರರು ರೈತರು ರೀಲರ್ಸ್ ಮೊಟ್ಟೆಯ ಗುಣಮಟ್ಟವನ್ನು ಕಾಪಾಡಿ ಮಾರಾಟ ಮಾಡುವುದಕ್ಕೆ ಅವಕಾಶ ಇದ್ದರೂ ಕಚ್ಚಾ ಮಾಲನ್ನು ಮಾರಾಟ ಮಾಡುವುದಕ್ಕೆ ಫೈನ್ ಹಾಕತಕ್ಕಂಥ ಒಂದು ಕಾನೂನನ್ನು ಒತ್ತಾಯ ಪೂರ್ವಕವಾಗಿ ಜಾರಿಗೆ ತರದೆ ಇದ್ದರೆ ಗುಣಮಟ್ಟವನ್ನು ಕಾಪಾಡುವುದು ಕಷ್ಟವಾಗುತ್ತದೆ.

ಶ್ರೀ ವೈ. ರಾಮಕೃಷ್ಣ.—ರೇಷ್ಮೆಯನ್ನು ಯಾರು ತಯಾರು ಮಾಡುವುದು. ಬಡರೈತರೇ ಅಲ್ಲವೆ?

ಶ್ರೀಮತಿ ಚಂದ್ರಪ್ರಭಾ ಅರಸ.— ಬೆಳೆಗಾರರು ಬೆಳೆಯತಕ್ಕಂಥ ಕಕೂನ ಅನ್ನೂ ಕೂಡ ಮಾರ್ಕೆಟ್ ಬಿಟ್ಟು ಹೊರಗಡೆ ಮಾರಾಟವಾಗ ಕೂಡದು ಎಂದು ಕಾನೂನು ಇದೆ. ಹಾಗೆ ಮಾಡಲು ಎಲ್ಲ ರೈತರಿಗೂ ಮತ್ತು ರೇಷ್ಮೆ ಬೆಳೆಗಾರರಿಗೂ ಸಾಧ್ಯವಾದಷ್ಟು ರಿಯಾಯಿತಿ ಸೌಲಭ್ಯಗಳನ್ನು, ಸಾಲ ಸವಲತ್ತುಗಳನ್ನು ಸರ್ಕಾರ ಮಾಡಿಕೊಡಬೇಕು ಎನ್ನುವ ದೃಷ್ಟಿಯೂ ಕೂಡ ಇದೆ. ಆದರೆ ಕಳಪೆ ಗುಣಮಟ್ಟದ್ದು ಬದಲು ಹಲವಾರು ಕಾರಣಗಳು ಇರುತ್ತವೆ. ಅಂಥದ್ದನ್ನೂ ಕೂಡ ಕಾನೂನಿನೊಳಗೆ ಒಳಪಡಿಸಬೇಕು ಎನ್ನುವ ದೃಷ್ಟಿಯಿಂದ ರಿಯಾಯಿತಿಗಳನ್ನು ಕೊಡಲು ಸರ್ಕಾರ ಮುಂದೆ ಬಂದಿದೆ. ಯಾರು ಈ ರೀತಿಯಲ್ಲಿ ಕ್ರಮಬದ್ಧವಾಗಿ ಮಾಡುತ್ತಾರೆ ಅವರಿಗೆ ಎಲ್ಲ ಅನುಕೂಲತೆಗಳು ದೊರೆಯುತ್ತವೆ. ಯಾರು ಕಾನೂನಿನ ವ್ಯಾಪ್ತಿಯನ್ನು ಬಿಟ್ಟು ಬೇರೆ ಅವ್ಯವಹಾರ ಮಾಡುವುದಕ್ಕೆ ಹೊರಟಿದ್ದಾರೆ ಅವರಿಗೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ಈ ಕಾನೂನಿನ ಚೌಕಟ್ಟಿನಲ್ಲಿ ಅವಕಾಶ ಇಲ್ಲದೆ ಇರುವುದರಿಂದ ಕಾನೂನಿಗೆ ತಿದ್ದುಪಡಿಯನ್ನು ತರಲಾಗಿದೆ.

ಶ್ರೀ ವೈ ರಾಮಕೃಷ್ಣ — ಕಂಟ್ರೋಲ್ ಮಾಡಬಾರದು ಎಂದು ಹೇಳುತ್ತಿಲ್ಲ. ಅರಿಯರ್ಸ್ ಕಲೆಕ್ಟ್ ಮಾಡತಕ್ಕಂಥದ್ದನ್ನು ಲ್ಯಾಂಡ್ ರೆವಿನ್ಯೂ ರೀತಿಯಲ್ಲಿ ಏತಕ್ಕೆ ತೋರಿಸುತ್ತಿದ್ದೀರಿ? ಅದನ್ನು ಆಲೋಚನೆ ಮಾಡಬೇಕೆಂದು ಹೇಳುತ್ತಿದ್ದೇನೆ. ಗುಣಮಟ್ಟವನ್ನು ಕಾಪಾಡುವುದಕ್ಕೆ ಹೋಗಬೇಡಿ ಎಂದು ನಾನು ಹೇಳುತ್ತಿಲ್ಲ. ಬರಬೇಕಾದ ಬಾಕಿ ವಸೂಲು ಮಾಡಲು ತಮ್ಮಲ್ಲಿ ಕಾನೂನು ಇರುತ್ತದೆ. ಲೈಸನ್ಸನ್ನು ಸಸ್ಪೆಂಡ್ ಮಾಡಿ?

ಶ್ರೀಮತಿ ಚಂದ್ರಪ್ರಭಾ ಅರಸ್.— ಮೋಡ್ ಆಫ್ ರಿಕವರಿ ಯಾವ ರೀತಿ ಆಗುತ್ತದೆ?

ಶ್ರೀ ವೈ. ರಾಮಕೃಷ್ಣ — ಲೈಸನ್ಸ್ ರದ್ದು ಮಾಡಿ. ಬಡ ರೈತರಿಗೆ, ನಿಮ್ಮ ಡೈರೆಕ್ಟರ್ ಫೈನ್ ಹಾಕಿಬಿಟ್ಟಿದ್ದೇವೆಂದು ಆದೇಶವನ್ನು ಹಿಡಿದುಕೊಂಡು ಬರುತ್ತಾರೆ. ನಿಮ್ಮ ಡೈರೆಕ್ಟರು ಮೈಸೂರು ಎಂ.5ನ್ನೇ ಬೆಳೆಯಬೇಕು ಎಂದು ಹೇಳುತ್ತಾರೆ. ದಪ್ಪ ಕಡ್ಡಿಯನ್ನು ಬೆಳೆದರೆ 10 ಸಾವಿರ ರೂಪಾಯಿಗಳ ದಂಡವನ್ನು ಹಾಕುತ್ತಾರೆ. ದಂಡವನ್ನು ಕಟ್ಟದಿದ್ದರೆ ಜಮೀನನ್ನೇ ಹರಾಜು ಮಾಡುತ್ತಾರೆ. ಅವರು ಫೈನ್ ಹಾಕಿಬಿಟ್ಟರೆ ಮನೆಯಲ್ಲಿರತಕ್ಕಂಥ ಆಸ್ತಿಪಾಸ್ತಿ, ಸಾಮಾನುಗಳನ್ನೆಲ್ಲ ಬೀದಿಗೆ ಹಾಕಿಬಿಡುತ್ತಾರೆ. ಆದ್ದರಿಂದ ತಾವು ದಯವಿಟ್ಟು ಸ್ವಲ್ಪ ಆಲೋಚನೆ ಮಾಡಬೇಕು.

ಶ್ರೀ ಎಂ. ಪಿ ಪ್ರಕಾಶ್.— ಅರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂ ಎಂದು ಹಾಕಿದಾಕ್ಷಣಕ್ಕೆ ತಹಸೀಲ್‌ದಾರರಿಗೆ ಕಂತು ಕೊಡಬಾರದೆಂದು ಏನೂ ಇಲ್ಲ. ಕಂತು ಕೊಡಲಿಕ್ಕೆ ಸಾಧ್ಯ ಇರುತ್ತದೆ. ಅದರ ಪ್ರಕಾರ ಲ್ಯಾಂಡ್ ರೆವಿನ್ಯೂ ವಸೂಲು ಮಾಡತಕ್ಕಂಥ ಕ್ರಮ ಇರುವುದರಿಂದ ಕಂತುಗಳನ್ನು ಕಟ್ಟಲಿಕ್ಕೂ ಅವಕಾಶ ಇದೆ.

ಶ್ರೀ ವೈ. ರಾಮಕೃಷ್ಣ.— ಗೌವರ್ನಮೆಂಟ್ ಸಾಲ ಎಂದು ತೆಗೆದುಕೊಂಡ ಮೇಲೆ ಅದನ್ನು ಅರಿಯರ್ಸ್ ಎಂದು ಕಲೆಕ್ಟ್ ಮಾಡಿ.

ಶ್ರೀಮತಿ ಚಂದ್ರಪ್ರಭಾ ಅರಸ್.— ಪೆನಾಲ್ಟಿ ಹಾಕಿ ರಿಕವರಿ ಮಾಡಬೇಕು ಎನ್ನುವುದೇ ಉದ್ದೇಶ ವಾಗಿರುತ್ತದೆ. ಉತ್ತಮ ಗುಣಮಟ್ಟದ ರೇಷ್ಮೆಗೂಡನ್ನು ಬೆಳೆಯಬೇಕು ಎನ್ನುವ ದೃಷ್ಟಿಯಿಂದ ಸೊಸೈಟಿಗಳ ಮುಖಾಂತರ ತೆಗೆದುಕೊಂಡ ಸಹಸ್ರಾರು ರೂಪಾಯಿಗಳು ಅವರಿಂದ ಬರಬೇಕು, ಮತ್ತೆ ಕೊಡಬೇಕು ಎನ್ನುವ ದೃಷ್ಟಿಯಿಂದ ಇಷ್ಟೊಂದು ರಿಯಾಯಿತಿಯನ್ನು ಕೊಡಲಾಗಿರುತ್ತದೆ.

ಶ್ರೀ ವೈ. ರಾಮಕೃಷ್ಣ.— ಬೇರೆ ಯಾವುದಾದರೂ ಒಂದು ರೀತಿಯಲ್ಲಿ ಆಕ್ಟನ್ನು ತೆಗೆದು ಕೊಂಡು ಬನ್ನಿ.

ಶ್ರೀಮತಿ ಚಂದ್ರಪ್ರಭಾ ಅರಸ್.— ಬೇರೆ ಯಾವ ರೀತಿಯಿಂದ ವಸೂಲು ಮಾಡಲು ಸಾಧ್ಯ ವಾಗುತ್ತದೆ?

ಶ್ರೀ ವೈ. ರಾಮಕೃಷ್ಣ.— ನೀವು ಹಣವನ್ನು ಬ್ಯಾಂಕ್‌ನಿಂದ ಕೊಡಿಸಿದ್ದೀರಿ. ಅವರು ವಸೂಲು ಮಾಡುತ್ತಾರೆ ಅವರು ಕೊಡದಿದ್ದರೆ ಫೈನ್ ಹಾಕುತ್ತಾರೆ,

R L Jalappa — That is there even in the Land Revenue Act now.

Sri M P. Prakash— "Any amount due to the Government under this Act, whether as fees, penalty or otherwise may, without prejudice to any other mode of collection, be recovered as an arrers of land revenue", it is one of the mode that is sugg sted. It doesn't shut the doors of collection by any other modes also. Even the arrears can also be paid in instalments as it has been done in execution case by the court.

Sri Y. Ramakrishna — Don't you think it will affect the natural justice? Here, where are they going to appoint the advocate?

Sri M P Prakash.— The penalty will be imposed after giving an opportunity to the person concerned.

Sri Y. Ramakrishna — It is before the executive authority and not before the judiciary. The penalty is imposed by the Director as land revenue.

Sri M.P. Prakash.— Under the Sales Tax Act it is treated as land revenue and payment of licence under the Arms Act also it is treated as land revenue.

Mr. Deputy Speaker.— Now, I will put the consideration motion to the vote of the House. The question is :

"That the Karnataka Silkworm seed, cocoon and silk yarn (Regulation of production, supply, distribution and sale) (Amendment) Bill, 1984 be taken into consideration."

The motion was adopted.

CLAUSES 2 to 4

Mr. **Deputy Speaker.**— The question is :

"That Clauses 2 to 4 both inclusive do stand part of the Bill."

The motion was adopted and Clauses 2 to 4 both inclusive were added to the Bill.

Clause 1, Etc.

Mr. Deputy Speaker.— The question is :

"That Clause 1, the Long Title, The preamble and the Enacting Formula do stand part of the Bill."

The motion was adopted and Clause 1, the long title the preamable and the enacting formula were added to the Bill.

MOTION TO PASS

Smt Chandaprabha Urs.— Sir, I beg to move.

"That the Karnataka Silkworm, seed, Cocoon and Silk yarn (Regulation of production, supply, distribution and sale Amendment) Bill, 1984 be passed."

Mr. Deputy Speaker.— The question is :

"That the Karnataka Silkworm seed, cocoon and silk yarn (Regulation of production, supply, distribution and sale) (Amendment) Bill, 1984 be passed."

The motion was adopted and the Bill was passed

The Karnataka Municipal Corporations and Certain other Laws Amendment Bill, 1984

Motion to Consider

ಶ್ರೀ ಎಂ ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).— ಮಾನ್ಯ ಅಧ್ಯಕ್ಷರೇ, 1984ನೇ ಇಸವಿಯ ಕರ್ನಾಟಕ ಪುರಸಭಾ ನಿಗಮ ಮತ್ತು ಇತರ ನಿರ್ದಿಷ್ಟ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಗಿದೆ.

ಶ್ರೀ ಎಂ. ಚಂದ್ರಶೇಖರ್. ಮಾನ್ಯ ಅಧ್ಯಕ್ಷರೇ, ಕೆಲವಾರು ಪುರಸಭೆಗಳ, ನಗರಸಭೆಗಳ, ಪ್ರಾಧಿಕಾರಿಗಳ ಹಾಗೂ ನಿಗಮಗಳ ವಶದಲ್ಲಿರುವಂತಹ ಜಮೀನುಗಳ ಮೇಲೆ ಯಾರಾದರೂ ಅನಧಿಕೃತವಾಗಿ ವಾಸ ಮಾಡುತ್ತಿದ್ದರೆ, ಅಂಥಾದ್ದನ್ನು ಕಾನೂನುಬಾಹಿರವಾಗಿ ಮಾಡಬೇಕೆಂದುಕೊಂಡು ಈ ತಿದ್ದುಪಡಿ ವಿಧೇಯಕವನ್ನು ತಂದಿದ್ದೇವೆ. ಇದುವರೆಗೆ ಸಾಮಾನ್ಯವಾಗಿ ಕರ್ನಾಟಕ ಪಬ್ಲಿಕ್ ಪ್ರಿಮಿಸಸ್ ಆಕ್ಟಿನ ಮುಖಾಂತರ ಅನಧಿಕೃತವಾಗಿ ವಾಸ ಮಾಡುತ್ತಿರುವವರಿಗೆ ನೋಟೀಸ್ ಕೊಟ್ಟು ಆ ಜಾಗವನ್ನು ತೆರವು ಮಾಡಿಸಲಾಗುತ್ತಿತ್ತು. ಆದರೆ ಈ ಕಾನೂನು ಅಷ್ಟಾಗಿ ಫಲಕಾರಿಯಾಗಲಿಲ್ಲವೆಂಬುದನ್ನು ಗಮನದಲ್ಲಿ ತೆಗೆದುಕೊಂಡು 1981 ರಲ್ಲಿ Karnataka Slum Areas (Improvement and Clearance) Act, 1973 ಇದಕ್ಕೆ ಒಂದು ತಿದ್ದುಪಡಿಯನ್ನು ತರಲಾಯಿತು. ಈ ತಿದ್ದುಪಡಿಯಲ್ಲಿ 5 ಸಾವಿರ ರೂಪಾಯಿಗಳ ದಂಡ ಮತ್ತು 3 ವರ್ಷಗಳ ಕಾಲ ಸಜಾ ವಿಧಿಸಬಹುದೆಂದು ಹೇಳಿದೆ ಇದು ಈಗಾಗಲೇ ಈ ಮನೆಯಲ್ಲಿ ಪಾಸಾಗಿದೆ. ಈಗ ಇದರ ಜೊತೆಗೆ ಬೇರೆ ಬೇರೆ ನಿಗಮಗಳು, ಮಹಾನಗರಪಾಲಿಕೆಗಳು, ಪುರಸಭೆಗಳು ಏನಿವೆ, ಇವುಗಳಿಗೆ ಸೇರಿದ ಆಸ್ತಿಯಲ್ಲಿ ಯಾರೂ ಸಹ ಅನಧಿಕೃತವಾಗಿ ವಾಸ ಮಾಡದಂತೆ ತಡೆಗಟ್ಟಬೇಕೆಂದುಕೊಂಡು ಒಂದು ಸಮಗ್ರವಾದಂಥ ಮಸೂದೆಯನ್ನು ತರಲಾಗಿದೆ. ಇದರಲ್ಲಿ The City of Mysore Improvement Act, 1903, Karna-